ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮೇ 2019 ಬೆಲೆ ರೂ.5/-



## ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯ ಮಹೋತ್ಸವ, ತಿರುಮಲೆ

13-05-2019 ರಿಂದ 15-05-2019 ರ ವರೆಗೆ

(ವೈಶಾಖ ಶುದ್ಧ ನವಮಿ, ದಶಮಿ, ಏಕಾದಶಿಯಂದು ನಡೆಯುತ್ತದೆ)



ತಿರುಮಲ ತಿರುಪತಿ ದೇವಸ್ಥಾನಗಳು

# ತಿರುಪತಿ
# ಶ್ರೀ ಗೋವಿಂದರಾಜ ಸ್ವಾಮಿಯವರ
# ಬ್ರಹ್ಮೋತ್ಸವಗಳು

**11-05-2019 ರಿಂದ 19-05-2019 ರ ವರೆಗೆ**

**11-05-2019 ಶನಿವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**12-05-2019 ಭಾನುವಾರ**
ಹಗಲು: ಚಿಕ್ಕ ಶೇಷವಾಹನ
ರಾತ್ರಿ: ಹಂಸವಾಹನ

**13-05-2019 ಸೋಮವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**14-05-2019 ಮಂಗಳವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**15-05-2019 ಬುಧವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**16-05-2019 ಗುರುವಾರ**
ಹಗಲು: ಹನುಮದ್ವಾಹನ
ಸಾಯಂಕಾಲ: ವಸಂತೋತ್ಸವ
ರಾತ್ರಿ: ಗಜವಾಹನ

**17-05-2019 ಶುಕ್ರವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**18-05-2019 ಶನಿವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**19-05-2019 ಭಾನುವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ



ಕೇಳನೋ ಹರಿ ತಾಳನೋ ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ

ತಂಬೂರಿ ಮೊದಲಾದ ಅಖಿಲ ವಾದ್ಯಗಳಿದ್ದು ಕೊಂಬು ಕೊಳಲು ಧ್ವನಿ ಸ್ವರಗಳಿದ್ದು

ತುಂಬುರು ನಾರದರ ಗಾನ ಕೇಳುವ ಹರಿ ನಂಬಲಾರ ಈ ಡಂಭದ ಕೂಗಾಟ

ನಾನಾ ರಾಗ ಭಾವ ತಿಳಿದು ಸ್ವರ ಜ್ಞಾನ ಮನೋಧರ್ಮ ಜಾತಿ ಇದ್ದು

ದಾನವಾರಿಯ ದಿವ್ಯನಾಮ ರಹಿತವಾದ ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು

ಅಡಿಗಡಿಗಾನಂದ ಬಾಷ್ಪ ಪುಳಕದಿಂದ ನಡೆ ನುಡಿಗೆ ಶ್ರೀಹರಿ ಹರಿ ಎನ್ನುತ

ದೃಢ ಭಕ್ತರನು ಕೂಡಿ ಹರಿ ಕೀರ್ತನೆಯ ಪಾಡಿ ಕಡೆಗೆ ಪುರಂದರ ವಿಠಲನೆಂದರೆ ಕೇಳ್ವ

- ಶ್ರೀ ಪುರಂದರದಾಸರು

---

ಯಃ ಶಾಸ್ತ್ರವಿಧಿ ಮುತ್ಸೃಜ್ಯ ವರ್ತತೇ ಕಾಮಕಾರತಃ ।

ನ ಸ ಸಿದ್ಧಿ ಮವಾಪ್ನೋತಿ ನ ಸುಖಂ ನ ಪರಾಂಗತಿಮ್ ॥

- (ಶ್ರೀ ಮದ್ಭಗವದ್ಗೀತೆ ಅಧ್ಯಾಯ - 16, ಶ್ಲೋಕ -23)



ಯಾವನು ಶಾಸ್ತ್ರದ ನಿಯಮವನ್ನು ಕಡೆಗಂಡು ತನ್ನ ಮನಸ್ಸು ಬಂದಂತೆ ನಡೆಯುವನೋ ಅವನು ಮೋಕ್ಷಕ್ಕೆ ತಕ್ಕ ಯೋಗ್ಯತೆಯನ್ನು ಪಡೆಯುವುದಿಲ್ಲ. ಅವನಿಗೆ ಈ ಲೋಕದ ಸುಖವೂ ಇಲ್ಲ ; ಮೋಕ್ಷವೂ ಇಲ್ಲ.

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಅವಿದಿತನಿಜಯೋಗಕ್ಷೇಮ ಮಾತ್ಮಾನಭಿಜ್ಞಂ ಗುಣಲವರಹಿತಂ ಮಾಂ ಗೋಪ್ತು ಕಾಮಾ ದಯೇ ತ್ವಂ ।
ಪರವತಿ ಚತುರೈಸ್ತೇ ವಿಭ್ರಮೈಃ ಶ್ರೀನಿವಾಸೇ ಬಹುಮತಿ ಮನಪಾಯಾಂ ವಿಂದಸಿ ಶ್ರೀಧರರಣ್ಯೋಃ ॥32॥

ಹಿಂದೆ ಎಂದೂ ಹೊಂದದೆ ಇರುವ ಹೊಸದೊಂದು ವಸ್ತುವಿನ ಪ್ರಾಪ್ತಿಯನ್ನು "ಯೋಗ" ವೆಂದೂ, ಪ್ರಾಪ್ತವಾದ ವಸ್ತುವನ್ನು ಸರಿಯಾದ ರೀತಿಯಲ್ಲಿ ಕಾಪಾಡಿಕೊಂಡು ಪ್ರಯೋಜನ ಹೊಂದುವುದನ್ನು "ಕ್ಷೇಮ" ವೆಂದೂ ಶಾಸ್ತ್ರಕಾರರು ಹೇಳಿರುತ್ತಾರೆ. ಕರ್ಮಗಳು ತೊಲಗಿ ಮೋಕ್ಷವು ಬೇಕೆಂದು ಆಶೆಪಡುವವನಿಗೆ ಉಂಟಾಗುವ ಸದಾಚಾರ್ಯ ಮೂಲವಾದ ತತ್ವ-ಹಿತ-ಪುರುಷಾರ್ಥಗಳ ಅರಿವನ್ನು ಯೋಗವೆಂದೂ,ತಿಳಿದುಕೊಂಡಿರುವಂತೆ ತನಗನುರೂಪವಾದ ಹಿತವನ್ನು ಅನುಷ್ಠಿಸಿ ಪುರುಷಾರ್ಥ ಪಡೆಯುವುದನ್ನು ಕ್ಷೇಮವೆಂದೂ ಹಿರಿಯರು ಹೇಳುವರು.ಯೋಗಕ್ಷೇಮಗಳು ನನಗೆ ಯಾವುವೆಂಬುದನ್ನೇ ಅರಿಯದವನು ನಾನು. ಅದನ್ನು ತಿಳಿಯಲು ಆತ್ಮಜ್ಞಾನವು ಮುಖ್ಯ ಕಾರಣವು. ತನ್ನ ಆತ್ಮವು ಇಂತಹುದೆಂದು ಅದರ ಪರಿಸ್ಥಿತಿಯ ತಿಳಿದಾಗಲೇ ಅದರ ಯೋಗ ಕ್ಷೇಮವೂ ಇಂತಹುದೆಂದು ತಿಳಿಯಲು ಸಾಧ್ಯ. ಅಂತಹ ಆತ್ಮಜ್ಞಾನವೂ ನನಗಿಲ್ಲ. ಆತ್ಮಜ್ಞಾನವುಂಟಾಗಬೇಕಾದರೆ ಸತ್ವ ಗುಣವು ತಲೆಯೆತ್ತಿ ಅದರಿಂದ ಒಳ್ಳೆಯ ಗುಣಗಳುಂಟಾಗಬೇಕು. ಅಂತಹ ಗುಣಗಳಲ್ಲಿ ಒಂದಾದದರೂ ನನ್ನಲಿಲ್ಲ. ಇಂತಹ ನನ್ನನ್ನು ಕಾಪಾಡುವುದಕ್ಕಾಗಿ ನೀನು ನಿಶ್ಚಯಿಸಿ ನಿನ್ನ ಮಧುರವಾದ ಮಾತುಗಳಿಂದಲೂ, ವಿಲಾಸಗಳಿಂದಲೂ ನಿನ್ನ ಭರ್ತೃವಾದ ಶ್ರೀನಿವಾಸನನ್ನು ನಿನಗೆ ಅಧೀನನನ್ನಾಗಿ ಮಾಡಿಕೊಳ್ಳುವಾಗ ನಿನ್ನ ಸವತಿಯರಾದ ಶ್ರೀದೇವಿಯೂ, ಭೂದೇವಿಯೂ ನಿನ್ನ ಸಾಮರ್ಥ್ಯವನ್ನು, ಆಶ್ರಿತರ ವಿಷಯವಾಗಿ ನೀನು ವಹಿಸಿರುವ ಶ್ರದ್ಧೆಯನ್ನು, ಭರ್ತೃವಾದ ಶ್ರೀನಿವಾಸನನ್ನು ವಶೀಕರಿಸಿಕೊಳ್ಳುವ ರೀತಿಯನ್ನೂ ನೋಡಿ, ನಿನ್ನಲ್ಲಿ ಸ್ಥಿರವಾಗಿ ನೆಲೆಸಿರುವಂತಹ ಬಹುಮತಿ (ಗೌರವ)ಯನ್ನು ಸಲ್ಲಿಸುತ್ತಾರೆ. - ಎಂದು ಆಚಾರ್ಯರು ದಯೆಯನ್ನು ಹೊಗಳುತ್ತಾರೆ. ಸ್ತ್ರೀಯರು ಸಪತ್ನಿಯರಿಂದ ಬಹುಮಾನಿತರಾಗುವುದು. ಅತ್ಯಂತ ದುರ್ಲಭವಾದುದಲ್ಲವೆ!

ಈಶ್ವರನೂ,ಅವನ ಪತ್ನಿಯೇ ಮೊದಲಾದ ಸಮಸ್ತ ಪರಿವಾರವೂ ಸಂಸಾರಿಗಳಾದ ಚೇತನರನ್ನು ಕಾಪಾಡುವ ವಿಷಯದಲ್ಲಿ ಅತ್ಯಂತ ಶ್ರದ್ಧೆಯುಳ್ಳವರು.ಅದಕ್ಕಾಗಿಯೇ ಅವರ ಹಲವಾರು ರೀತಿಗಳಿಂದ ಪ್ರಯತ್ನಿಸುವರು. ಹೀಗಿರುವಾಗ, ಈಚೇತನರ ಸಂರಕ್ಷಣೆಯ ವಿಷಯದಲ್ಲಿ ದಯಾದೇವಿಗೇ ಮೊದಲನೆಯ ಸ್ಥಾನವನ್ನು ಕೊಡಬೇಕು. ದಯಾದೇವಿಯಿಲ್ಲದಿದ್ದರೆ ಮಹಾಪರಾಧಿಗಳಾದ ಸಂಸಾರಿಗಳಿಗೆ (ಈಶ್ವರನ ಕೋಪವು ಶಾಂತವಾಗಿ) ಉಜ್ಜೀವಿಸುವ ದಾರಿಯೇ ಇಲ್ಲ. ಆದ್ದರಿಂದಲೇ ಶ್ರೀ ಭೂದೇವಿಯರು ಇದನ್ನು ಗಮನಿಸಿ ದಯೆಯನ್ನು ಬಹುಮಾನಿಸುವರೆಂಬ ಪರಿಸ್ಥಿತಿಯಿಂದ ದಯೆಗೆ ಪ್ರಾಧಾನ್ಯವೆಂಬುದೇ ಇಲ್ಲಿನ ಶಾಸ್ತ್ರರ್ಥ.




ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 49 ಸಂಚಿಕೆ -12

ಶ್ರೀ ವಿಕಾರಿನಾಮ ಸಂವತ್ಸರ
ಚೈತ್ರ - ವೈಶಾಖಮಾಸ
ಸಂಚಿಕೆ

## ಮೇ 2019




## ವಿಷಯಸೂಚಿಕೆ


ಸಂಪಾದಕೀಯ 6

ಹಸಿರುತೋರಣ

ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ ವೈಭವ 7
- ಕೆ. ನರಸಿಂಹಮೂರ್ತಿ

ಅಕ್ಷಯ ತೃತೀಯ ವಿಶೇಷ ಲೇಖನ 11
- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

ಶಂಕರಚಾರ್ಯರು ಭುವಿಯಲ್ಲಿ ಅವತರಿಸಿದ ಪುಣ್ಯ ದಿನ 17
- ಶ್ರೀಮತಿ. ಸುಮಚಂದ್ರಶೇಖರ್

ಪ್ರಶ್ನೋಪನಿಷತ್ 21
- ಶ್ರೀಮತಿ. ಎ. ಗೀತ ವೀರರಾಘವನ್

ಆಚಾರ್ಯ ಮಧ್ವರು ಸಂದರ್ಶಿಸಿದ ತಾಣಗಳು 23
- ವಿದ್ವಾನ್. ಜಿ. ಗೋಪಾಲಾಚಾರ್

ಯತಿರಾಜ ರಾಮಾನುಜಾಚಾರ್ಯರು 31
- ಶ್ರೀಮತಿ. ಕೆ. ವಿ. ಪದ್ಮಾವತಿ

ತಿರುಪತಿ ಶ್ರೀ ವೆಂಕಟೇಶ್ವರ
- ದಿ॥ ಬಿ.ಎನ್. ಶ್ರೀನಿವಾಸನ್ 35

ದಕ್ಷಯಜ್ಞ ವಿಧ್ವಂಸ 38
- ಡಿ.ಎಸ್.ಬದ್ರಿನಾಥ್

ಶ್ರೀ ಅಳಘು ಮಲ್ಲಾರಿ ಕೃಷ್ಣಸ್ವಾಮಿ ದೇವಾಲಯ 41
- ಶ್ರೀಮತಿ. ಎಸ್. ಸುರೇಖ

ವಿಜಯದ ಜೀವನಾಡಿ 45
- ಡಿ.ಎಸ್. ಭೂಮಿಕ

ವ್ಯಾಧಿಗಳಿಗೆ ಬ್ರಹ್ಮಾಸ್ತ್ರ ಉತ್ತರೇಣಿ 47
- ಶ್ರೀಮತಿ

ದೇವರ ಪೂಜೆ - ಮಂತ್ರ ತಂತ್ರ 49
- ಬಿ.ಆರ್. ಶ್ರೀಕಂಠಯ್ಯ


ಮುಖಚಿತ್ರ - ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ, ತಿರುಮಲೆ

ಹಿಂಬದಿಚಿತ್ರ - ಉಭಯದೇವಿಯರೊಂದಿಗೆ ಶ್ರೀ ಗೋವಿಂದರಾಜಸ್ವಾಮಿಯವರು, ತಿರುಪತಿ


**ಗೌರವ ಸಂಪಾದಕರು**

ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ, ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**

ಡಾ॥ ಕೆ. ರಾಧಾರಮಣ ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**

ಡಾ॥ ವಿ. ಜಿ. ಚೊಕ್ಕಲಿಂಗಂ ಎಮ್.ಎ.ಪಿಎಚ್.ಡಿ.

**ಮುದ್ರಣ**

ಶ್ರೀ ಆರ್. ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

ಶ್ರೀ ಪಿ. ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**

ಡಿ.ಟಿ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ:**

ಶ್ರೀ ಪಿ.ಎನ್. ಶೇಖರ್,
ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ. ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

**ಇತರ ವಿವರಗಳಿಗೆ**

ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

**24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ**
0877 - 2277777, 2233333

ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ/ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು **www.tirumala.org** ಮೂಲಕ ವೀಕ್ಷಿಸಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

ಸಂಪಾದಕೀಯ

# ನಮ್ಮಾಳ್ವಾರರ ಪ್ರಪತ್ತಿಮಾರ್ಗದಲ್ಲಿ

"ವೃಷಭೇತು ವಿಶಾಖಾಯಾಂ ಕುರುಕಾಪುರ ಕಾರಿಣಂ, ಪಾಂಡ್ಯದೇಶೇ ಕಲೇರಾದೌ ಶಠಾರಿಂ ಸೈನಪಂ ಭಜೇ"-ಇವರು ಪ್ರಮಾದಿನಾಮ ಸಂವತ್ಸರದ, ವೃಷಭಮಾಸದಲ್ಲಿ, ವಿಶಾಖಾನಕ್ಷತ್ರದಲ್ಲಿ ಶುಕ್ಲಚತುರ್ದಶಿ ಶುಕ್ರವಾರ, ಪಾಂಡ್ಯದೇಶದಲ್ಲಿ ವಿಷ್ವಕ್ಸೇನನ ಅಂಶದಿಂದ ಜನಿಸಿದರು. ಇವರಿಗೆ ಮಾರನ್. ಶಠಾರಿ, ಶಠರಿಪುಡು, ಶಠಕೋಪಿ, ಪರಾಂಕುಶಮುನಿ, ಯತೀಂದ್ರ ಎಂಬ ಬಿರುದುಗಳು ಇವೆ. ಇವರು ರಚಿಸಿರುವ ನೂರು ಪಾಶುರಗಳಿರುವ ತಿರುವಿರುತ್ತಂ, ಏಳು ಪಾಶುರಗಳಿರುವ ತಿರುವಾಶಿರಿಯಂ, 87 ಪಾಶುರಗಳಿರುವ ಪೆರಿಯತಿರುವಂದಾದಿ, '1102 ಪಾಶುರಗಳಿರುವ ತಿರುವಾಯ್‌ಮೊಳಿ ಪ್ರಬಂಧದಲ್ಲಿ 87 ಪಾಶುರಗಳಿರುವ ಪೆರುಯತಿವಂದಾದಿ ಪ್ರಬಂಧವನ್ನು ತಿರುಮಲೇಶನ ಬ್ರಹ್ಮೋತ್ಸವದಲ್ಲಿ ಹನುಮಂತವಾಹನ, ಗಜವಾಹನ ಸೇವೆಯಲ್ಲಿ 100 ಪಾಶುರಗಳನ್ನು ತಿರುವಿರುತ್ತಂ ಪ್ರಬಂಧವನ್ನು ಮೋಹಿನಿಅವತಾರ, ಗರುಡವಾಹನ ಸೇವೆಯಲ್ಲಿ ಪಾರಾಯಣ ಮಾಡುತ್ತಾರೆ.

ಇವರ ತಂದೆ ಉದಯನಂಗೈ, ತಾಯಿ ಕಾರಿ, ಇವರು ತಮ್ಮ ಮಗನಿಗೆ "ಮಾರನ್" (ಮನ್ಮಥ). ಎಂದು ಹೆಸರಿಟ್ಟರು. ಇವರು ಹುಟ್ಟಿದ ಕೂಡಲೇ ಭಗವಂತನನ್ನು ಧ್ಯಾನಿಸುತ್ತಾ ಸಮಾಧಿ ಸ್ಥಿತಿಗೆ ಹೊರಟುಹೋದರು. ಅವರು ಹುಟ್ಟಿದಾಗ ಅಳಲೇ ಇಲ್ಲ., ತಾಯಿಯ ಹಾಲನ್ನೂ ಕುಡಿಯಲಿಲ್ಲ. ಕಾರಿ ದಂಪತಿಗಳು ಯಾವುದೇ ಚಲನವಿಲ್ಲದ ಮಗುವನ್ನು ಊರಿನಲ್ಲಿರುವ ಆದಿನಾಥ ಸ್ವಾಮಿಯ ಮಂದಿರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಏನೂ ಮಾಡಲು ತೋಚದೆ 'ಸ್ವಾಮಿಯೇ ದಿಕ್ಕು' ಎಂದು ಹೇಳಿ, ಎದಿರಿಗಿರುವ ಹುಣಿಸೇಮರಕ್ಕೆ ಕಟ್ಟಿದ್ದ ಉಯ್ಯಾಲೆಯಲ್ಲಿ ಮಲಗಿಸಿ ಹೊರಟುಹೋದರು. ಆಹಾರಪಾನೀಯಗಳು ಇಲ್ಲದಿದ್ದರೂ ಮಾರನ್ ದಿನೇ ದಿನೇ ಬೆಳೆಯತೊಡಗಿದ. ಆ ರೀತಿ ಎಂಟು ವರ್ಷಗಳು ಕಳೆದುವು. ಬಾಲಕೃಷ್ಣನಂತೆ ಇದ್ದ ಮಾರನ್ ಅನ್ನು ನೋಡಿ ಭಕ್ತರು ಮುದ್ದಿನಿಂದ ಭಗವಂತನ ಸೇವೆಯಲ್ಲಿ ಅರ್ಚಿಸಲ್ಪಟ್ಟ ಹೂವನ್ನು ಅವರ ತಲೆಗೆ ಅಲಂಕರಿಸುತ್ತಿದ್ದರು. ಎಂದೂ ಬಾಡಿಹೋಗದ ಅರಳಿ ಹೂಗಳನ್ನು ಧರಿಸಿದ್ದರಿಂದ ಅವರಿಗೆ 'ವಕುಳಾಭರಣ' ಎಂದು ಹೆಸರು ಬಂತು.

ಆದಿನಾಥಸ್ವಾಮಿಯೇ ಸ್ವತಹಾ ಇವರು 'ನಮ್ಮಆಳ್ವಾರು' ಎಂದರು. ತಮಿಳಿನಲ್ಲಿ ನಮ್ಮ ಆಳ್ವಾರು ಅಂದರೆ ಪರಿವಾರದಲ್ಲಿನ ಒಬ್ಬರು ಎಂದರ್ಥ. ಭಗವಂತನ ಕೃಪಾಕಟಾಕ್ಷದಿಂದ ನಮ್ಮಾಳ್ವಾರರು ಬೆಳೆದು ದೊಡ್ಡವರಾದರು. ನಮ್ಮಾಳ್ವಾರರು ಭಗವಂತನನ್ನೇ ತಾಯಿಯೆಂದು ಭಾವಿಸಿದರು. ತನ್ನನ್ನೇ ನಂಬಿಕೊಂಡ ನಮ್ಮಾಳ್ವಾರರಿಗೆ ಅನ್ನ ಪಾನೀಯಗಳ ಅಗತ್ಯವಿಲ್ಲದಂತೆ ತನ್ನ ಅಮೃತಮಯವಾದ ಕೃಪಾಕಟಾಕ್ಷದಿಂದ ದೇವರೇ ಪೋಷಿಸಿದ. ನಮ್ಮಾಳ್ವಾರರಿಂದಲೇ ಭಾಗವತಧರ್ಮವಾದ ಪ್ರಪತ್ತಿ ಮಾರ್ಗ (ಶರಣಾಗತಿ) ಶ್ರೀ ವೈಷ್ಣವ ಸಂಪ್ರದಾಯವಾಗಿ ನಿಂತಿತು.

ನಮ್ಮಳ್ವಾರರು 16 ವರ್ಷಗಳಿಂದ ಹುಣಿಸೆ ಮರದ ಕೆಳಗೇ ಅನ್ನಪಾನೀಯಗಳಿಲ್ಲದೇ ಭಗವದ್ಗುಣಾನು ಸಂಧಾನ ಮಾಡುತ್ತಾ ನಿರಂತರವಾಗಿ ತಪಸ್ಸಿನಲ್ಲೇ ಮುಳುಗಿದ್ದರು. ಇವರ ಸಹಜಜ್ಞಾನತಪೋವೈರಾಗ್ಯ ಭಕ್ತಿ ಪ್ರಪತ್ತಿಗಳಿಗೆ ಮೆಚ್ಚಿ ದಿವ್ಯದೇಶಗಳಲ್ಲಿನ ಅರ್ಚಾಮೂರ್ತಿಗಳೆಲ್ಲರೂ ಸಾಕ್ಷಾತ್ಕರಿಸಿದರು. ಎಂದೂ ಹುಣಿಸೇ ಮರವನ್ನು ಬಿಟ್ಟು ಹೋಗದ ನಮ್ಮಾಳ್ವಾರರು ದಿವ್ಯದೇಶಗಳನ್ನು ಅಂದರಲ್ಲಿನ ದಿವ್ಯಮಂಗಳ ವಿಗ್ರಹಮೂರ್ತಿಗಳನ್ನು ತಮಿಳಿನಲ್ಲಿ ಸುಂದರವಾದ ಮಧುರಕವಿತೆಗಳಿಂದ ವರ್ಣಿಸಿದರು. ಈ ಭಗವದ್ದರ್ಶನದ ಅನುಭವಗಳೇ 'ತಿರುವಾಯ್‌ಮೊಳಿ' ಎಂಬ ಪ್ರಬಂಧವಾಗಿ ಪ್ರಸಿದ್ಧಿ ಪಡೆದಿದೆ. ಇವರು ತಮ್ಮ 36 ನೆಯ ವರ್ಷದಲ್ಲಿ ಅವತಾರ ಸಮಾಪ್ತಿ ಮಾಡಿ, ಪರಮ ಪದವನ್ನು ಪಡೆದುಕೊಂಡರು.

ಇವರ ವರ್ಷತಿರುನಕ್ಷತ್ರದ ಸಂದರ್ಭದಲ್ಲಿ ಅವರ ಜನ್ಮ ತಿಥಿಗೆ ಹತ್ತುದಿನಗಳ ಮೊದಲೇ ಇವರಿಗೆ ಉತ್ಸವ ಪ್ರಾರಂಭವಾಗಿ ಹತ್ತು ದಿನಗಳ ಕಾಲ ಉತ್ಸವಗಳನ್ನು ಆಚರಿಸುತ್ತಾ, ಆ ದಿನಗಳಲ್ಲಿ ಶಾತ್ತುಮೊರೆ ಸೇವೆ ನಡೆಯುತ್ತದೆ. ಆ ಕಾಲದ ಪ್ರಕಾರ ತಿ.ತಿ.ದೇವಸ್ಥಾನದವರು ಈ ತಿಂಗಳ 09 ನೆಯ ತಾರೀಖಿನಿಂದ 18 ರ ವರೆಗೂ ವೈಭವದಿಂದ ನಮ್ಮಾಳ್ವಾರರ ಉತ್ಸವವನ್ನು ನಡೆಸುತ್ತಾರೆ. ಕೊನೆಯ ದಿನ "ಶಾತ್ತುಮೊರ ಸೇವೆ" ನಡೆಯುತ್ತದೆ. ಈ ಸಂದರ್ಭ ವಾಗಿ ಎಲ್ಲರೂ ನಮ್ಮಾಳ್ವಾರರನ್ನು ಪ್ರಾರ್ಥಿಸಿ ಭಕ್ತಿಯಿಂದ ಮೆರೆಯೋಣ...

**'ಶ್ರೀ ನಮ್ಮಾಳ್ವಾರರ ದಿವ್ಯ ಚರಣಗಳೇ ಶರಣು'**

ಹಸಿರು ತೋರಣ



# ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ ವೈಭವ

- ಮೂಲ: ಶ್ರೀಮತಿ ಎಂ. ಪದ್ಮಾವತಿ ವೆಂಕಟರಮಣ
-ಅನುವಾದ: ಕೆ. ನರಸಿಂಹಮೂರ್ತಿ

## ತಿರುಮಲೆಯಲ್ಲಿ ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ ಸಂದರ್ಭದಲ್ಲಿ......

ವಿಶ್ವವಿಖ್ಯಾತ ತಿರುಮಲೆ ಕ್ಷೇತ್ರ "ನಿತ್ಯಕಲ್ಯಾಣ- ಹಸಿರು ತೋರಣ"ದಿಂದ ಕಳೆಗೆಟ್ಟುತ್ತಲೇಯಿರುತ್ತದೆ. ಇಲ್ಲಿ ಸ್ವಾಮಿಗೆ ಪ್ರತಿದಿನ ಕಲ್ಯಾಣವೇ! ಪ್ರತಿದಿನ ವೈಭೋಗವೇ! ಈ ಕಲ್ಯಾಣವು ನೋಡುವವರಿಗೆ ಎಷ್ಟೋ ಆನಂದಕರವಾಗಿ, ಆಹ್ಲಾದಕರವಾಗಿ, ನಯನ ಮನೋಹರವಾಗಿರುತ್ತದೆ. ಈ ನಿಟ್ಟಿನಲ್ಲಿ ಸ್ವಾಮಿಗೆ ಕಲ್ಯಾಣೋತ್ಸವ ಪರಿಣಯೋತ್ಸವ, ಮೊದಲಾದವುಗಳನ್ನು ಜರುಗಿಸಬೇಕೆಂದು ಎಷ್ಟೋ ಭಕ್ತರು ಮುನ್ನುಗ್ಗುತ್ತಿರುತ್ತಾರೆ.ಸ್ವಾಮಿಗೆ ಈ ಬಗೆಯ ಉತ್ಸವಗಳು ಜರುಗಿಸಿದಲ್ಲಿ ತಂತಮ್ಮ ಜೀವನಗಳು ಸಹಾ ಮಂಗಳಕರವಾಗಿ, ಶುಭಕರವಾಗಿರುತ್ತವೆಂದು ಅವರ ನಂಬಿಕೆ ಹಾಗೆ ಈ ಕಲ್ಯಾಣವು ರಾಶಿ ರಾಶಿ ಗ್ರಾಮಗಳಲ್ಲಿ ಮಂಡಲಗಳಲ್ಲಿ,ಪಟ್ಟಣಗಳಲ್ಲಿ, ರಾಷ್ಟ್ರಗಳಲ್ಲಿ,ದೇಶವ್ಯಾಪ್ತಿಯಾಗಿ,ಪ್ರಪಂಚವ್ಯಾಪ್ತಿಯಾಗಿ ವಿಸ್ತಾರಗೊಂಡಿದೆಯೆಂದೇ ಅರ್ಥ.ಅಂತಹ ಶ್ರೇಷ್ಠತೆ ವಿಶೇಷತೆಯನ್ನು ಹೊಂದಿರುವ ಆ ಸ್ವಾಮಿಯ ಪರಿಣಯೋತ್ಸವವನ್ನು ವೈಭವನನ್ನು ಕುರಿತು ತಿಳಿದುಕೊಳ್ಳೋಣ.

### ಪದ್ಮಾವತಿ ಶ್ರೀನಿವಾಸರ ಪರಿಣಯಮಹೋತ್ಸವ

ಕಲಿಯುಗ ವೈಕುಂಠನೆಂದೂ ವಿಶ್ವವಿಖ್ಯಾತಿ ಪಡೆದವನೆಂದೂ ಸಪ್ತಾಚಲವಾಸಿ ಶ್ರೀ ಶ್ರೀನಿವಾಸ ಸ್ವಾಮಿಯ ಲೀಲಾವಿಭೂತಿ,ಲೋಕಕ್ಕೆ ಆಮುದಾನಂದದಿಂದ,ಹೃದಯಾರವಿಂದ ರಸಾಸ್ವಾದತೀರರನ್ನು ಕರೆಸಿ,ಅನುಗ್ರಹಿಸಲೆಂದೇ ಶ್ರೀ ಪದ್ಮಾವತಿ ಅಮ್ಮನವರೊಂದಿಗೆ ಕಲ್ಯಾಣೋತ್ಸವವನ್ನು ಜರುಗಿಸಿಕೊಂಡು ಶ್ರೀ ವೇಂಕಟಾಚಲ ಮಹಾತ್ಮೆ ಹೇಳುತ್ತದೆ.

ಒಂದು ದಿನ ಆಕಾಶ ರಾಜನು ಯಜ್ಞಕ್ಕೋಸ್ಕರ ಅರಣೀ ನದಿಯ ತಟವನ್ನು ತೋಡುತ್ತಿದ್ದಾಗ ಒಬ್ಬ ಪದ್ಮದಂತಹ ಮನೋಹರವಾದ ಚಿಕ್ಕ ಹೆಣ್ಣು ಶಿಶುವು ಕಂಡಿದೆ. ಆ ಶಿಶುವನ್ನು ನೋಡಿ ಎಷ್ಟೋ ಸಂತೋಷಗೊಂಡಿದ್ದಾನೆ. ಆ ರಾಜ ದೈವಾಂಶ ಸಂಭೋತೆಯಾದ ಪದ್ಮದಂತಿರುವುದರಿಂದ ಸಾಕ್ಷಾತ್ ಲಕ್ಷ್ಮೀದೇವಿಯೆಂದೇ ಎಂದು ಕೊಂಡು "ಪದ್ಮಾವತಿ" ಎಂದು ನಾಮಕರಣ ಮಾಡಿದ್ದಾರೆ.

ಒಂದು ದಿನ ಪದ್ಮಾವತಿ ತನ್ನ ಪ್ರಿಯ ಸಖಿಯರೊಂದಿಗೆ ವನದಲ್ಲಿ ವಿಹರಿಸುತ್ತಿದ್ದಾಳೆ. ಈ ಸಮಯದಲ್ಲಿ ಸ್ವಾಮಿಯು ಕುದುರೆಯೇರಿ ತನ್ನ ಮೃಗವನ್ನರಸುತ್ತಾ ಅವರಿರುವಲ್ಲಿ ಬಂದಿದ್ದಾನೆ. ನನ್ನ ಮೃಗ ಈ ಕಡೆಗೇ ಬಂದಿದೆ. ಅದನ್ನೆನ್ನೇನಾದರೂ ನೋಡಿದ್ದೀರಾ ಎಂದು ಕೇಳಿದ್ದಾನೆ.ಅದಕ್ಕೆ ಅವರು ಅಯ್ಯೋ ಪುರುಷರಿಲ್ಲಿ ಬರಕೂಡದೆಂದೂ ಆತನನ್ನು ತಡೆದಿದ್ದಾರೆ. ಆ ಮಾತಿಗೆ ಸ್ವಾಮಿಯು ಮುಗುಳ್ನಗೆ ನಕ್ಕು ಪದ್ಮಾವತಿಯನ್ನು ನೋಡುತ್ತಾ ಆಕೆ ಯಾರೆಂದು ಹೇಳಿರಿ ಎಂದು ಕೇಳಿದ್ದಾನೆ.ಆ ಮಾತಿಗೆ ಪದ್ಮಾವತಿ 'ನೀನ್ಯಾರೋ ಮೊದಲದನ್ನು ಹೇಳು'ಎಂದಿದ್ದಾಳೆ. ಆಗ ಅವರಿಬ್ಬರ ಮಧ್ಯೆ ಸಂಭಾಷಣೆ ಹೀಗೆ ನಡೆದಿದೆ.

**ಸ್ವಾಮಿ:** ನನ್ನದು ಯದುವಂಶ, ತಂದೆ ವಸುದೇವನು. ತಾಯಿ ದೇವಕಿ, ಮಿತ್ರರು ಫಲ್ಗುಣನು.ಬಂಧುಗಳು ಪಾಂಡವರು. ಕೃಷ್ಣ ಪಕ್ಷದಲ್ಲಿ ಜನಿಸಿರುವವನು ನಾನು ಆದ್ದರಿಂದಲೇ ನನ್ನ ಹೆಸರು ಕೃಷ್ಣ. ನನ್ನ ಬಣ್ಣ ಕಪ್ಪುವರ್ಣ.ಇದು ನನ್ನ ಕುಲಗೋತ್ರ ಪ್ರವರವು. ಓ ಭಾಮೆ! ಈಗ ನಿನ್ನ ಕುಲಗೋತ್ರ ಸಮಾಚಾರವೇನೆಂದು ತಿಳಿಸು.

**ಪದ್ಮಾವತಿ:** ಓ ಅಪರಿಚಿತನೇ! ನಾನು ಆಕಾಶರಾಜನ ಕುವರಿ.ನನ್ನ ಹೆಸರು ಪದ್ಮಾವತಿ.ನಮ್ಮದು ಚಂದ್ರವಂಶ. ಅತ್ರಿಗೋತ್ರ. ನೀನಿಲ್ಲಿಂದ ದೂರ ಹೊರಟುಹೋಗು.ನನ್ನ ಕುರಿತಾದ ಮಾಹಿತಿಗಳನ್ನೆಲ್ಲಾ ತಿಳಿದಿದ್ದೀಯಲ್ಲಾ ಈಗಲಾದರೂ ಹೊರಡು.

**ಸ್ವಾಮಿ:** ಯಾಕಿಷ್ಟು ಕಠೋರವಾಗಿ ಮಾತನಾಡುತ್ತೀಯ. ಕೋಮಲವಾಗಿ ನುಡಿ ಒಳ್ಳೆಯ ಮಾತುಗಳನ್ನಾಡುವುದರಿಂದ ಪುಣ್ಯವು ಲಭಿಸುತ್ತದೆ.ನನ್ನನ್ನು ವಿವಾಹವಾಗು.ನನ್ನ ಬಯಕೆಗಳನ್ನು ತೀರಿಸೇ ಓ ಭಾಮೆ!

**ಪದ್ಮಾವತಿ:** ಓ ಪಾಮರನೇ ! ನಿನಗೆ ನಿನ್ನ ಪ್ರಾಣದ ಮೇಲೆ ಆಸೆಯಿಲ್ಲವೇ? ನನ್ನ ತಂದೆ ಆಕಾಶರಾಜ. ನಿನ್ನನ್ನು ಕೊಂದರೂ ಕೊಲ್ಲುತ್ತಾನೆ.ಆದ್ದರಿಂದ ಇಲ್ಲಿಂದ ದೂರ ಹೊರಟು ಹೋಗು.

**ಸ್ವಾಮಿ:** ನಿನ್ನ ತಂದೆ ನನ್ನನ್ನು ಹೇಗೆ ಕೊಲ್ಲಲು ಸಾಧ್ಯ? ನೀನು ಕನ್ಯೆ ನಾನು ವರನು ರಾಜದೃಷ್ಟಿಯಲ್ಲಿ ಇದು ನ್ಯಾಯವೇ ಅಲ್ಲವೇ?

**ಪದ್ಮಾವತಿ:**ನಾನ್ಯಾರೆಂದು ನಿನಗೆ ಪೂರ್ತಿಯಾಗಿ ತಿಳಿಯದು.ನಿನ್ನನ್ನು ನೋಡಿದ ಕೂಡಲೇ ನಿನಗೆ ಆಕಾಶ ರಾಜನು ತಪ್ಪದೆ ಶಿಕ್ಷೆಯನ್ನು ನೀಡುತ್ತಾನೆ. ಇದೇ ಮುಂದೆ ಆಗಲಿರುವುದು.



**ಸ್ವಾಮಿ:** ಓ ದೇವಿ! ನಾನು ಖಂಡಿತ ಮರಣೋನ್ಮುಖನೇ. ಆದರೆ ಈ ಪೂರ್ವ ಕರ್ಮಫಲವನ್ನು ಅನುಸರಿಸದೆ ತಪ್ಪುವುದಿಲ್ಲ. ಧರ್ಮಾತ್ಮನಾದ ಆಕಾಶರಾಜ ನನ್ನನೆಂತು ಕೊಲ್ಲುತ್ತಾನೆ?

**ಪದ್ಮಾವತಿ:** ಓ ನಿಷಿದ್ಧನೇ! ಇನ್ನು ನಿನ್ನನ್ನು ಆ ದೇವರೇ ರಕ್ಷಿಸಬೇಕು. ಕ್ಷೇಮವಾಗಿ ಇನ್ನು ನಿನ್ನ ಮನೆಗೆ ನೀ ಹೋಗಿ ಬಾ. ತಂದೆ ತಾಯಿಯರನ್ನು ಬಂಧುಗಳನ್ನು, ಸೋದರರನ್ನು, ಸ್ನೇಹಿ ತರನ್ನು, ಬಿಟ್ಟು ಏಕೆ ಏಕಾಂಕಿಯಾಗಿ ತಿರುಗುತ್ತಿರುವೆ?

**ಸ್ವಾಮಿ:** ವಿಧಿಲಿಖಿತ ಸುಳ್ಳಾಗದು ಜಯಾಪಜಯಗಳು ಏನೇ ಇದರೂ ನಿನ್ನ ಸುಖವೇ ನನಗೆ ಪ್ರಧಾನ ಎಂದು ಹೇಳುತ್ತಲೇ ಅದನ್ನು ಕೇಳಿದ ಪದ್ಮಾವತಿ ತನ್ನ ಸಖಿಯರೊಂದಿಗೆ ಸ್ವಾಮಿಯ ಕುದುರೆಯನ್ನು ಕಲ್ಲುಗಳಿಂದ ಹೊಡೆದು ಬಿಟ್ಟಿದಾಳೆ.ಅದನ್ನು ಕಂಡ ಶ್ರೀನಿವಾಸನು ಇನ್ನು ಅಲ್ಲಿದ್ದರೆ ತನಗೂ ಅದೇ ಗತಿಯುಂಟಾಗುವುದೆಂದು ಅಲ್ಲಿಂದ ಕಾಲ್ತೆಗೆದ್ದಿದ್ದಾನೆ.

ಹೀಗೆ ಪದ್ಮಾವತಿ - ಶ್ರೀನಿವಾಸರ ಪರಿಣಯ ಕೋಪ ತಾಪಗಳಿಂದ ಆರಂಭಗೊಂಡು ಬಕುಳಾದೇವಿ ರಾಯಭಾರದಲ್ಲಿ,ಕೊರವಂಜಿ ರೂಪದಲ್ಲಿ ಶ್ರೀನಿವಾಸನ ಸಂದೇಶದೊಂದಿಗೆ ಪರಿಣಯಕ್ಕೆ ನಾಂದಿಯಿಟ್ಟು ಕಡೆಗೆ ಅದು ಕಲ್ಯಾಣಕ್ಕೆ ದಾರಿಯಾಗಿದೆ. ಈ ಪರಿಣಯಕ್ಕೆಬ್ರಹ್ಮಾದಿದೇವತೆಗಳೆಲ್ಲರೂ ಬಂದಿದ್ದಾರೆ. ಇವೆಲ್ಲಾ ಸಹ ಸ್ವಾಮಿ ವೇಂಕಟಾಚಲಕ್ಕೆ ಬರಲು ಕಲ್ಪಿಸಿಕೊಂಡ ಸಿದ್ಧತೆಗಳೇ.ಈ ಪರಿಣಯಾನಂತರವೇ ಸ್ವಾಮಿ ವೇಂಕಟಾದ್ರಿಯ ಮೇಲೆ ನೆಲೆ ನಿಂತಿದ್ದಾನೆ.ಆದರೆ ಈ ಪರಿಣಯಕ್ಕೆ ಪ್ರಧಾನ ಸೂತ್ರಧಾರಿ ಸ್ವಾಮಿಯ "ಕೊರವಂಜಿ" ಪಾತ್ರವೇ ಬಹಳಾ ಶ್ರೇಷ್ಠವಾದುದು. ಈ ಕೊರವಂಜಿ ಪಾತ್ರದಲ್ಲಿ ಧರ್ಮ ಸೂಕ್ಷ್ಮಗಳೆಷ್ಟೋ ಇವೆ. ಅದರ ಕುರಿತು ತಿಳಿದುಕೊಂಡರೆ ಮಾತ್ರ ಪರಿಣಯೋತ್ಸವಕ್ಕೆ ಅರ್ಥ; ಪರಮಾರ್ಥ.

### ಕೊರವಂಜಿ ಪಾತ್ರದಲ್ಲಿ ಶ್ರೀನಿವಾಸ

ಭಗವಂತನೆಲ್ಲಿ? ಕೊರವಂಜಿ ವೇಶವೆಲ್ಲಿ? ಹಿರಿಯರು ಇಂಥ ಕೆಲಸಗಳನ್ನು ಮಾಡಬೇಕೆಂದರೆ ಅವಮಾನವೆಂದು ಭಾವಿಸುತ್ತಾರಲ್ಲವೇ? ಆದರೆ ಕಾರ್ಯ ಸಾಧನೆಯಲ್ಲಿ ಇಂತಹವುಗಳನ್ನು ಮಾಡುವುದರಲ್ಲಿ ತಪ್ಪೇನೂ ಇಲ್ಲವೆಂದೂ ಸ್ವಾಮಿಯ ಸೂಚನೆ ಪರಿಪೂರ್ಣನಾದವನಿಗೆ ಯಾವುದೇ ತರಹದ ಬೇಧ,ಅವಮಾನಗಳಿರುವುದಿಲ್ಲ.ಅದೂ ಕಾರ್ಯಾ

ರ್ಥಿಯಾಗಿ ಭಗವಂತನು ಸ್ವತಃ ತಾನೇ ಹೋದ ರೀತಿ ಭವಿಷ್ಯೋತ್ತರ ಪುರಾಣದಲ್ಲಿ ಹೀಗೆ ರೂಪುಗೊಂಡಿದೆ.

### ಕೊರವಂಜಿ ಪಾತ್ರದ ವರ್ಣನೆ

ಸ್ವಾಮಿ ಹಾಕಿಕೊಂಡ ಮುದಿ ಕೊರವಂಜಿ ವೇಷ ಹೇಗಿದೆಯೆಂದರೆ ವಿಳೆಬಿದಿರುಗಳಿಂದ, ಗುಲಗಂಜಿ ಮಾಲೆಗಳಿಂದ ಬ್ರಹ್ಮಾಂಡವನ್ನೇ ಬಿದಿರಿನ ಬುಟ್ಟಿಯನ್ನಾಗಿ ಮಾಡಿಕೊಂಡು ತಲೆಮೇಲಿಟ್ಟು ಕೊಂಡಿದ್ದಾನೆ. ಬ್ರಹ್ಮದೇವನನ್ನು ಶಿಶುವನ್ನಾಗಿ ಮಾಡಿಕೊಂಡು ತನ್ನ ಸೀರೆ ಸೆರಗಿನಲ್ಲಿ ಒಲಾಡುವಂತೆ ಕಟ್ಟಿಕೊಂಡಿದ್ದಾನೆ. ರುದ್ರನನ್ನು ಕೈಗೋಲನಾಗಿ ಮಾಡಿಕೊಂಡು ನಾರಾಯಣಪುರ ಬೀದಿಯಲ್ಲಿ ಪ್ರವೇಶಿಸಿದ್ದಾನೆ. ಬ್ರಹ್ಮಾಂಡವನ್ನೇ ಭಗವಂತನು ತನ್ನ ಇಚ್ಛಾನುಸಾರ ತಿರುಗಿಸಿಕೊಂಡಿದ್ದಾನೆ. ಶಿಶುವು ಉತ್ತಮವಾದ ಶಿಶುವಾಗಬೇಕು. ಕೈಗೋಲು ಮಹತ್ತರವಾದ ಪವಿತ್ರ ಕೋಲಾಗಬೇಕೆಂದು ಬ್ರಹ್ಮರುದ್ರರನ್ನು ಹಾಗೆ ತನ್ನೊಡನೆ ಕರೆದುಕೊಂಡು ಹೋದುದು ತನ್ನ ಸರ್ವೋತ್ತಮತ್ವವನ್ನು ಸೂಚಿಸಲೆಂದೇ ಎಂಬುದು ತಾತ್ಪರ್ಯ.ಶಿಶುವು ಬ್ರಹ್ಮದೇವನಲ್ಲಿ ಬ್ರಹ್ಮನ ಅವತಾರವಲ್ಲ ಭೂಲೋಕದ ಮೇಲೆ ಬ್ರಹ್ಮನ ಅವತಾರವಿಲ್ಲ. ಇದಕ್ಕುತ್ತರವೇನೆಂದರೆ ಭಗವಂತನ ಆಜ್ಞೆಯ ಮೇರೆಗೆ ಸ್ವಲ್ಪ ಹೊತ್ತು ಮಾತ್ರ ಶಿಶುವಾಗಿ ಬದಲಾವಣೆ ಹೊಂದಿದ್ದಾನಷ್ಟೆ!

### ಕೊರವಂಜಿಯ ಸತ್ಯನಿಷ್ಠೆ

ಕೊರವಂಜಿ ನಾರಾಯಣ ಪುರದ ಬೀದಿಗಳಲ್ಲಿ ಅಲೆಯುತ್ತಾ 'ಭವಿಷ್ಯ ನುಡಿಯುತ್ತೇನಮ್ಮಾ ಭವಿಷ್ಯ ನುಡಿಯುತ್ತೇನೆ ಇದ್ದುದ್ದನ್ನು ಇರುವಂತೆ, ಇಲ್ಲದುದನ್ನು ಇಲ್ಲವೆಂದೂ ನಿಮ್ಮ ಭವಿಷ್ಯ ಇದ್ದುದಿದ್ದಂತೆ ಮಾಡುತ್ತೇನೆಂದೂ,ಯಾರಿಗೇನು ಬೇಕೋ ಅವನ್ನು ಕೊಡುವೆನೆಂದು ಜೋರಾಗಿ ಕೂಗುತ್ತಾ ಹೋಗುತ್ತಿದ್ದಾಳೆ.ಇಂತಹ ಕೊರವಂಜಿಯನ್ನು ಧರಣೀದೇವಿಯ ಪರಿಚಾರಕರು ನೋಡಿದ್ದಾರೆ.ರಾಣಿಗೆ ಹೇಳುತ್ತಲೇ ಧರಣಿದೇವಿ ಆಕೆಯನ್ನು ಆ ಕೂಡಲೇ ಕರೆದುಕೊಂಡು ಬನ್ನಿರೆರೆಂದು ಹೇಳಿದ್ದಾಳೆ ಹಾಗೆ ಹೋಗಿ ಕರೆಯಲು ಮೊದಮೊದಲು ಬರುವುದಿಲ್ಲವೆಂದು ಹಠಮಾಡಿದ್ದಾಳೆ. ಆನಂತರ ನನ್ನನ್ನು ಸೆರೆ ಹಿಡಿಯಲು ಕರೆಯುತ್ತಿದ್ದೀರಾ? ಅರಮನೆಯವರು ನಮ್ಮಂತ ಕಾಡುಜನರನ್ನು ಗೌರವಿಸುತ್ತಾರಾ? ಎಂದು ಅನೇಕ ಪ್ರಶ್ನೆಗಳನ್ನು ಕೇಳಿ ಕಡೆಗೆ ಹೊರಟಿದ್ದಾಳೆ.

ಆ ಕೊರವಂಜಿ ಮೊದಲು ಧರಣಿದೇವಿಯನ್ನು ಸ್ನಾನ ಮಾಡಿ ಶುಚಿಯಾಗಿ ಬರಲು ಹೇಳಿದ್ದಾಳೆ. ತಾನು ಸ್ವತಃ ಸರ್ವೋತ್ತಮನೇ ಆದರೂ ತಾನು ಭವಿಷ್ಯವಾಣಿ ನುಡಿಯುವ



ಮೊದಲು ತಾರತಮ್ಯಾನುಸಾರ ದೇವತಾಸ್ಮರಣೆಯನ್ನು ಸ್ಫುರಿಸಿದ್ದಾಳೆ. ಲೋಕರಕ್ಷಣಾರ್ಥವಾಗಿ ಸಕಲ ತೀರ್ಥ, ಸಕಲ ಕ್ಷೇತ್ರಗಳ ಸ್ಮರಿಸಿ ತನ್ನ ಮಾತುಗಳನ್ನು ಆಡಲು ಮೊದಲಿಟ್ಟಿದ್ದಾಳೆ. ಬ್ರಹ್ಮಾದಿ ದೇವತೆಗಳೆಲ್ಲರನ್ನು ನೆನೆದುಕೊಂಡು, ಅಸೇತು ಹಿಮಾಚಲಗಳಲ್ಲಿರುವ ಪುಣ್ಯಕ್ಷೇತ್ರಗಳು, ನದೀತೀರಗಳನ್ನು ಸ್ಮರಿಸಿ ತನ್ನ ಬುಟ್ಟಿಯ ಮೇಲೆ, ಶಿವನ ಮೇಲೆ ಸತ್ಯವನ್ನೇ ನುಡಿಯುತ್ತೇನೆಂದು ಆಣೆ ಮಾಡಿದ್ದಾಳೆ.

ಹಾಗೆ ಏಕೆ ಮಾಡಬೇಕಾಯಿತು? ಪಾಂಡಿತ್ಯವೇ ಆಗಲಿ, ಪ್ರತಿಭೆಯೇ ಆಗಿರಬಹುದು. ಆದರೆ ಭಗವದನುಗ್ರಹ ಎನ್ನುವುದು ಇಲ್ಲದಿದ್ದರೆ ಎಲ್ಲವೂ ವ್ಯರ್ಥ ಎಂದು ಹೇಳಲು ಆಕೆ ನುಡಿಯುವ ಭವಿಷ್ಯವಾಣಿ ಆಕೆಗೆ ವಾಕ್ಸಿದ್ಧಿಯಾಗಬೇಕು. ಆಕೆ ಸತ್ಯವನ್ನೇ ನುಡಿಯಬೇಕು. ಅದಕ್ಕೆ ಭಗವದನುಗ್ರಹ ಇದ್ದರೆ ಮಾತ್ರವೇ ಅದು ಸತ್ಯವಾಗುತ್ತದೆ. ಆ ಭಗವಂತನ ಅನುಗ್ರಹದ ರಕ್ಷಾಕವಚ ಹೊಂದಿದ್ದರೆ ವಿದ್ಯೆಯಿರಲಿ ಇಲ್ಲದಿರಲಿ ಬರಬೇಕಾದುದು ಒಂದೇ ಬರುತ್ತದೆ.ಎಷ್ಟೋ ಪಾಂಡಿತ್ಯವಿದ್ದರೂ ಎಷ್ಟೇ ಶಾಸ್ತ್ರಜ್ಞಾನವಿದ್ದರೂ ಭಗವದನುಗ್ರಹವಿಲ್ಲದಿದ್ದರೆ ಬಾಯಿಂದ ಬರುವುದು ಸತ್ಯವಾಗಿರುವುದಿಲ್ಲ. ಈ ಕೊರವಂಜಿ ಶ್ರೀ ವೇಂಕಟೇಶನೇ ಆದರೂ ಎಲ್ಲಾ ದೇವತೆಗಳನ್ನು ಸ್ಮರಿಸಿ ಕಡೆಗೆ ವೇಂಕಟೇಶನನ್ನು ಸಹಾ ಸ್ಮರಿಸಿ ಕೊರವಂಜಿ ಆರಂಭಿಸಿದ್ದಾಳೆ.ಇದನ್ನೆಲ್ಲಾ ಭಕ್ತರಿಗೆ ತೋರಿಸಲೆಂದೇ ಭಗವಂತನು ಆ ರೀತಿ ನಟಿಸಿದ್ದಾನೆ. ಅಂತಹ ಸತ್ಯ ಸಂಕಲ್ಪನು ತನ್ನ ಕಲ್ಯಾಣಕ್ಕೋಸ್ಕರಕ್ಕಾಗಿಯೇ ಅವತರಿಸಿದ್ದಾನಾದ್ದರಿಂದ ಪದ್ಮಾವತಿ - ಶ್ರೀನಿವಾಸರ ಪರಿಣಯೋತ್ಸವವು



ಅಷ್ಟೇಂದು ಪ್ರಾಶಸ್ತ್ಯಯ ಪಡೆದಿರುವುದು ಸತ್ಯವೇ! ನಿತ್ಯವೇ ಎಂದು ಹೇಳಬಹುದು.

### ತಿರುಮಲೆಯಲ್ಲಿ ಜರುಗುವ ಪದ್ಮಾವತಿ ಶ್ರೀನಿವಾಸರ ಪರಿಣಯೋತ್ಸವ

ಪದ್ಮಾವತಿ - ಶ್ರೀನಿವಾಸರ ಪರಿಣಯ ಕಾರ್ಯಕ್ಕೆ ಪ್ರತೀಕವಾಗಿ ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕನಾದ, ಆದ್ಯಂತರಹಿತನಾದ,ಅನಾದಿನಿಧನನಾದ ಶ್ರೀನಿವಾಸನಿಗೆ ಶ್ರೀದೇವಿ- ಭೂದೇವಿಯರೊಂದಿಗೆ ವೈಶಾಖ ಶುದ್ಧ ದಶಮಿಯಿಂದ ಕೂಡಿದ ಮೂರು ದಿನಗಳು ತುಂಬಾ ಪ್ರಶಸ್ತವಾಗಿ ನಾರಾಯಣ ಉದ್ಯಾನವನದಲ್ಲಿ ಅಧಿಕಾರ, ಅನಧಿಕಾರ ಭಕ್ತಜನ ಸಮಕ್ಷಮದಲ್ಲಿ ಈ ಪರಿಣಯ ಉತ್ಸವ ಸೇವೆ ಅತ್ಯಂತ ವೈಭವೋಪೇತವಾಗಿ ನಿರ್ವಹಿಸಲಾಗುತ್ತದೆ.

ಅದು ತಿರುಮಲೆಯ ಸಂಧ್ಯಾ ಸಮಯ. ಭಕ್ತ ಜನ ಸಂದೋಹ.ಮದುವೆಯ ಹಿರಿಯರು ಅಗ್ರಸ್ಥಾನದಲ್ಲಿ, ಅಧಿಕಾರಗಣವೆಲ್ಲಾ ಒಂದು ಕಡೆ ಡೋಲು ಡಮರುಕಾದಿ ವಾದ್ಯಗಳ ಸುಶ್ರಾವ್ಯ ಧ್ವನಿಯಿಂದ ಭಕ್ತ ಜನಗಣ ನೋಡುತ್ತಿದ್ದಂತೆಯೇ ಸ್ವಾಮಿ ಗಜವಾಹನದ ಮೇಲೆ ಛತ್ರ ಚಾಮರಾದಿ ಧ್ವಜಪತಾಕೆಗಳಿಂದ ಸಕಲ ರಾಜೋಪಚಾರಗಳಿಂದ ವಾಹನ ಮಂಟಪದಿಂದ ಮಹಾದ್ವಾರ ಗೋಪುರ ಪುರದೊಳಗಿನಿಂದ ಬಂದು ಅಲ್ಲಿ ದೇವಾಲಯದ ಪ್ರಕಾರ ಪ್ರಾಂಗಣದಿಂದ ಪಲ್ಲಕಿಯಲ್ಲಿ ಬಂದು, ಶ್ರೀ - ಭೂ ದೇವಿಯರು ಕುಡಿ ನೋಟದಿಂದ ನೋಡುಗರಿಗೆ ಮುಂದೆ ಮೆಲ್ಲ ಮೆಲ್ಲನೆ ನೂತನ ವರನಾಗಿ ವಯ್ಯಾರವಾಗಿ ನಡೆಯುತ್ತಾ ನಾರಾಯಣಗಿರಿ ಉದ್ಯಾನವನದಲ್ಲಿ ಪ್ರವೇಶಿಸುತ್ತಾನೆ. ಅದೇ ರೀತಿಯಲ್ಲಿ ಎರಡನೇ ದಿನ ಅಶ್ವವಾಹನ, ಮೂರನೇ ದಿನ ಗರುಡವಾಹನದ ಮೇಲೆ ಶ್ರೀ ಸ್ವಾಮಿಯು ವಿಹರಿಸುತ್ತಾರೆ.

### ಪರಿಣಯೋತ್ಸವ ಕ್ರಿಯಾ ಕೈಂಕರ್ಯ

ಎದುರುಬದುರಾಗಿ ಆಸೀನರಾದ ಶ್ರೀ ಭೂದೇವಿ - ಮಲೆಯಪ್ಪರಿಗೆ ಅರ್ಚಕರು ಮೂರು ಝಾವಗಳು ಮೊಟ್ಟ ಮೊದಲಾಗಿ ಪುಷ್ಪಮಾಲೆ ಸಮರ್ಪಣೆ, ಮಾಡುತ್ತಾರೆ. ಇದು ವರಾಹ ಪುರಾಣೋಕ್ತ, ಶ್ರೀಮಲೆಯಪ್ಪಸ್ವಾಮಿ ಮಲ್ಲಿಗೆ ಹಾರಗಳನ್ನು ತನ್ನ ಕೊರಳಿನಿಂದ ತೆಗೆದು ಪದ್ಮಾವತಿ ಕೊರಳಲ್ಲಿ ಹಾಕುತ್ತಾರೆ. ಆ ಮಾಲೆಯನ್ನೇ ತೆಗೆದು ಪದ್ಮಾವತಿ ಸ್ವಾಮಿಯವರಿಗೆ ಸಮರ್ಪಿಸುತ್ತಾಳೆ. ಈ ರೀತಿಯಾಗಿ ಮೂರು ಬಾರಿ ಇಬ್ಬರೂ ಹಾಕಿಕೊಳ್ಳುತ್ತಾರೆ. ಅದಕ್ಕೆ ಪ್ರತಿಕ್ರಿಯೆ ಎಂದರೆ ಪುಷ್ಪಮಾಲೆ ಸಮರ್ಪಿಸುವುದು.ತದನಂತರ ವೇದ ಮಂತ್ರೋಚ್ಚಾರಣದಿಂದ ವಧು-ವರರಿಗೆ ಮಧುಪರ್ಕ (ವಸ್ತ್ರ) ಸಮರ್ಪಣೆ ನಡೆಯುತ್ತದೆ ಇದರಿಂದ ಪದ್ಮಾವತಿ ಪರಿಣಯವು ಮುಕ್ತಾಯಗೊಳ್ಳುತ್ತದೆ.

ಶ್ರೀದೇವಿ ಭೂದೇವಿಯರಿಬ್ಬರೂ ವಯ್ಯಾರವಾಗಿ ಶ್ರೀನಿವಾಸನ ಪಕ್ಕಕ್ಕೆ ಸೇರಿ ವಿಶೇಷ ಅರ್ಘ್ಯ ಪಾದ್ಯ ಆಚಮನ ಧೂಪದೀಪ ನೈವೇದ್ಯದ್ಯುಪಚಾರಗಳನ್ನು ಗ್ರಹಿಸಿ ಆಚಾರ್ಯರ ದ್ವಾರ ಋಗ್ವೇದ,ಯಜುರ್ವೇದ,ಸಾಮವೇದ,ಅಥರ್ವಣ ವೇದಗಳನ್ನು ಕ್ರಮವಾಗಿ ಹರಿಸಿ ಅತ್ಯಂತ ಮಧುರವಾದ ಸಂಗೀತ, ಭರತನಾಟ್ಯ ಮುಂತಾದವುಗಳನ್ನು ಸ್ವೀಕರಿಸಿ ಭಕ್ತ ಜನರನ್ನು ಅನುಗ್ರಹಿಸಿ ಯಥಾ ವಿಧಿ ಪ್ರದಕ್ಷಿಣವಾಗಿ ದೇವಾಲಯಕ್ಕೆ ಸೇರಿಕೊಳ್ಳುತ್ತಾರೆ.

ಈ ಪರಿಣಯ - ಉತ್ಸವದ ಫಲ ಕೋಟಿ ಕನ್ಯಾದಾನ ಫಲಕ್ಕೆ ಸಮಾನ. ಇದನ್ನು ಮಾಡಿಸಿದವರಿಗೆ ವೇಂಕಟೇಶನ ಅನುಗ್ರಹ ಲಭಿಸುತ್ತದೆ. ಭಕ್ತರಿಗೆ ಕಾಮಧೇನುವಾಗಿ ಕೋರಿದ ಸಕಲ ಸೌಭಾಗ್ಯಗಳನ್ನು ಅನುಗ್ರಹಿಸುತ್ತಾನೆ.

**ವೃಕ್ಷೋ ರಕ್ಷತಿ ರಕ್ಷಿತಃ**

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**




- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

ಭಾರತೀಯ ಹಬ್ಬಗಳ ಸಾಲಿನಲ್ಲಿ ಅಕ್ಷಯ ತದಿಗೆಗೆ ಶ್ರೇಷ್ಠ ಸ್ಥಾನವಿದೆ. ಅದು ಮಂಗಲ ಮುಹೂರ್ತ. ಜೀವನದ ಉತ್ಕರ್ಷದ ಬಗ್ಗೆ ಸಂಕಲ್ಪಗಳೆಲ್ಲವನ್ನೂ ಸಾಕಾರಗೊಳಿಸುವ ಮಹಾಸುದಿನ, ಅಕ್ಷರಾಭ್ಯಾಸ, ಮದುವೆ, ಮುಂಜಿ, ಗೃಹಪ್ರವೇಶ, ಹೊಸ ವ್ಯವಹಾರ ಆರಂಭ, ಚಿನ್ನ - ಬೆಳ್ಳಿ ಖರೀದಿಗೂ ಸೂಕ್ತವೆಂದು ನಂಬಿಕೆ, ಅಂತೆಯೇ ದಾನಕ್ಕೂ ಪ್ರಶಸ್ತವೆನಿಸಿರುವ ಈ ಶುಭ ದಿನದ ಆಚರಣೆಗಿರುವ ಸಾಮಾಜಿಕ - ಆರ್ಥಿಕ ಹಿನ್ನೆಲೆ, ಧಾರ್ಮಿಕ ಹಾಗೂ ಆಧ್ಯಾತ್ಮಿಕ ಮಹತ್ವ ಖರೀದಿ - ಹೂಡಿಕೆಗಳ ಸಂಪ್ರದಾಯದ ಹಿಂದಿನ ಔಚಿತ್ಯ, ಇವೆಲ್ಲದರ ಅವಲೋಕನ ಇಲ್ಲಿದೆ.

ಅಕ್ಷಯತದಿಗೆ ವೈಶಾಖ ಮಾಸದ ಶುಕ್ಲಪಕ್ಷದ ಮೂರನೇ ತಿಥಿಯಾಗಿದೆ. ಈ ದಿನ ಸೂರ್ಯ ಚಂದ್ರರು ತಮ್ಮ ಗರಿಷ್ಠತಮ ಕಾಂತಿ ಹೊಂದುವುದರಿಂದ ದಿನವಿಡೀ ಮಂಗಲಕರವೇ. ಅಕ್ಷಯತದಿಗೆ ದಿನದಂದೇ ಮಹರ್ಷಿ ವೇದವ್ಯಾಸರು ಗಣಪತಿಯ ಅಮೃತಹಸ್ತದಿಂದ ಮಹಾಭಾರತ ಮಹಾಕಾವ್ಯದ ಬರವಣಿಗೆ ಆರಂಭಿಸಿದರಂತೆ. ಮಂಗಲಕಾರಕ ಮುಹೂರ್ತಗಳಲ್ಲಿ ಇದೂ ಒಂದು.

ಭಗವಾನ್ ಶ್ರೀ ಮಹಾವಿಷ್ಣುವಿನ ಅವತಾರವೆನಿಸಿದ ಪರಶುರಾಮನ ಜನನ ಇದೇ ದಿನವೆಂದು ಪ್ರತೀತಿ. ಇನ್ನೊಂದು ವೈಶಿಷ್ಟವೆಂದರೆ ಶ್ರೀ ಕೃಷ್ಣನ ಅಣ್ಣನಾದ ಬಲರಾಮ ಜನನ, ಅಂದು ಹಲವೆಡೆ ಬಲರಾಮನ ಆಯುಧವಾದ ನೇಗಿಲನ್ನು ಪೂಜಿಸುವ ರೈತರು ಆ ದಿನ ಬೆಳಿಗ್ಗೆ ಗದ್ದೆಗಳಿಗೆ ಹೊರಡುವಾಗ ಪ್ರಾಣಿ - ಪಕ್ಷಿಗಳು ಕಂಡರೆ ಈ ಬಾರಿ ಉತ್ತಮ ಬೆಳೆ, ಮಳೆ ಸಂಕೇತ ಎಂದು ಸಂಭ್ರಮಿಸುತ್ತಾರೆ.

ಆಪ್ತ ಸಖನಿಗೆ ಆತ್ಮ ಸಖನ ಸ್ಥಾನ ಕೊಟ್ಟು, ಅತಿಥಿ ಸತ್ಕಾರದ ಕೀರ್ತಿಯನ್ನು ಚಿರಸ್ಥಾಯಿಯಾಗಿಸಿದ ಶ್ರೀ ಕೃಷ್ಣ ಕುಚೇಲನನ್ನು ಸತ್ಕರಿಸಿದ ಶ್ರೇಷ್ಠ ದಿನವೇ ಅಕ್ಷಯತದಿಗೆ. ಹಾಗೆಯೇ ಶ್ರೀಕೃಷ್ಣ ಪಾಂಡವರಿಗೆ ಅಕ್ಷಯ ಪಾತ್ರೆಯನ್ನು ಕೊಡುಗೆಯಾಗಿತ್ತ ದಿನ ಅಕ್ಷಯತದಿಗೆ. ಇನ್ನೊಂದು ಕೌತುಕ ಪೂರ್ಣಕತೆಯೂ ಅಕ್ಷಯ ತದಿಗೆಯ ಮಹತ್ವ ಸಾರುತ್ತದೆ. ದರ್ಶನ, ಸ್ಪರ್ಶನ, ಕೀರ್ತನ, ಸ್ನಾನ ಪಾನಾದಿಗಳ ಮೂಲಕ ಜನ್ಮಾಂತರಗಳ ಪಾಪ, ದೋಷ ತೊಳೆಯುವ ಗಂಗಾಮಾತೆ ಸ್ವರ್ಗದಿಂದ ಧರೆಗಿಳಿದ ದಿನವಿದು.

ಸಂಪತ್ತಿನ ಒಡೆಯ, ದೇವತೆಗಳಲ್ಲೆಲ್ಲಾ ಅತಿ ಸಿರಿವಂತ, ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಯಕ್ಷರಾಜ ಕುಬೇರ ಮಹಾಲಕ್ಷ್ಮಿಯ ಮಾಡುವ ಶುಭದಿನ ಈ ಅಕ್ಷಯತದಿಗೆ. ಅಕ್ಷಯತದಿಗೆಯಂದು ಮಾಡಬಹುದಾದ ಪುಣ್ಯ ಕಾರ್ಯಗಳು ಅನ್ನದಾನ, ಹಸಿರು ಹುಲ್ಲುಗಳಿಂದ , ಮೇವಿನಿಂದ ಹಸುಗಳನ್ನು ತೃಪ್ತಿಪಡಿಸುವುದು, ಅವಶ್ಯವಿರುವ ಮಗುವಿನ ವಿದ್ಯಾಭ್ಯಾಸದ ಖರ್ಚು- ವೆಚ್ಚ ನೀಡುವುದು, ದುಶ್ಚಟಗಳನ್ನು ತ್ಯಜಿಸುವುದು, ಲೌಕಿಕ ಪಾರಮಾರ್ಥಿಕ ಸಾಧನೆಯ ಆರಂಭ.

ಅಕ್ಷಯವೆಂದರೆ ಕ್ಷಯವವಿಲ್ಲದ್ದು, ಕಡಿಮೆ ಇಲ್ಲದ್ದು, ಕ್ಷೀಣವಾಗದ್ದು, ಕೊನೆಯಿಲ್ಲದ್ದು, ನ್ಯೂನವಿಲ್ಲದ್ದು. ಇದು ಸಮೃದ್ಧಿಯ ಸಂಕೇತ, ಶುಭಾರಂಭದ ದ್ಯೋತಕ ನಿರಂತತೆಯ ಪ್ರತೀಕ. ಧರ್ಮವು ಕರ್ತವ್ಯ, ಆಧ್ಯಾತ್ಮಿಕತೆಯನ್ನು ಅರ್ಥವು ಸಂಪತ್ತನ್ನು, ಕಾಮವು ಭೌತಿಕ ಸಂತೋಷ. ಆಕಾಂಕ್ಷೆಗಳನ್ನು ಸಂಕೇತಿಸಿದರೆ ಮೋಕ್ಷ ಈ ಭವಬಂಧನದಿಂದ ಮುಕ್ತವಾಗಿ ಏಕತ್ವದಲ್ಲಿ ಲೀನವಾಗುವುದರ ಸಂಕೇತವಾಗಿದೆ. ಈ ನಾಲ್ಕು ಪುರುಷಾರ್ಥಗಳ ಪೈಕಿ ಯಾವುದಾದರೊಂದರ ಆರಂಭ ಮಾಡುವುದಿದ್ದರೂ ಅದಕ್ಕೆ ಎಲ್ಲ ರೀತಿಯಿಂದಲೂ ಅನುಕೂಲಕರವಾದ ಶುಭ ದಿನವೇ ಈ ಅಕ್ಷಯ ತೃತೀಯ.

ಶ್ರೀ ಮಧ್ವಾಚಾರ್ಯರು ಸ್ಥಾಪಿಸದ ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಶ್ರೀ ಪೇಜಾವರ ಮಠದ ಪರಂಪರೆಯಲ್ಲಿ ವಿಳನೆಯ ಯತಿಗಳಾದ ಶ್ರೀ ವಿಜಯಧ್ವಜ ತೀರ್ಥರು ಶ್ರೀ ಮದ್ಭಾಗವತಕ್ಕೆ ಪದರತ್ನಾವಲೀ ಎಂಬ ಸಮಗ್ರ ಟಿಪ್ಪಣಿಯನ್ನು ಬರೆದ ಜ್ಞಾನಿ ಶ್ರೇಷ್ಠರು. ಅವರು ಆರಾಧನೆಯೂ ದ.ಕ.,ಕೇರಳ ಗಡಿಯ ಮಂಜೇಶ್ವರ ಸಮೀಪದ ಕಣ್ವತೀರ್ಥದಲ್ಲಿ ಅಕ್ಷಯ ತದಿಗೆಯಂದು ವಿಜೃಂಭಣೆಯಿಂದ ನಡೆಯಲಿದೆ. ಜಗನ್ನಾಥ ಪುರಿಯ ದೇವರ ರಥಕಟ್ಟಲು ಆರಂಭಿಸುವ ದಿನವೂ

ಇದಾಗಿದೆ. ಇಂದೇ ಆದಿ ಶಂಕರಾಚಾರ್ಯರು ಕನಕಧಾರಾ ಸ್ತೋತ್ರ ರಚಿಸಿದರು ಎಂದು ನಂಬಿಕೆಯಿದೆ.

**ಅಕ್ಷಯ ತೃತೀಯ : ಪುರಾಣದ ನಂಟು**

ವೈಶಾಖ ಮಾಸಕ್ಕೆ ಸೂರ್ಯ ಅಭಿಮಾನಿ ದೇವತೆ. ಸೂರ್ಯನು ಬೆಳಕು ಮತ್ತು ಶಕ್ತಿಯ ಉಗಮ ಸ್ಥಾನ. ಸೂರ್ಯ ಜಗದ ಕಣ್ಣು. ಸೂರ್ಯ ಜಗವನ್ನು ಬೆಳಗುವವನು. ಅವನ ಆಂತರ್ಯದಲ್ಲಿರುವುದೇ ಪ್ರಬಲವಾದ ಅಗ್ನಿಯ ಮೊದಲ ಮಗನೇ ಹಿರಣ್ಯ (ಬಂಗಾರ). ಸೂರ್ಯ- ಅಗ್ನಿ- ಬಂಗಾರದ ಸಂಬಂಧ ಹೀಗಿದೆ.ಭಗವದ್ಗೀತೆಯಲ್ಲಿ ಶ್ರೀಕೃಷ್ಣನೇ ವೈಶ್ವಾನರಾಗ್ನಿಯ ರೂಪದಲ್ಲಿ ನಾನು ಎಲ್ಲರ ಹೃದಯದಲ್ಲಿರುತ್ತೇನೆ ಎಂದು ವಿಸ್ತರಿಸಿ ಅರ್ಥೈಸುವುದಾದರೆ ನಾವು ಬಂಗಾರವನ್ನು ಧರಿಸಿ ಕೊಂಡಾಗ ನಮ್ಮ ಹೃದಯವಾಸಿಯಾದ ಅಗ್ನಿಯನ್ನು ಅವನ ಮಗ ಹಿರಣ್ಯ (ಬಂಗಾರ) ನಿಂದಲೇ ಅಲಂಕರಿಸಿದಂತಾಗುವುದು.



ವಿಷ್ಣು ಅಲಂಕಾರ ಪ್ರಿಯ. ಆತನಿಗೆ ಪ್ರಿಯವಾದ ಹೇಮ (ಚಿನ್ನ) ರಜತಾದಿ ಒಡವೆಗಳನ್ನು ಖರೀದಿಸಿ ಅರ್ಪಿಸಿ ಕೃತಾರ್ಥರಾಗುವರು ಭಾರತೀಯ ಆಸ್ತಿಕರು. ವಿಷ್ಣು ಸಹಸ್ರನಾಮದಲ್ಲಿ ಹೇಳಿದಂತೆ ವಿಷ್ಣು ಸುವರ್ಣ ವರ್ಣದವನು. ಮಾತ್ರವಲ್ಲ, ಅಷ್ಟೈಶ್ವರ್ಯಗಳ ಅಧಿಪತಿ ಕುಬೇರ. ಈ ಒಂದು ದಿನ ಸ್ವತಃ ಐಶ್ವರ್ಯ ದೇವತೆ ಲಕ್ಷ್ಮಿಯನ್ನು ಪೂಜಿಸುತ್ತಾನೆ ಎಂದು ಲಕ್ಷ್ಮೀ ತಂತ್ರದಲ್ಲಿ ಉಲ್ಲೇಖಿಸಲಾಗಿದೆ. ಹೀಗಾಗಿ ದೈವಭಕ್ತರಿಗೆ ಇದೊಂದೇ ದಿನ ಕುಬೇರ ಲಕ್ಷ್ಮೀ ಪೂಜೆ ಮಾಡಲು ಅವಕಾಶ. ವಿಶೇಷವಾಗಿ ತುಪ್ಪದ ದೀಪ ಹಚ್ಚಿ ಪೂಜಿಸಲಾಗುತ್ತದೆ.

ಜೈನರಿಗೂ ಅಕ್ಷಯ ತೃತೀಯ ವಿಶೇಷ ದಿನ. ಪ್ರತಿ ಎರಡು ದಿನಕ್ಕೊಮ್ಮೆ ಉಪವಾಸ ವ್ರತಾಚರಣೆ ಮಾಡುವ ಕಟ್ಟಾ ಸಂಪ್ರದಾಯಸ್ಥರು ತಮ್ಮ ಒಂದು ವರ್ಷದ ತಾಪ್ಸಾಯವನ್ನು ಅಂದು ಮುಕ್ತಾಯ ಗೊಳಿಸುತ್ತಾರೆ. ಪುರಾಣದಲ್ಲಿ ಋಷಭ ದೇವ ಕಬ್ಬಿನ ರಸ ಕುಡಿದು ತನ್ನ ಅಖಂಡ ವ್ರತಕ್ಕೆ ಅಂತ್ಯ ಸಾರಿದನೆಂಬ ಪ್ರತೀತಿಯ ಹಿನ್ನೆಲೆಯಲ್ಲಿ ಈಗಲೂ ಕಬ್ಬಿನ ರಸ ಕುಡಿದೇ ಉಪವಾಸ ಪರಿಸಮಾಪ್ತಿ ಗೊಳಿಸುವುದು ಪದ್ಧತಿ.

ದಕ್ಷಿಣಾಯನದಲ್ಲಿ ವಿಜಯ ದಶಮಿಯಾದರೆ ಉತ್ತರಾಯಣದಲ್ಲಿ ಅಕ್ಷಯ ತದಿಗೆ ಇವೆರಡೂ ತಿಥಿ ಪ್ರಧಾನವಾಗಿ ಗುರುತಿಸಲ್ಪಡುವ ದಿನಗಳು. ತ್ರೇತಾಯುಗಕ್ಕೆ ಇದು ಆರಂಭದ ದಿನವೆಂಬ ನಂಬುಗೆ ನಮ್ಮಲ್ಲಿದೆ. ಅದರಂತೆ ಇದು ಕಲ್ಪಾದಿಯ ದಿನವೂ ಅಹುದು.ಚೈತ್ರ ಮಾಸದಲ್ಲಿ ಪೂಜೆಗೊಳ್ಳುತ್ತಾ ಬಂದಿದ್ದ ಡೋಲಾಗೌರಿಯ ಪೂಜೆಗೆ ಇಂದು ಕೊನೆಯ ದಿನ. ಸುಮಂಗಲಿಯರ ಇಂದಿನ ಸಡಗರ ಸಂಭ್ರಮಗಳ ಸೊಗಸನ್ನು ನೋಡಿಯೇ ಅನುಭವಿಸಬೇಕು. ಧರ್ಮ ಸಾಧನೆ ಮಾಡಬೇಕೆನ್ನುವವರಿಗೆ ವೈಶಾಖ ಮಾಸದ ಒಂದೊಂದು ದಿನವೂ ಯೋಗ್ಯ ದಿನವೆಂದು ತಿಳಿದು ಬರುತ್ತದೆ. ಉಳ್ಳವರು ಇಲ್ಲದವರಿಗೆ ನೀಡುವುದರಲ್ಲಿಯೇ ಇಹಪರಗಳ ಸಾರ್ಥಕ್ಯವಿದೆ. ಶಿವನ ಮುಡಿಯಿಂದ ಎಲ್ಲರ ದಾಹ ತಣಿಸುವ ಗಂಗೆ ಭೂಮಿಗೆ ಇಳಿದು ಬಂದ ಶುಭದಿನ ಕೂಡ ಇದೇ ಎಂದು ನಂಬಲಾಗಿದೆ.

ಬದರಿನಾರಾಯಣನ ಮಂದಿರದ ದ್ವಾರವನ್ನು ತೆರೆಯುವುದು ಅಕ್ಷಯ ತೃತೀಯದಂದು. ಅದು ಮುಕ್ತಿದ್ವಾರವನ್ನು ತೆರೆಯುವ ತಿಥಿ ಎಂದು ಪರ್ಯಾಯವಾಗಿ ಹೇಳಬಹುದು. 12 ನೇ ಶತಮಾನದ ಮಹಾ ಪುರುಷ ಜಗಜ್ಯೋತಿ ಬಸವಣ್ಣನವರು ಜನಿಸಿದ್ದು ಕೂಡ ಇದೇ ದಿನ. ಅಂದು ಸೂರ್ಯ ಮತ್ತು ಚಂದ್ರರಿಬ್ಬರು ಅವರ ಉಜ್ವಲತೆಯ ಉತ್ತುಂಗದಲ್ಲಿತ್ತಾರೆ. ಹಗಲೂ ಪ್ರಖರ, ರಾತ್ರಿಯೂ ತುಂಬ ಬೆಳಕು! ಮಗದೊಂದು ಗರಿಮೆ ಅಂದರೆ ವಾದೀಂದ್ರರು ಗುರು ಗುಣಸ್ತವನವನ್ನು ಈ ದಿನದಂದೇ ಮಂತ್ರಾಲಯ ಗುರು ಸಾರ್ವಭೌಮರಿಗೆ ಭಕ್ತಿ ಭಾವದಿಂದ ಸಮರ್ಪಿಸಿದರೆಂದೂ, ಅವರ ಭಕ್ತಿ ಭಾವಗಳಿಗೆ ಪುಳಕಿತರಾಗಿ ರಾಘವೇಂದ್ರರು ವೃಂದಾವನ ಸಮೇತವೇ ತಲೆದೂಗಿ ವಾದೀಂದ್ರರ ಕೀರ್ತಿಯನ್ನು ಅನೇಕ ತಲೆಮಾರುಗಳ ತನಕ ಹಬ್ಬಿಸಿ ಅನಂತ ಫಲ ನೀಡಿದ್ದು ಅಕ್ಷಯ ತೃತೀಯ ಮಹಿಮೆಯೇ ಆಗಿದೆ. ಹೀಗಾಗಿ ಅಂದು ಗಂಧ ಲೇಪಿತ ಗುರು ರಾಜನ ದರ್ಶನ,ಪರಮ ಮಂಗಳಕರ.

ಇಷ್ಟೇ ಏಕೆ? ಇದರ ಹೆಗ್ಗಳಿಕೆ ಮತ್ತೊಂದು ಹಿನ್ನೆಲೆಯಿದೆ. ಇಂದಿನ ಶುಭ ದಿನದಂದೆ ಪರಮ ಪವಿತ್ರಳಾದ ಸೀತಾ



ದೇವಿಯ ಅಗ್ನಿ ಪರೀಕ್ಷೆಯಿಂದ ಬಾಹ್ಯವಾಗಿಯೂ ಪರಿಶುದ್ಧತೆಯನ್ನು ಪ್ರಕಟಪಡಿಸಿದ್ದು, ಸದಾ ಪರಿಶುದ್ಧಳ ಪುನಃ ಪರಿಶುದ್ಧತೆ ಸದಾ ಸಂಪಾದಿಸಬೇಕಾದ ಜ್ಞಾನವನ್ನು ಪುನಃ ಸಂಪಾದಿಸುವ, ಜ್ಞಾನಯಜ್ಞದ ಪ್ರತೀಕವೂ ಆಗಿದೆ.

ಇನ್ನು ಬೇಸಿಗೆ ಕಾಲದಲ್ಲಿತಣ್ಣೀರನ್ನು ದಾನ ಮಾಡುವುದರಿಂದ ಅಕ್ಷಯ ಪುಣ್ಯ. ಪ್ರಾಣಾಪಾನಗಳ ಪೂರ್ಣ ಸ್ತಂಭನ ರೂಪವಾದ ಕುಂಭಕ ಯೋಗದ ನಿಶ್ಚಲತೆಯನ್ನು ಅದು ಸ್ಮೃತಿಗೆ ತರುತ್ತದೆ. ಅಂತಹ ಜಲವನ್ನು ಹೊತ್ತಿರುವ ಕಲಶವು ತಳದಲ್ಲಿ ಚಿಕ್ಕದಾಗಿದ್ದು ಮಧ್ಯದಲ್ಲಿ ವಿಸ್ತಾರವಾಗಿದ್ದು, ಮತ್ತೆ ಮುಖದಲ್ಲಿ ಕಿರಿದಾಗಿ ಸೃಷ್ಟಿ ಸ್ಥಿತಿ ಲಯಗಳನ್ನು ಹೊಂದುವ ವಿಶ್ವವನ್ನು, ಅವುಗಳನ್ನು ನಿರ್ವಹಿಸುವ ಭಗವಂತನ ತ್ರಿಮೂರ್ತಿ ತತ್ವವನ್ನು ಹೇಳುತ್ತದೆ. ಕಲಶ ಪೂಜೆಯ ಮಂತ್ರದಲ್ಲಿ ಈ ಅರ್ಥವನ್ನು ಕಾಣುತ್ತೇವೆ. ಹೀಗೆ ಅಕ್ಷಯ ತೃತೀಯ ಪರ್ವದ ಕಾಲ ಜ್ಞಾನ, ದ್ರವ್ಯಜ್ಞಾನ,ವಿಧಿಜ್ಞಾನ, ಪೂರ್ವಕವಾಗಿ ಈ ಹಬ್ಬವನ್ನು ಆಚರಿಸಿದರೆ ಅದರ ಹೆಸರಿಗೆ ಅನ್ವರ್ಥವಾದ ಅಕ್ಷಯ ಫಲವು ನಿಶ್ಚಿತವಾಗಿ ಸಿದ್ಧಿಸುವುದು.

ಅಕ್ಷಯ ತೃತೀಯದಂದು ಹುಟ್ಟಿದವರು ಜೀವನದಲ್ಲಿ ಒಳ್ಳೆಯ ಕೆಲಸ ಮಾಡಿ ಹೆಸರುಗಳಿಸುತ್ತಾರೆ ಎನ್ನುವುದೂ ಉಂಟು. ಅದಕ್ಕೆ ಉದಾಹರಣೆಯೆಂಬಂತೆ ವೈಶಾಖ ಮಾಸದಲ್ಲಿ ಬಸವೇಶ್ವರ,ರಾಮಾನುಜಾಚಾರ್ಯ ಹಾಗೂ ಶಂಕರಾಚಾರ್ಯ ಮತ್ತು ಗೌತಮ ಬುದ್ಧ ಜನಿಸಿ ಹೆಸರುವಾಸಿಯಾಗಿದ್ದಾರೆ.

ಕೆಲವರು ಮಹಾಲಕ್ಷ್ಮಿ ದೇವಸ್ಥಾನಕ್ಕೆ ಹೋಗಿ ನಾಲ್ಕು ದಿಕ್ಕಿಗೆ ನಾಲ್ಕು ನಾಣ್ಯಗಳನ್ನು ಎಸೆಯುತ್ತಾರೆ. ಹೀಗೆ ಮಾಡಿದರೆ ಅದೃಷ್ಟದ ಬಾಗಿಲು ತೆರೆಯುತ್ತದೆ ಎನ್ನಲಾಗುತ್ತದೆ. ಮದುವೆಯಾದ ಮಹಿಳೆಯರು ಸಿಂಧೂರದಲ್ಲಿ ಅದ್ದಿದ ಕೆಂಪು ದಾರ ಧರಿಸಿ, ಶಿವ ಮಂದಿರಕ್ಕೆ ಭೇಟಿ ನೀಡಿ ಪತಿಯ ದೀರ್ಘಾಯುಷ್ಯಕ್ಕಾಗಿ ಮತ್ತು ಮದುವೆಯಾಗದವರು ಅದನ್ನು ಶಿವನ ಪಾದದ ಮೇಲಿಟ್ಟು ತಾವು ಬಯಸಿದಂಥ ಪತಿಯನ್ನು ಕರುಣಿಸಲು ಬೇಡಿಕೊಳ್ಳುತ್ತಾರೆ.

**ಕಾಲ ಕಾಮ ಪರಶುರಾಮ**

ಮಹಾ ವಿಷ್ಣುವಿನ ಆರನೇ ಅವತಾರವಾದ ಪರಶುರಾಮ ದೈಹಿಕ ಮತ್ತು ಬೌದ್ಧಿಕತೆಯ ದೃಷ್ಟಿಯಿಂದಲೂ ಪರಿಪೂರ್ಣ ಅವತಾರ. ಅದು ಆದದ್ದು ಇದೇ ಅಕ್ಷಯ ತೃತೀಯದಂದು. ಜಮದಗ್ನಿ - ರೇಣುಕೆಯ ಮಗನಾಗಿ ಜನನ. ದೈವೀ ಸ್ವರೂಪ ಮತ್ತು ಪವಾಡಗಳ ಹೊರತಾಗಿ ಶ್ರೀ ಪರಶುರಾಮನ ವ್ಯಕ್ತಿತ್ವವನ್ನು ಅವಲೋಕಿಸಿದಾಗ ಆತ ಒಬ್ಬ ಮಹಾನ್ ನಾಯಕ. ಆದರ್ಶ ಗುರು. ತ್ರೇತಾಯುಗದಲ್ಲೂ ಯುಗ ಧರ್ಮವನ್ನು ಮೀರಿ ಅತ್ಯಾಚಾರ - ಅನಾಚಾರ - ಭ್ರಷ್ಟಾಚಾರವೆಂಬ ಸಹಸ್ರಬಾಹುಗಳ ಕಾರ್ತವೀರ್ಯನ ರೂಪದಲ್ಲಿ ಪ್ರಕಟವಾದಾಗ ಕೊಡಲಿಯೆತ್ತಿ ಸಮರ ಸಾರಿ ಜಯ ಶೀಲರಾದ ಗಂಡುಗಲಿ.

ತಂದೆಯ ಮಾತನ್ನು ನಡೆಸಿಕೊಡುವಲ್ಲಿ ಕಾಣುವ ಅಸಾಧಾರಣ ಪಿತೃಭಕ್ತಿ. ಮೃತಳಾದ ತಾಯಿ, ತಮ್ಮಂದಿರನ್ನು ಬದುಕಿಸಲು ವರವನ್ನು ಬೇಡುವಲ್ಲಿ ಕಂಡು ಬರುವ ಅನನ್ಯ ಅಸಾಧಾರಣ ಮಾತೃಭಕ್ತಿ. 21 ಸಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯ ಸಂಹಾರದಿಂದ ಗಳಿಸಿದ ಭೂಮಿಯನ್ನು ತಾನು ಅನುಭವಿಸದೇ ಸ್ವಜನರಿಗೆ ದಾನವಿತ್ತ ಉದಾರತೆ , ಕೊಡಲಿಯೆಸೆದು ಸಮುದ್ರ ರಾಜನಿಂದ ಪಡೆದ ಭೂಮಿಯಲ್ಲಿ ತೋರಿದ



ಹೊಸ ಸೃಷ್ಟಿಯ ಸಾಮರ್ಥ್ಯ. ಅನಂತರ ಲೋಕ ಕಲ್ಯಾಣಾರ್ಥವಾಗಿ ಮಹೇಂದ್ರ ಪರ್ವತದಲ್ಲಿ ತಪಸ್ಸಾಚರಣೆ ಹಾಗಾಗಿ ಚಿರಂಜೀವಿ ಭವಿಷ್ಯ ಪುರಾಣ ದಲ್ಲಿ ಶ್ರೀ ಕೃಷ್ಣ ಪರಮಾತ್ಮನೇ ಇದರ ಅಸಾಧಾರಣ ಮಹಿಮೆಯನ್ನು ವರ್ಣಿಸಿ ರುವುದಾಗಿ ಉಲ್ಲೇಖವಿದೆ.

ನಮ್ಮ ಕರ್ನಾಟಕಕ್ಕೂ ಪರಶು ರಾಮನಿಗೂ ನಿಕಟ ಸಂಬಂಧವಿದೆ. ಕನ್ನಡ ನಾಡಿನ ಒಂದು ದೊಡ್ಡ ಭಾಗವನ್ನು ಪರಶುರಾಮ ಕ್ಷೇತ್ರ ಎನ್ನುತ್ತೇವೆ. ಚಿಕ್ಕಮಂಗಳೂರು ಸಮೀ ಪದ ಹಿರೇಮಂಗಳೂರು ಶ್ರೀರಾಮ ಪರಶುರಾಮ ಸಂಧಿಸಿದ ಸ್ಥಳ ಭಾರ್ಗವ ಪುರಿ. ಮಹಾಭಾರತದ ವೀರ ಯೋಧ ಕರ್ಣ ತನ್ನ ಸ್ವಯಂಕೃತ ಅಪರಾಧದಿಂದ ಪರಶುರಾಮರಿಂದ ಶಾಪಗ್ರಸ್ತನಾದ. ಹಾಗಾಗದೇ ಇದ್ದಲ್ಲಿ ಮಹಾಭಾರತದ ಕಥೆಯೇ ಬೇರೆಯಾಗು ತ್ತಿತ್ತೇನೋ ಪರಶುರಾಮನನ್ನು ಕಾಲಕಾಮನೆಂದೂ ಕರೆಯಲಾಗುತ್ತದೆ. ಸೃಷ್ಟಿ - ಸ್ಥಿತಿ-ಲಯಗಳೆಂಬುದು ತ್ರಿವಿಧ ವ್ಯಾಪಾರಕ್ಕೆ ಕಾಲ ಮತ್ತು ಕಾಮಗಳು ಪ್ರೇರಕ.ಕಾಲವೆಂಬುದು ಶಿವ ಸ್ವರೂಪ ಮತ್ತು ಕಾಮವೆಂಬುದು ವಿಷ್ಣು ಸ್ವರೂಪ ವೆಂದಾದಲ್ಲಿ ಕಾಲಕಾಮ (ಪರಶುರಾಮ ) ಶೈವ - ವೈಷ್ಣವ ಪಂಥಗಳಿಬ್ಬರಿಗೂ ಮಾನ್ಯ.

### ಅಕ್ಷಯತದಿಗೆಯೂ ಬಂಗಾರ ಖರೀದಿಯೂ..

ಅಕ್ಷಯತದಿಗೆಯ ಪ್ರಮುಖ ಕಾರ್ಯ ಚಿನ್ನದ ಖರೀದಿ. ಅಂದು ಎಲ್ಲಾ ಆಭರಣ ದಂಗಡಿಗಳೂ ಗೋಲ್ಡ್ ರಷ್ ಡೇ ಆಗಿರುತ್ತದೆ. ಬಂಗಾರದ ಬಗ್ಗೆ ನಮಗೆ ಇಷ್ಟೊಂದು ಆಕರ್ಷಣೆ ಯಾಕೆ? ಶುದ್ಧ ಮನಸ್ಸು, ಶುದ್ಧಾತ್ಮರಿಗೆ ಅಪ್ಪಟ ಬಂಗಾರ ಎನ್ನುತ್ತಾರೆ. ಚಿನ್ನ ಪವಿತ್ರತೆಯ ಸಂಕೇತ, ಶುದ್ಧತೆಯ ಚಿಹ್ನೆ ಸಮೃದ್ಧಿಯ ದ್ಯೋತಕವೂ ಹೌದು. ಮೈ ಮೇಲೆ ಧರಿಸಿದರೆ ದೇಹಾರೋಗ್ಯಕ್ಕೂ ಹಿತಕರ. ಉಳಿತಾಯ ಮತ್ತು ಹೂಡಿಕೆ ಸದುಪಯೋಗಕ್ಕೆ ಶ್ರೇಷ್ಠ ವಸ್ತುವಾಗಿದೆ.

### ಮಹಿಳಾ ಸಬಲೀಕರಣಕ್ಕೆ ಒತ್ತು

ಮದುವೆಯಾದ ಕ್ಷಣದಿಂದ ವಧು ಮಡದಿಯಾಗುತ್ತಾಳೆ. ಅವಳ ಮಾನ ಪ್ರಾಣ ರಕ್ಷಣೆ ಬರೀ ಬಾಯಿ ಮಾತಿನದ್ದಾಗಬಾರದು. ಆರ್ಥಿಕ ಭದ್ರತೆ ಸೇರಬೇಕು ಎಂಬ ವಿಚಾರಧಾರೆಯ ಪ್ರತ್ಯಕ್ಷ ಆಚರಣೆ ತಾಳಿಕಟ್ಟುವ ರೂಢಿಯಲ್ಲಿದೆ. ನೋಡಲು ಧಾರ್ಮಿಕ ವಿಧಿಯಾದರೂ ಮಡದಿಯ ರಕ್ಷಣೆ ತನು, ಮನ, ಧನಗಳಿಂದ ಮಾಡ ಬೇಕು ಎಂಬ ಅರ್ಥಪೂರ್ಣ ಆರ್ಥಿಕ ವಿಧಿಯನ್ನು ಜೀವನದಲ್ಲಿ ಅಳವಡಿಸಿದ್ದು ನಮ್ಮ ವರ ಅರ್ಥಶಾಸ್ತ್ರದ ಅನ್ವಯಿಸುವಿಕೆಗೆ ಉದಾಹರಣೆ ಎನ್ನುವುದಕ್ಕೆ ಸಾಕ್ಷಿ, ಮಾನ, ಪ್ರಾಣ ಹೋಗುವ ಪ್ರಸಂಗಗಳಲ್ಲಿ ಸ್ತ್ರೀ ತನ್ನ ಆಭರಣಗಳನ್ನು ಮತ್ತು ಕನಿಷ್ಠ ಬಂಗಾರ ದ್ದಾಗಿರುವ ತಾಳಿಯನ್ನು ಮಾರಿ ತನ್ನನ್ನು ತಾನು ರಕ್ಷಿಸಿಕೊಳ್ಳಲಿ ಎಂಬ ಸದಿಚ್ಛೆ ಇದೆ.

ಚಿನ್ನಾಭರಣ ಖರೀದಿಸುವ ಮೊದಲು ಅವುಗಳ ಪರಿಶುದ್ಧತೆ, ಮಳಿಗೆಗಳು ವಿಧಿಸುವ ಮಜೂರಿ, ಸವಕಳಿ ಶುಲ್ಕ ಕೆಡಿಎಂ ಮೊದಲಾದವುಗಳನ್ನು ಗಮನದಲ್ಲಿಟ್ಟು ಕೊಂಡರೆ ಒಳಿತು, ಖರೀದಿಗೆ ತೆರಳುವ ಮುನ್ನ ಕೆಲವು ಎಚ್ಚರಿಕೆಗಳನ್ನು ಗಮನ ದಲ್ಲಿರಿಸಿ ಕೊಳ್ಳುವುದು ಒಳ್ಳೆಯದು ಚಿನ್ನದ ಕ್ಯಾರೆಟ್, ಬಿಐಎಸ್ ಹಾಲ್‌ಮಾರ್ಕ್ ಮೊದಲಾದವುಗಳ ಬಗ್ಗೆ ವಿವರವಾಗಿ ಅಲ್ಲದಿದ್ದರೂ ಕೆಲ ಮಟ್ಟಿಗಾದರೂ ತಿಳಿದು ಕೊಂಡಿರುವುದು ಅಗತ್ಯ.

ಕಂಜೂಸು ಪತಿ, ಪ್ರಿಯಕರನಿಗೆ ಬುದ್ಧಿ ಕಲಿಸಲು ಕಾಯುತ್ತಿರುವ ವನಿತೆ ಯರಿಗೆ ಅಕ್ಷಯ ತದಿಗೆ ಬಂದರೆ ಬಲು ಖುಷಿ. ಇನಿಯಾ, ಉಳಿದ ದಿನ ಬದಿಗಿರಲಿ, ಅಕ್ಷಯ ತದಿಗೆಗಾದರೂ ಬಂಗಾರದ ಒಡವೆ ಕೊಡಿಸೆಯಾ ಎಂದು ನಯವಾಗಿ ಅವರನ್ನು ಪೇಚಿಗೆ ಸಿಲುಕಿಸಲು ಈ ದಿನ ಅವರ ಪಾಲಿನ ಸುದಿನ.

ಚಿನ್ನದ ಬೆಲೆಯು ಒಂದರ್ಥದಲ್ಲಿ ಮಾಯಾ ಜಿಂಕೆಯಂತಿದೆ. ಚಿನ್ನಾಭರಣ ಪ್ರಿಯರು, ಸಂಗ್ರಹಕಾರರು, ಹಣ ಹೂಡಿಕೆದಾರರು, ನಿರಂತರವಾಗಿ ಅದರ ಬೆನ್ನ ಹಿಂದೆ ಬಿದ್ದಿದ್ದಾರೆ. ಮಾಯಾ ಜಿಂಕೆ ಮಾತ್ರ ಇವರ ಅಂಕೆಗೆ ಸಿಗದೆ ಓಡುತ್ತಲೆ ಇದೆ. ಚಿನ್ನದ ಬೆಲೆ ಈ ಪರಿ ದಾಖಲೆ ಮಟ್ಟಕ್ಕೆ ತಲುಪಲು ಸ್ಥಳೀಯ ಕಾರಣಗಳೇನೂ

ಪ್ರಭಾವಬೀರಿಲ್ಲ. ಸಾಗರೋತ್ತರ ಮಾರುಕಟ್ಟೆಯಲ್ಲಿನ ವಿದ್ಯ ಮಾನಗಳೇ ಇದಕ್ಕೆ ಕಾರಣ.

**ವಿಶಿಷ್ಟ ಮಹಿಮೆಯ ವೈಶಾಖ ಮಾಸ**

ಈ ವೈಶಾಖ ಮಾಸವು ಪ್ರಾಚೀನ ಸಂಸ್ಕೃತಿ ಸಂಪ್ರದಾಯಗಳ ಸ್ಮಾರಕಗಳ ಆಗರ ವಿಶಾಖ ನಕ್ಷತ್ರದ ಮೂಲಕ ಈ ಮಾಸವು ವೈಶಾಖ ಎಂದು ಹೆಸರನ್ನು ಪಡೆದಿದೆ. ಬೇಸಿಗೆಯ ನೇಸರು ತನ್ನ ಶಾಖವನ್ನು ಹರಡುತ್ತಿದ್ದರೂ ಕಾಡೆಲ್ಲವೂ ತಳಿರು-ಹಸಿರುಗಳಿಂದ ತುಂಬಿರುವುದು ಸೌರ ಮಾನದ ವೃಷಭ ಮಾಸವು ಈ ತಿಂಗಳಲ್ಲಿಯೇ ಪ್ರಾರಂಭ ವಾಗುವುದು.ವೈಶಾಖ ಮಾಸದ ಪ್ರಾಕೃತಿಕ ಸೌಂದರ್ಯಕ್ಕೆ ಮನಸೋತ ಸುಪ್ರಸಿದ್ಧ ಕವಿಗಳೆಲ್ಲರೂ ಇದರ ಮೇಲ್ಮೆಯನ್ನು ಮೆಚ್ಚಿಕೊಂಡಿದ್ದಾರೆ.

ವೈಶಾಖ ಮಾಸದ ಮಹಾತ್ಮವು ಹೇಳುವ ಪೌರಾಣಿಕ ಕಥೆಗಳಲ್ಲಿ ಹುದುಗಿರುವ ರಹಸ್ಯವನ್ನು ವಿಶ್ಲೇಷಿಸಿ ನೋಡುತ್ತಾ ಹೋದರೆ,ಅದರಲ್ಲಿ ಸಾಮಾಜಿಕ ಜೀವನದ ಸುಖ - ಸಮಾಧಾನಕರ ಆದರ್ಶವೇ ನಮಗೆ ಎದ್ದು ಕಾಣುವುದು.

ಕತ್ತಲೆಯ ಆಟ ಸೂರ್ಯ ಬರುವವರೆಗೆ ಮಾತ್ರ. ಪಾಪದಿಂದ ಪರದಾಟ ವೈಶಾಖ ಬರುವವರೆಗೆ ಮಾತ್ರ! ವೈಶಾಖ ಬಂದರೆ ಎಲ್ಲವೂ ಸಿದ್ಧಿಸಿದಂತೆಯೇ ಸರಿ. ಮಾಸಗಳಲ್ಲಿ ಮಿನುಗುವ ಕಾರ್ತೀಕ ಮಾಸಕ್ಕಿಂತಲೂ ಸಾವಿರದಷ್ಟು ಮಿಗಿಲಾದ ಮಾಸ ಮಾಘಮಾಸ.ಮಾಸರಾಜನೆನಿಸಿದ ಮಾಘಕ್ಕಿಂತ ನೂರುಪಟ್ಟು ವೈಶಿಷ್ಟಪೂರ್ಣವಾದುದು ವೈಶಾಖ ಮಾಸ (ಪದ್ಮಪುರಾಣ).

ಬಿಸಿಲಿನ ಝಳದಿಂದ ಬಳಲಿ ಬೆಂಡಾಗುವ ಮಾನವ ನೀರಿಲ್ಲದೆ ಬದುಕಲು ಸಾಧ್ಯವೇ? ನೀರನ್ನು ಕುಡಿಯುವಾಗ ಸಿಗುವ ನೆಮ್ಮದಿ ನೀರಿನ ಮಹಿಮೆಯಲ್ಲ. ನೀರಿನಲ್ಲಿ ಮಲಗಿದ ನಾರಾಯಣನ ಮಹಿಮೆ. ಆಷಾಢಮಾಸದಲ್ಲಿ ಕೆಸರಿನ ನೆವದಿಂದ, ಮಳೆಯ ತೊಂದರೆಯಿಂದ ಮಾನವ ಮೈಗಳ್ಳನಾದಾಗ,ಮಾಧವ ಕುಪಿತನಾದರೂ ತಾಳಿಯಾನು! ಕಾರ್ತೀಕದಲ್ಲಿ ತ್ತುಲೆಯ ನೆಪ ಮಾಡಿ, ಕೃಷಿಯ ಕಾರಣ ಬಡ್ಡಿ ತಪ್ಪಿಸಿಕೊಳ್ಳುವವರನ್ನು ದೇವ ಕ್ಷಮಿಸಿಯಾನು ಉದರ ಪೋಷಣೆಗಾಗಿ ಧರ್ಮ ಬಿಟ್ಟ ಶೋಚನೀಯರು ಎಂದು ಖೇದ ವ್ಯಕ್ತಪಡಿಸಿಯಾನು! ಮಾಘದಲ್ಲಿ ಚಳಿಯಿಂದ ನಡುಗುತ್ತಾ ಸ್ನಾನಕ್ಕೆ ಹಿಂದೆ-ಮುಂದೆ ನೋಡುವವರನ್ನು ಸಹ ಕ್ಷಮಿಸಿಯಾನು! ಆದರೆ ವೈಶಾಖ ಮಾಸ ವೈಶಿಷ್ಟಪೂರ್ಣವಾದ ಮಾಸ. ರಾತ್ರಿ ಹೊತ್ತಾದರೂ ಮಲಗಲಾಗದ ಸೆಕೆ, ಉರಿಧಗೆಗೆ ಮಾನವನನ್ನು ಹಾಗೆಯೇ ಹಾಸಿಗೆಯಿಂದೆಬ್ಬಿಸುತ್ತದೆ! ಚಳಿಯಂತೂ ಇಲ್ಲವೇ ಇಲ್ಲ. ತಣ್ಣೀರಂತೂ ತಂಪೆರೆಯುವ ಮಹೋನ್ನತ ಸಾಧನ.ಹೀಗಿರುವಾಗಲೂ ಸ್ನಾನ ಮಾಡಲು ಮುನ್ನುಗ್ಗದ ಸೋಮಾರಿ ಮಾನವರನ್ನು ಮಾಧವ ಶಪಿಸುವುದು ಖಂಡಿತ ಎಂದಿದೆ ಸ್ಕಂದ ಪುರಾಣ.

ನೀರಿನಲ್ಲಿರುವ ದೇವನ ಅನುಗ್ರಹಕ್ಕಾಗಿ ಸ್ನಾನ ಮಾಡಲು ಅರುಣೋದಯಕ್ಕೆ ಸನ್ನದ್ಧವಾಗಲೇಬೇಕು. ಸನ್ ಸ್ಟ್ರೋಕ್ ಹೊಡೆದವರಿಗೆ ನೀರಿನ ಮಹಾತ್ಮೆ ಗೊತ್ತು. ಬಾಯಾರಿದವರಿಗೆ ಅದರ ಗುಣಗೊತ್ತು.ಬೆವರಿನಲ್ಲಿ ತೊಯ್ದವನಿಗೆ ಅದರ ಆಯಾಸ ಪರಿಹಾರಕ ಗುಣ ಗೊತ್ತು. ಇದಕ್ಕೆ ನೀರಿನಲ್ಲಿ (ಈ ಗುಣ ಈ ಕಾಲದಲ್ಲಿ)ರುವ ದೇವನ ಸನ್ನಿಧಾನವೇ ವಿಶೇಷ ಕಾರಣ.ಈ ಮಾಸದಲ್ಲಿ ಹರಿಯು ಹಿರಣ್ಯಾಕ್ಷನನ್ನು ಕೊಂದದ್ದು. ಈ ಮಾಸದಲ್ಲಿಯೇ ಮಧು ಎಂದು ದೈತ್ಯನನ್ನು ಕೊಂದು,ಭೂಮಿಯನ್ನು ಪರಮಾತ್ಮ ಉದ್ಧರಿಸಿದ್ದು.

ಆಗ ಭೂಮಿಯ ದೇವತೆಯು ಭಗವಂತನೊಡನೆ 12 ಮಾಸಗಳಲ್ಲಿ ಸಾಧನೆಗೆ ಯಾವ ಕಾಲ ಶ್ರೇಷ್ಠವೆಂದು ಮೆಲ್ಲನೆ ಕೇಳಿದಳು. ಭಗವಂತ ಉಸುರಿದ ವೈಶಾಖ ಮಾಸದಲ್ಲಿ ನನ್ನನ್ನು ಹೇಗೆ ಪೂಜಿಸಿದರೂ ನಾನು ಪ್ರೀತನಾಗುವೆ ಎಂದು.

ದಾನ ಜ್ಞಾನಗಳ ಪ್ರಮುಖ ಕಾರಣವಾದ ಮಗದೊಂದು ಸಾಧನ ಸ್ನಾನ. ದೇಹಶುದ್ಧಿಗೆ ಕಾರಣವಾದ ಸ್ನಾನದಂಥ ಸಾಮಾನ್ಯ ಪದ್ಧತಿಯೂ ಸಹ ಕಾಲನಿಯಮಕ್ಕೆ ಒಳಪಟ್ಟು ಶಾಸ್ತ್ರೀಯವಾಗಿ ಆಚರಿಸುವಾಗ ಅದು ಪರಮಾತ್ಮನ ಅನುಗ್ರಹಕ್ಕೆ ನೇರ ಸೋಪಾನವಾಗುತ್ತದೆ. ಸದಾ ಬಿಸಿಯಾಗಿರುವ, ದುಡಿಯುವ ದೇಹ ಒಂದು ದೊಡ್ಡ ಜನರೇಟರ್ ಯಂತ್ರದಂತೆಯೇ ಆಗಿದೆ. ಇದಕ್ಕೆ ತಾಪ ತಾಳಿ ಕೊಳ್ಳಲು ಶಕ್ತಿ ಬರಬೇಕಾದರೆ ವಾತಾವರಣ ತಂಪಾಗಿರುವಾಗಲೇ,ದುಡಿತಕ್ಕೆ ಆರಂಭವಾಗುವ ಮೊದಲೇ ತಣ್ಣೀರನ್ನೆರೆಯಬೇಕು. ತುಂಬಾ ದೂರ ಓಡಿದ ವಾಹನ ತಣ್ಣಗಾಗಲೀ ಎಂದು ಇಂಜಿನ್‌ಗೆ ತಣ್ಣೀರು ಹಾಕುವುದಿಲ್ಲವೆ? ನಮ್ಮ ದೇಹ ಅದಕ್ಕಿಂತಾ ಕಮ್ಮಿಯೇನು? ಹೀಗಾಗಿ ವೈದ್ಯಶಾಸ್ತ್ರ ತಣ್ಣೀರನ್ನೇ ಆಯ್ಕೆ ಮಾಡುತ್ತದೆ.ಅದರಲ್ಲೂ ಸಹ ಉರಿ ಧಗೆಯ ಕಾಂಕ್ರೀಟ್ ಮನೆಯ ತೊಟ್ಟಿಗಿಂತ ಹೊರ ವಾತಾವರಣದಲ್ಲಿರುವ ಭೂಮಿ, ಕೆರೆ, ಪುಷ್ಕರಿಣಿ, ನದಿ ಇವುಗಳು ಖಂಡಿತವಾಗಿಯೂ ಶ್ರೇಷ್ಠ.

ಈ ರೀತಿ ನೀರು ಸೂರ್ಯನ ಕಿರಣಗಳಿಂದ ಪರಿಶುದ್ಧವಾಗಿಯೂ,ತಂಪಾಗಿಯೂ ಇರುತ್ತದೆ. ಇಂತಹ ಜಲವು ಜಾಡ್ಯ ಹೋಗಿಸುವಂತೆ ಕ್ರಿಯಾ ಶೀಲತೆಯನ್ನು ತರುತ್ತದೆ. ಮೂರ್ಛೆ ಹೋಗಿ ಜ್ಞಾನ ತಪ್ಪಿದವನಿಗೆ ನೀರನ್ನು ಚುಮುಕಿಸಿದರೆ ಸಾಕು,

ಆತ ಎಚ್ಚರಗೊಳ್ಳುವ, ತಲೆ ತಿರುಗಿ ಬಿದ್ದವನಿಗೆ ನೀರು ಕುಡಿಸಿದರೆ ಆತ ಮೊದಲಿನಂತಾಗುವ, ನಿಶ್ಯಕ್ತನಾದವನು ಚಿಕಿತ್ಸಾಲಯದಲ್ಲಿದ್ದಾಗ ಅವನಿಗೆ ಶಕ್ತಿ ತುಂಬಲು ನೀಡುವುದು (ಗ್ಲೂಕೋಸ್ ವಾಟರ್) ಪ್ರಸಿದ್ಧ ಅಲ್ಲವೇ? ಡೀಹೈಡ್ರೇಷನ್ ನಿಂದ ಕುಸಿದು ಬಿದ್ದವನಿಗೆ ನೀರಿನ ಮಟ್ಟ ಕುಸಿದದ್ದೇ ಕಾರಣವಲ್ಲವೆ? ನೀರು ಎಂಥವನನ್ನು ಗೆಟ್ ಅಪ್ ಮಾಡುವುದರಿಂದಲೇ ಅದಕ್ಕೇ ಅಪ್ ಎಂದೇ ಹೇಳಬಹುದು. ಅದಕ್ಕೆ ಆ ಶಕ್ತಿ ಬರಲು ಸಾಗರಶಾಯಿಯಾಗಿ ನಾರಾಯಣ ನೀರಲ್ಲೇ ಮಲಗಿದ್ದೇ ಕಾರಣವಾಯಿತು. ನೀರು ನರಗಳನ್ನು ಕ್ರಿಯಾಶೀಲವಾಗಿಸುತ್ತದೆ. ಮೀನಿನ ಚರ್ಮ ಮಿನುಗಲು ಅದು ನೀರಿನಲ್ಲಿರುವುದು ಕಾರಣ. ಪ್ರತಿನಿತ್ಯ ಸ್ನಾನವು ಚರ್ಮಕಾಂತಿಗೆ ಪೂರಕವೂ ಹೌದು ಮಣ್ಣಿನ ಬಟ್ಟೆ ಶುಚಿಯಾಗಲು ನೀರಿನಲ್ಲಿ ಒಗೆಯಬೇಡವೇ? ಮಣ್ಣಿನ ಈ ದೇಹ ಶುಚಿಯಾಗಿಡಲು ನೀರಿನಿಂದ ತೊಳೆಯದಿದ್ದರೆ ಆದೀತೇ? ತಣ್ಣೀರಿನ ಸ್ನಾನವು ಪಂಚನಾಂಗಗಳಿಗೆ ಚುರುಕು ತನವನ್ನುಂಟು ಮಾಡುವುದು ನಿಜ. ಕೇಶ ಸಂಪತ್ತಿನ ರಾಜ ಮಾರ್ಗವೂ ಹೌದು. ಎಣ್ಣೆ - ನೀರು ಕಾಣದ ಕೂದಲು ಜಡೆ ಗಟ್ಟಿ ವಕ್ರವೂ ವಿಕಾರವೂ ಆಗುವುದು ಅನುಭವಸಿದ್ಧ.

ನೀರು ದೇಹದ ಹೊರಗೆ ಮಾತ್ರ ಏಕೆ? ಒಳಗೂ ಬೇಕೇ ಬೇಕು. ಊಟದ ಮಧ್ಯೆ ನೀರು ಕುಡಿಯಿರಿ ಎಂದಿದೆ ಆಯುರ್ವೇದ. ಮಧ್ಯೆ ಮಧ್ಯೆ ಪಾನೀಯಂ ಸಮರ್ಪಯಾಮಿ ಎಂಬ ವಿಧಿಬದ್ಧ ಕ್ರಿಯೆಯೂ ಇದೆ. ಹಾಗೆಯೇ ಕಿಡ್ನಿ ಸ್ಟೋನ್ಸ್ ನಿವಾರಣೆಗೆ ಹೆಚ್ಚು ನೀರು ಕುಡಿಯಿರಿ ಎನುತ್ತದೆ ವೈದ್ಯಶಾಸ್ತ್ರ.

ಇಂತಹ ಸ್ನಾನವನ್ನು ಅರುಣೋದಯಕ್ಕೆ ಆಚರಿಸಿದರೆ ಅನಂತ ಫಲವೆಂದೂ, ಇಂತಹ ಅದ್ಭುತ ಗುಣವಿರುವುದರಿಂದಲೇ ನೀರು ಉತ್ತಮ ಔಷಧಿ ಎನ್ನುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಬಿಸಿನೀರು ಮೈಗೆ ಹಿತ ನೀಡುತ್ತಾ ಮೈಮರೆಸಿದರೆ ತಣ್ಣೀರು ಜಾಗೃತ ಮಾಡಿ, ಎಚ್ಚರದಿಂದ ದೇವರ ಸ್ಮರಣೆಗೆ ಕಾರಣವಾಗುತ್ತದೆ. ಕೆಲವರಿಗೆ ಸ್ನಾನವೇ ಗಂಟೆ ಗಟ್ಟಲೆ ಮೋಜಿನ ಸಾಧನ. ಶಾಸ್ತ್ರೀಯರಿಗೆ ಅದು ದೇವರ ಜೊತೆಗೆ ಮೊದಲು ಆಗ ಬೇಕಾದ ಅನಿವಾರ್ಯವಾದ ಅವಸರದ ಪೀಠಿಕೆ. ಇದರಿಂದ ದೇಹ ಶುದ್ಧಿಯೊಂದಿಗೆ, ಮನಃಶುದ್ಧಿಯೂ,ಕಾಲ ಸಾರ್ಥಕ್ಯವೂ ಕರ್ತವ್ಯ ತತ್ಪರತೆಯೂ ಜೀವನ ಪರ್ಯಂತವಾಯಿತು.

ನನ್ನನ್ನು ಸೇವಿಸುವವರು ಏನನ್ನೂ ಬಿಡಬೇಕಾಗಿಲ್ಲ. ಯಾವುದಕ್ಕೂ ಒತ್ತಾಯವಿಲ್ಲ. ಆದರೆ ಸೋಮಾರಿತನವನ್ನು ಬಿಡಲೇ ಬೇಕೆಂಬ ನಿಯಮ ಇದ್ದೇ ಇದೆ ಎಂದಿದ್ದಾನೆ ಪರಮಾತ್ಮ! ಅಲ್ಲಾ ಒಂದು ಸಣ್ಣ ಸ್ನಾನಕ್ಕೆ ಅಷ್ಟು ದೊಡ್ಡ ಮಹತ್ವವೇ? ಸ್ನಾನ ಮಾಡಿದವನಿಗೆ ಅಕ್ಷಯ ಪುಣ್ಯ. ಅತುಲ ಸಂಪತ್ತು, ಅಮಿತ ಸೌಭಾಗ್ಯ ಸಿಗುವುದೇ? ಎಂದು ಅಂಬರೀಷನೆಂಬ ರಾಜನೇ ನಾರದನನ್ನು ಕೇಳಿದನು. ಅದಕ್ಕೆ ನಾರದರು ಹೀಗೆಂದರು. ಪುಣ್ಯದ ಧಾಟಿಯೇ ಬಲು ವಿಚಿತ್ರ. ಎಂಥ ಸಮರ್ಥರು ಸಹ ಅರಿಯಲಾಗದೇ ಅಚ್ಚರಿಗೊಳ್ಳುವರು. ಅಚಿಂತ್ಯ ಶಕ್ತಿಯಾದ ಹರಿಯ ಮಹಿಮೆ ಮನುಜ ಮತಿಗೆ ಸಿಲುಕೀತೇ? (ಪದ್ಮಪುರಾಣ)

ಜೀವನದಲ್ಲಿ ಬೇಕಾದದ್ದು ಪರಿಶ್ರಮ, ಅರ್ಹತೆಗಳ ಪಟ್ಟಿಯಲ್ಲ. ಪುಣ್ಯ ಕರ್ಮಗಳ ಶ್ರದ್ಧಾನುಷ್ಠಾನ ಯೋಗ್ಯತೆ ಎಂದಿದೆ ವಿಷ್ಣು ರಹಸ್ಯ. ಪರಮಾತ್ಮನ ಆದೇಶವೆಂದು ಭಾವಿಸಿ ಮಾಡಿದ ಸಣ್ಣ ಸ್ನಾನ ಮುಕ್ತಿಯ ಸೋಪಾನವೂ ಆಗುವುದು.

ಒಮ್ಮೆ ಬಲಿರಾಜನಿಂದ ಸೋತ ಇಂದ್ರನು ಮೇರು ಪರ್ವತದಲ್ಲಿ ಮರೆಯಾಗಿ ಕುಳಿತಿದ್ದನು. ಆಗ ದೇವತೆಗಳು ಬೃಹಸ್ಪತ್ಯಾಚಾರ್ಯರ ನಿರ್ದೇಶನದಂತೆ ಇಂದ್ರನನ್ನು ಕರೆಸಿ ಅಕ್ಷಯ ತೃತೀಯದಂದು ಸ್ನಾನ-ದಾನ-ಜಪ ಮೊದಲಾದ ಮಂಗಳ ಕಾರ್ಯಗಳನ್ನು ಒಟ್ಟಾಗಿ ಮಾಡಿದರಂತೆ. ಇಂದು ಮಾಡಿದ ಕರ್ಮದ ನಿಮಿತ್ತದಿಂದ ಆತ ಅಕ್ಷಯ ಫಲವನ್ನು ಪಡೆದು ಪದವಿಯನ್ನು ಏರಿ ಪರಮಾತ್ಮನ ಪ್ರೀತಿಗೂ ಪಾತ್ರನಾದವನು ಎಂದು ಸ್ಕಂದಪುರಾಣದಲ್ಲಿ ಹೇಳಿದೆ. ಧರ್ಮಸಾಧನೆ ಮಾಡಬೇಕೆನ್ನುವವರಿಗೆ ವೈಶಾಖ ಮಾಸದ ಒಂದೊಂದು ದಿನವೂ ಯೋಗ್ಯ ದಿನವೆಂದು ತಿಳಿದು ಬರುತ್ತದೆ. ಉಳ್ಳವರು ಇಲ್ಲದವರಿಗೆ ನೀಡುವುದರಲ್ಲಿಯೇ ಇಹಪರಗಳ ಸಾರ್ಥಕ್ಯವಿದೆ.

### ತೀರ್ಥಸ್ನಾನ

ಪರ್ವ ಸಮಯದಲ್ಲಿ ನೀರಿನಲ್ಲಿ ಪುಣ್ಯವನ್ನುಂಟು ಮಾಡುವ ಶಕ್ತಿಯು ವಿಶೇಷವಾಗಿ ಇರುತ್ತದೆ. ಜ್ಞಾನಿಗಳಿಂದ ಸೇವಿತವಾಗಿ ಅವರ ಅನುಗ್ರಹಕ್ಕೆ ಪಾತ್ರರಾಗಿರುವ ಜಲಕ್ಕೆ ತೀರ್ಥ ಎಂದು ಹೆಸರು. ಶರೀರದಲ್ಲಿರುವ ಇಡಾ ನಾಡಿಯೇ ಗಂಗೆ, ಪಿಂಗಳಾ ನಾಡಿಯೇ ಯಮುನ, ಸುಷಮ್ನೆಯೇ ಸರಸ್ವತಿ. ಇವು ಮೂರು ಸೇರುವ ಭ್ರೂಮಧ್ಯದ ಧ್ಯಾನಾವಗಾನಹ ಸ್ನಾನವೇ ಗಂಗಾ, ಯಮುನಾ, ಸರಸ್ವತಿ ಸಂಗಮವೆನಿಸಿದ ತೀರ್ಥರಾಜ ಪ್ರಯಾಗ.

# ವೈಶಾಖ ಶುದ್ಧ ಪಂಚಮಿ ಶಂಕರಚಾರ್ಯರು ಭುವಿಯಲ್ಲಿ ಅವತರಿಸಿದ ಪುಣ್ಯ ದಿನ

## ತನ್ನಿಮಿತ ಸಾಂದರ್ಭಿಕ ನುಡಿ ನಮನ

– ಶ್ರೀಮತಿ. ಸುಮ ಚಂದ್ರಶೇಖರ್

ಭಾರತದ ಹಿರಿಯ ಧರ್ಮ ಗುರುಗಳಲ್ಲಿ ವಿಭೂತಿ ಪುರುಷರಲ್ಲಿ ಮತ್ತು ತತ್ವಶಾಸ್ತ್ರಜ್ಞರಲ್ಲಿ ಶಂಕರಾಚಾರ್ಯರು ಅಗ್ರ ಗಣ್ಯರು. ಇಂಥ ಮಹಾಮಹಿರಾಮರಾದ ತಾತ್ವಿಕರು ಜೀವನದ ವಿಚಾರವಾಗಿ ನಮಗೆ ತಿಳಿದಿರುವ ಅಂಶಗಳು ಅತ್ಯಲ್ಪ.

ಬೌದ್ಧರೊಂದು ಕಡೆ ಮತ್ತು ಜೈನರು ಮತ್ತೊಂದು ಕಡೆಯಿಂದ ಶೃತಿಯಲ್ಲಿ ಉಕ್ತವಾದ ಕ್ರಿಯಾ ಕಲಾಪಗಳ ಮೇಲೆ ಆಕ್ರಮಣ ನಡೆಸಿರುವಾಗ ವೈದಿಕ ಧರ್ಮವನ್ನು ಪುನಃ ಊರ್ಜಿತಗೊಳಿಸುವುದಕ್ಕಾಗಿ ಶೃತಿಯ ಯಥಾರ್ಥವಾದ ಅರ್ಥವನ್ನು ಜನಗಳಿಗೆ ಸುಗಮ ಮಾರ್ಗದಲ್ಲಿ ತಿಳಿಸಲು ಶ್ರೀ ಶಂಕರರು, ಅವೈದಿಕ ದರ್ಶನಗಳನ್ನು ಯುಕ್ತಯುಕ್ತಾವಾಗಿ ಖಂಡಿಸಿ ಉಪನಿಷತ್ತುಗಳಲ್ಲಿ ಪ್ರತಿಪಾದಿಸಿರುವ ಆಧ್ಯಾತ್ಮಿಕ ಅದ್ವೈತ ತತ್ವದ ಪ್ರತಿಪಾದನೆ ಮಾಡಲು



ಪರಮೇಶ್ವರನ ಅವತಾರಿಗಳಾಗಿ ಜನಿಸಿದರು. ಕ್ರಿ.ಶ. 788 ರಲ್ಲಿ ವೈಶಾಖ ಶುಕ್ಲ ಪಂಚಮಿಯಲ್ಲಿ ಆರಿದ್ರಾನಕ್ಷತ್ರ ಮಿಥುನರಾಶಿಯಲ್ಲಿ ಚಂದ್ರನಿರುವಾಗ ಈ ದೇದೀಪ್ಯಮಾನ ಪ್ರತಿಭೆ ಕೇರಳ ರಾಜ್ಯದ ಕಾಲಟೀ ಎಂಬ ಗ್ರಾಮದಲ್ಲಿ ಉತ್ತಮ ವೈದಿಕ ಸಂಪ್ರದಾಯದ ನಂಬೂದರಿ ಮನೆತನದ, ತಿರುಶಿವಪೆರುರು ಎಂಬ ಹಿರಿಯರ ಹಿತವಚನವನ್ನು ಪಾಲಿಸುತ್ತಾ ತ್ರಿಚೂರಿನ ವೃಷಾಚಲೇಶ್ವರನ ಅಖಂಡ ಸೇವೆಯಲ್ಲಿ ಭಕ್ತಿ ಪುರಸ್ಸರವಾಗಿ ಸೇವೆ ಸಲ್ಲಿಸುತ್ತಿದ್ದ ಆರ್ಯಾಂಬೆ, ಶಿವಗುರು ದಂಪತಿಗಳಿಗೆ ಸುಪುತ್ರನಾಗಿ ಮೂಡಿತು.

ಮೂರು ವರ್ಷ ತುಂಬುವುದರೊಳಗೆ ತಂದೆಯನ್ನು ಕಳೆದುಕೊಂಡು ತಾಯಿಯ ಮಮತಾಪಾಶದಲ್ಲಿ ಬೆಳೆಯುತ್ತಾ ಐದನೆಯ ವರ್ಷದಲ್ಲಿನ ಉಪನಯನ ವಿಧಿಗಳ ನಂತರ ತಾಯಿಯ ಮನವನ್ನು ಒಲಿಸಿ ಶಂಕರರು ಒಬ್ಬ ಯೋಗ್ಯ ಗುರುವನ್ನು ಹುಡುಕಿಕೊಂಡು ಹೊರಟರು. ನರ್ಮದಾ ತೀರದಲ್ಲಿ ಪ್ರಸಿದ್ಧ ಸನ್ಯಾಸಿಗಳಾದ ಗೋವಿಂದ ಭಗವತ್ಪಾದರ ಶಿಷ್ಯರಾಗಿ ಸಮಸ್ತ ವಿದ್ಯೆಯನ್ನು ಕಲಿತರು.

### ಪವಾಡಗಳಂತಹ ಧೀಶಕ್ತಿ

ಅಲ್ಲಿ ತುಂಬಿ ಹರಿಯುತ್ತಿದ್ದ ನರ್ಮದಾ ನದಿಯ ನೀರನ್ನು ತಮ್ಮ ಸತ್ ಪ್ರಖರತೆಯಿಂದ ಕಮಂಡಲದಲ್ಲಿ ಸೆರೆ ಹಿಡಿದು ಮುಳುಗಿ ಹೋಗುತ್ತಿದ್ದ ಹಳ್ಳಿಗಳನ್ನು ಉಳಿಸಿ ರೈತರ ಅಪದ್ಭಾಂಧವರಾದರು.

ಶ್ರೀ ಭಗವತ್ಪಾದರು ಬಾಲಯೋಗಿ, ಅಪ್ರತಿಮ ಪ್ರತಿಭೆಯ ಎಳೆಯ ಬಾಲನಾಗಿ ಮಾಣಿಕ್ಯ ಮಂಗಳ ಕಾತ್ಯಾಯಿನ ಭಗವತಿಗೆ ಹಾಲನ್ನು ಸ್ವೀಕರಿಸುವಂತೆ ಮಾಡಿದುದಲ್ಲದೆ ಪ್ರಸಾದದ ರೂಪದಲ್ಲಿ ಬಟ್ಟಲಲ್ಲಿ ಮತ್ತೇ ಹಾಲನ್ನು ತುಂಬಿಸಿ ಕೊಡುವಷ್ಟು ಮಟ್ಟಿಗೆ ದೇವಿಯನ್ನು ಸಾಕ್ಷಾತ್ಕರಿಸಿಕೊಂಡು ನಲಿದರು. ಇನ್ನೊಮ್ಮೆ ಭೀಕ್ಷಾಟನೆಗೆ ಹೋದಾಗ ಕಡುಬಡವಳ ಮನೆಯಲ್ಲಿ ಭಿಕ್ಷೆ ನೀಡಿದ ನೆಲ್ಲಿಕಾಯಿಗೆ ಪ್ರತಿಯಾಗಿ 21 ಶ್ಲೋಕಗಳ ಕನಕಧಾರ ಸ್ತುತಿಯನ್ನು ಸ್ತುತಿಸುವುದರ ಮೂಲಕ ಆ ಮಹಾಲಕ್ಷ್ಮಿಯನ್ನೇ ಒಲಿಸಿಕೊಂಡು ಆ ಮನೆಯಲ್ಲಿ ಬಂಗಾರದ ನೆಲ್ಲಿ ಕಾಯಿಗಳ ಸುರಿಮಳೆ ಆಗುವಂತೆ ಮಾಡಿದರು. ಮತ್ತೊಮ್ಮೆ ದಿನನಿತ್ಯದಂತೆ ತುಂಬು ಪ್ರವಾಹದ ನಿಮಿತ್ತ ಶ್ರೀ ಬಾಲಕೃಷ್ಣನ ದೇವಾಲಯವನ್ನು ಅರ್ಚಿಸಲಾಗದ ತನ್ನ ತಾಯಿಗೆ ತಮ್ಮ ಯೋಗಶಕ್ತಿಯ ಪ್ರಭಾವದಿಂದ ಆ ನದಿಯ ನೀರು ತಮ್ಮ ಮನೆಯ ಬಾಗಿಲಿಗೆ ಹರಿದು ಬರುವಂತೆ ಮಾಡಿ ಶ್ರೀ ಬಾಲಕೃಷ್ಣನ ಪುಟ್ಟ ಗುಡಿಯನ್ನು ನಿರ್ಮಿಸಿಕೊಟ್ಟರು. ಶ್ರೀ ಆಚಾರ್ಯರು ಉಗ್ರ ಕಾಳೀ ದೇವಸ್ಥಾನದಲ್ಲಿ ನಡೆಯುತ್ತಿದ್ದ ವಾಮಾಚಾರ ಪದ್ಧತಿಗಳನ್ನು ತೊಡೆದು ಹಾಕಿ ವೈದಿಕ ಪದ್ಧತಿಯಿಂದ ದೇವಿಯು ಪ್ರಸನ್ನಗೊಳಿಸಿದ ಆ ಭಗವತಿಯನ್ನು ಸಾಕ್ಷಾತ್ಕರಿಸಿಕೊಂಡರು.

ಹೀಗಿರುವಾಗ ಒಂದು ದಿನ ಗಂಗಾನದಿಗೆ ಸ್ನಾನಕ್ಕೆಂದು ಹೊರಟಿರುವಾಗ ಚಂಡಾಲನೋರ್ವನು ತನ್ನ ನಾಲ್ಕು ನಾಯಿಗಳೊಂದಿಗೆ ಎದುರಾದರು. ಆಗ ಆತನನ್ನು ಉದ್ದೇಶಿಸಿ ಶ್ರೀಗಳವರ ಶಿಷ್ಯನೋರ್ವನು "ಏ ತೊಲಗಾಚೆ" ಎಂದು ಗದರಿಸಿದನು. ಆಗ ಆತನು ಅವನನ್ನು ಉದ್ದೇಶಿಸಿ "ನೀನು ಹೇಳಿದ ಈ ಮಾತು ದೇಹಕ್ಕೋ ಇಲ್ಲ ಆತ್ಮಕ್ಕೋ?" ಎಂದು ಮರುಪ್ರಶ್ನಿಸಿದನು. ಮಹಾನ್ ಶಕ್ತಿ ದೇದೀಪ್ಯಮಾನ ಪ್ರತಿಭೆಯ ಶ್ರೀ ಶಂಕರರಿಗೆ ಸತ್ಯಾಸತ್ಯತೆಯ ಅರಿವಾಗಿ, ಆತನೇ ಶಂಕರನೆಂಬ ಸತ್ಯವನ್ನು ಅರಿತು ಆತನ ಪಾದಕ್ಕೆ ರಗಿದರು. ಆಗ ಈಶ್ವರನ ಸಾಕ್ಷಾತ್ಕಾರವಾಯಿತು. ಪರಶಿವನು ವೈದಿಕಧರ್ಮದ

ಪುನರುಜ್ಜೀವನವು ನಿನ್ನಿಂದ ಆಗಲಿ ಎಂದು ಹರಸಿ ಅದೃಶ್ಯನಾದನು. ಪವಾಡಗಳಂತೆನಿಸಿದರೂ ಈ ಘಟನೆಗಳಲ್ಲಿನ ಸಾಧನೆಗಳೆಲ್ಲವೂ ಶಂಕರರ ಧೀಶಕ್ತಿಯ ಪ್ರತಿರೂಪಗಳೇ ಆಗಿವೆ.

### ಸರ್ವವೂ ಏಕವೇ

"ಅದ್ವೈತ" ಎಂದರೆ ಪ್ರಪಂಚದಲ್ಲಿ ಎರಡಿಲ್ಲ, ಎಲ್ಲವೂ ಒಂದೇ ಎಲ್ಲವೂ ಬ್ರಹ್ಮ; ಬ್ರಹ್ಮನು ಬೇರೆ ನಾವು ಬೇರೆ ಅಲ್ಲ ಎಂಬ ತತ್ವ. ಪಾರಮಾರ್ಥಿಕವಾಗಿ ಮೇಲುಕೀಳು ಎನ್ನುವುದಿಲ್ಲ. ಎಲ್ಲವೂ ಬ್ರಹ್ಮ, ಎಲ್ಲವೂ ಪೂಜನೀಯ ಎಂದು ಹೇಳಿ, ಮನುಷ್ಯರಾದ ನಮ್ಮಲ್ಲಿ ಮೇಲುಕೀಳು ಭಾವನೆ ಇರಬಾರದು. ನಾವೆಲ್ಲರೂ ಒಂದೇ ಎನ್ನುವುದನ್ನು ಸಾರಿದರು.

ಶಂಕರಾಚಾರ್ಯರು ಸನ್ಯಾಸಿಯಾದ ಮೇಲೂ ತಮ್ಮ ತಾಯಿಯನ್ನು ಮರೆಲಿಲ್ಲ. ತಾಯಿಗೆ ಆರೋಗ್ಯ ಕೆಟ್ಟಿದೆ ಎಂದು ತಿಳಿದಾಗ ಕಾಲಟಿಗೆ ಮರಳಿದರು. ಅಲ್ಲಿ ಆಕೆ ಕಾಲವಾದಳು. ಸನ್ಯಾಸಿಗಳಾದರೂ ತಮ್ಮ ತಾಯಿಯ ಅಂತ್ಯಕ್ರಿಯೆ ನಡೆಸಿ ಸಂಪ್ರದಾಯದ ನಿಷ್ಕರ ನಿಷ್ಠುರಕ್ಕೆ ಪಾತ್ರರಾದರು. ಶುದ್ಧವಾದ ಅದ್ವೈತ ಸಂಪ್ರದಾಯವನ್ನು ಎತ್ತಿ ಹಿಡಿದರು ಕ್ಷೀಣಿಸುತ್ತಿದ್ದ ವೈದಿಕ ಧರ್ಮಕ್ಕೆ ನವಚೈತನ್ಯವನ್ನಿತ್ತು ಅದನ್ನು ಭದ್ರವಾದ ತಳಹದಿಯ ಮೇಲೆ ಮತ್ತೆ ಸ್ಥಾಪಿಸುವುದು ಆಚಾರ್ಯರ ಉದ್ದೇಶವಾಗಿತ್ತು. ಸಾಂಖ್ಯ, ವೈಶೇಷಿಕ, ತಾಂತ್ರಿಕಾದಿ ಮತಗಳ ಖಂಡಿಸಿ,ಅವುಗಳಲ್ಲಿದ್ದ ದೋಷಗಳನ್ನು ತೋರಿಸಿದರೇ ಹೊರತ್ತು ಹೊಸದಾಗಿ ಯಾವ ಮತವನ್ನು ಸ್ಥಾಪಿಸಲಿಲ್ಲ. ಯಾವ ಮತೀಯ ಚಿಹ್ನೆಯನ್ನು ಶಂಕರಾಚಾರ್ಯರು ಪ್ರತಿಪಾದಿಸಲಿಲ್ಲ.

ಜಗದೀಶ್ವರನಾದ ಭಗವಂತನು ಒಬ್ಬನೇ. ನಾಮ ರೂಪಗಳೆಲ್ಲವೂ ಭಕ್ತರ ಇಚ್ಛಾನುಗುಣವಾಗಿ ಕಲ್ಪಿತವಾದವು. ಶಿವ,ವಿಷ್ಣು, ಶಕ್ತಿ, ಗಣಪತಿ ಮುಂತಾದ ಯಾವ ದೇವತೆಯನ್ನಾದರೂ ಭಕ್ತಿಯಿಂದ ಪೂಜಿಸಬಹುದು. ಅದ್ವೈತವು ಪರಮಾರ್ಥವಾದರೂ ವ್ಯವಹಾರದಲ್ಲಿ ದ್ವೈತವೇ ಇರಬೇಕು. ಆದ್ದರಿಂದ ಕರ್ಮಾನುಷ್ಠಾನು, ದೇವತಾ ಭಕ್ತಿ ಮೊದಲಾದ ದ್ವೈತ ಮಾರ್ಗವೇ ಸಾಧಕನಿಗೆ ವಿಹಿತವಾಗಿದೆ ಎಂಬುದು ಆಚಾರ್ಯರ ನಿಲುವು. ಪಂಚಾಯತನ ಪೂಜಾ ಪದ್ಧತಿಯನ್ನು ತಿಳಿಸಿ ಸರ್ವಮತ ಸಮನ್ವಯವನ್ನು ಮಾಡಿದರು ಶ್ರೀ ಶಂಕರರು. ಅವರ ಅಸಾಧಾರಣ ಪರಿಶ್ರಮದಿಂದ ಈ ಭರತ ಖಂಡದಲ್ಲಿ ವೈದಿಕ ಮಾರ್ಗ ಉಳಿದುಕೊಂಡಿತು.

### ಯುಗಪುರುಷ ಶಂಕರಾಚಾರ್ಯ

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ್ಯಗಳು ಅರಿಷಡ್ವರ್ಗಗಳು ಎನಿಸಿವೆ. ಈ ಆರೂ ಮಾನವನಿಗೆ ಶತ್ರುಗಳು.ಅವು ನಿಶಾಚಾರರಾದ ಗೂಬೆ ಬಾವಲಿಗಳಂತಹವು. ಬೆಳಕನ್ನು ಸಹಿಸದು. ಮಾನವನ ಮನಸ್ಸು ಅಜ್ಞಾನವೆನ್ನುವ ಅಂಧಕಾರದಿಂದ ತುಂಬಿದೆ. ಆದ್ದ ರಿಂದ ಆ ಆರು ಶತ್ರುಗಳು ಅದರಲ್ಲಿ ಪ್ರವೇಶಿಸುವರು.

ಈ ಅಂಧಕಾರವು ಕಲ್ಲುಬೀಸಿದರೆ ಓಡಿಹೋಗದು; ಕತ್ತಿಯಿಂದ ಇರಿದರೂ, ತುಪಾಕಿಯಿಂದ ಸುಟ್ಟರೂ ಅಂತ್ಯವಾಗುವುದಿಲ್ಲ. ದೀಪವನ್ನು ಬೆಳಗಿಸಿದರೆ ಮಾತ್ರ ಅದು ನಾಶವಾಗುವುದು. ಸಾಮಾನ್ಯವಾದ ಈ ಸತ್ಯವು ಶಂಕರರು ಬೋಧಿಸುವವರೆಗೂ ಕೆಲವರಿಗೆ ತಿಳಿಯಲೇ ಇಲ್ಲ.ಈ ದೇಶದ ಪ್ರಜೆಗಳ ದೃಷ್ಟಿ ಅಂಧಕಾರದಿಂದ ಆವೃತ್ತವಾಗಿದ್ದರಿಂದ ದಾರಿ ತಪ್ಪಿ ಏನೇನೋ ಲಕ್ಷದಲ್ಲಿಟ್ಟುಕೊಂಡು, ಅವುಗಳನ್ನು ಅನ್ವೇಷಿಸುವುದರಲ್ಲಿ ಮಗ್ನರಾಗಿ ಮುಖ್ಯ ಲಕ್ಷ್ಯವನ್ನೇ ಸೇರಲಾರದವರಾಗಿದ್ದಾರೆ. ಅಂಥವರಿಗೆ ಶಂಕರರು ಅದ್ವೈತವನ್ನು ಬೋಧಿಸಿ, ವೇದ,ಉಪನಿಷತ್ತು, ಶಾಸ್ತ್ರಗಳನ್ನು ಏಕಗ್ರೀವವಾಗಿ ಅಂಗೀಕರಿಸಿದರೆ ಅದೊಂದೇ ಸರಿಯಾದ ಮಾರ್ಗವೆಂದು ತಿಳಿಸಿ ಹೇಳಿದರು.ಜೀವನ,ಈಶ್ವರನು ಒಂದೇ, ಒಬ್ಬರೇ ವಿನಾ ಇಬ್ಬರಲ್ಲ ಎಂದು ಹೇಳುವ ಮತವೇ ಅದ್ವೈತಮತ.

ಶಂಕರರು ಚಿಕ್ಕಂದಿನಲ್ಲಿಯೇ ವಿಗ್ರಹಾರಾಧನೆಯನ್ನು ಮಾಡಿ, ಸಗುಣೋಪಾಸನೆಯ ಮಹಿಮೆಯನ್ನು ತಿಳಿದುಕೊಂಡಿದ್ದವರು.ಆದ್ದರಿಂದಲೇ ತಮ್ಮ ಜೀವಿತದ ಚರಮ ಭಾಗದಲ್ಲಿ ಸಗುಣೋಪಾಸನೆಯನ್ನು ಕೆಲವರಿಗೆ ಉಪದೇಶಿಸಿದರು. ಚಿಕ್ಕ ಮಕ್ಕಳಿಗೆ ಓದು ಕಲಿಸುವಾಗ, ಆಯಾ ರೂಪಗಳನ್ನು ಬರೆದು ತೋರಿಸಲು ಸ್ಲೇಟು, ಬಳಪಗಳನ್ನು ಉಪಯೋಗಿಸುವರು. ಅದೇ ರೀತಿ ಆಧ್ಯಾತ್ಮಿಕ ವಿದ್ಯೆ ಅಭ್ಯಸಿಸುವರಿಗೆ, ಚಿಕ್ಕ ಮಕ್ಕಳಿಗೆ, ದೇವಾಲಯಗಳು, ವಿಗ್ರಹಗಳು, ದೇವತೆಗಳ ಚಿತ್ರಪಟಗಳು ಮೊದಲಾದುವಾಗಿದೆ. ಕಪ್ಪು ಹಲಗೆ ಬೋರ್ಡ್‌ಗಳು, ಆನೆಯ ರೂಪವಿರುವ ಪುಸ್ತಕಗಳು ಮೊದಲಾದ ಆಟದ ಸಾಮಾನುಗಳೊಂದಿಗೆ ಎಷ್ಟು ದಿನಗಳು ಆಡಿಕೊಂಡರೂ ನಿಜವಾದ ಆನೆಯ ರೂಪ ಸ್ವಭಾವಗಳು ನಿಮಗೆ ತಿಳಿಯದು. ಅವುಗಳಿಗೆ ಸಂಬಂಧಿಸಿದ ಅನುಭವವೂ ನಿಮಗೆ ಲಭಿಸದು. ನಿಜವಾದ ಆನೆಯನ್ನು ನೋಡಿದಾಗ ಅವು ನಿಮಗೆ ಲಭಿಸುವುವು. ಆದರೆ, ಭಗವತ್ ತತ್ವಗಳನ್ನು ನೋಡಲು ಸಾಧ್ಯವಾಗುವುದಿಲ್ಲ.ಅದು ನಿರ್ಗುಣ, ನೀವು ಗುಣಾತೀತರಾದಾಗ ಮಾತ್ರವೇ ಆ ನಿರ್ಗುಣ ತತ್ತ್ವವನ್ನು ಅರಿಯಬಲ್ಲಿರಿ.



ಶಂಕರರು ಲೋಕಕ್ಕೆ ವೈರಾಗ್ಯವನ್ನು ಬೋಧಿಸಲೆಳಿಸಿ, ಅದಕ್ಕೆ ಅರ್ಹತೆಯನ್ನು ಗಳಿಸಲು ತಾವು ಸನ್ಯಾಸವನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿಕೊಂಡರು. ಸನ್ಯಾಸ ಸ್ವೀಕಾರಕ್ಕೆ ತಾಯಿಯ ಅನುಮತಿಬೇಕು. ತನ್ನ ತಾಯಿಗೆ ತಾನೊಬ್ಬನೇ ಮಗನಾದ್ದರಿಂದ ಆಕೆ ಏಕಪುತ್ರ ಪ್ರೇಮಾತಿಶಯದಿಂದ ಸಮ್ಮತಿಸಲಾರಳೆಂದು ಕೊಂಡು ಒಂದು ಉಪಾಯವನ್ನು ಮಾಡಿದರು. ಒಂದು ದಿನ ತಮ್ಮ ಮನೆಯ ಪ್ಕಕದಲ್ಲೆ ಇದ್ದ ಪೂರ್ಣಾ ನದಿಯಲ್ಲಿ ಸ್ನಾನ ಮಾಡುತ್ತಾ, "ಅಮ್ಮಾ! ನನ್ನ ಕಾಲನ್ನು ಮೊಸಳೆ ಹಿಡಿದುಕೊಂಡಿದೆ"ಎಂದು ಜೋರಾಗಿ ಕಿರುಚಿದರು. ಅದು ನಿಜವೇ, ಪೂರ್ವದಲ್ಲಿ ಗಜೇಂದ್ರನ ಕಾಲನ್ನು ಹಿಡಿದುಕೊಂಡಿತು. ಆದರೆ ತನನ್ನು ನಿಜವಾಗಿ ಹಿಡಿದುಕೊಂಡಿದ್ದು ವಿಷಯಗಳ ಆಸೆಯನ್ನೇ ಹೊರತು ಮೊಸಳೆಯಲ್ಲ. ಅದನ್ನು ಶಂಕರರು ಆ ವಿಧವಾಗಿ ಕಾಣುವಂತೆ ಮಾಡಿದರು ಕುಮಾರನ ಕೂಗನ್ನು ಕೇಳಿ ತಾಯಿ ಓಡಿ ಬಂದು ತನ್ನ ಮಗನಿಗೆ ಸಂಭವಿಸಿರುವ ವಿಪತ್ತನ್ನು ನೋಡಿ ಅಳತೊಡಗಿದಳು. ಆಗ ಶಂಕರರು, "ಅಮ್ಮಾ! ನಾನು ಸನ್ಯಾಸ ದೀಕ್ಷೆವಹಿಸಲು ನೀನು ಅನುಮತಿ ಕೊಟ್ಟ ಹೊರತು ಈ ಮೊಸಳೆ ನನ್ನ ಕಾಲು ಬಿಡುವುದಿಲ್ಲ" ಎಂದರು. ಅದೂ ನಿಜವೇ ಪ್ರಪಂಚ ಸಂಬಂಧವನ್ನು ಬಿಡಿಸಿಕೊಳ್ಳುವುದು, ಬಂಧನದಿಂದ ತನ್ನನ್ನೂ ತಾನು ಮುಕ್ತಿಗೊಳಿಸಿಕೊಳ್ಳುವುದು, ಸನ್ಯಾಸಿಯಾಗಿಯಾದರೂ ಸರಿ, ತನ್ನ ಮಗನು ಜೀವಂತವಾಗಿದ್ದರೆ ಸಾಕು ಎಂದು ಶಂಕರರ ತಾಯಿ ಅನುಮತಿ ಇತ್ತಳು. ತಕ್ಷಣವೇ ಮೊಸಳೆ ಹಿಡಿತವನ್ನು ಬಿಟ್ಟು ಅಂತರ್ಧಾನವಾಯಿತು. ಶಂಕರರು ಮೋಕ್ಷ ರಹಸ್ಯವನ್ನು ತಿಳಿಸುವ ಗುರುವನ್ನು ಹುಡುಕಿಕೊಂಡು ಆ ನದಿಯ ದಡದಿಂದ ಹಾಗೇ ಹೊರಟು ಹೋದರು. ಶಂಕರರು ಜೀವಿಸಿದ್ದು ಮೂವತ್ತೆರಡು ವರ್ಷಗಳು ಮಾತ್ರವಾದರೂ ಆ ಸ್ವಲ್ಪ ಕಾಲದಲ್ಲಿಯೇ ಅವರು, ಅಂದು ಬಹು ವಿಧಗಳಲ್ಲಿ ನಡೆಯುತ್ತಿದ್ದ ಆರಾಧನೆಯ ವಿಧಾನವನ್ನು ಸಂಸ್ಕರಿಸಿ ಸಮೀಕರಣ ಮಾಡಿ ಎಲ್ಲವನ್ನೂ ವೇದಾಂತ ತತ್ವದ ಏಕಸಿದ್ಧಾಂತವಾದ ಅದ್ವೈತದ ಒಳಗೆ ಅಳವಡಿಸಿದರು.

ವೇದಗಳ ಮಹಾವಾಕ್ಯಗಳು ತಮ್ಮ ಸರಿಯಾದ ನಿಜಾರ್ಥದೊಂದಿಗೆ ಎಲ್ಲರ ಹೃದಯಾಂತರಂಗದೊಳಗೆ ದೃಢವಾಗಿ ನಿಲ್ಲುವಂತೆ ಭಾಷ್ಯಗಳನ್ನು ರಚಿಸಿದರು ಶಂಕರರು. "ಅಹಂಬ್ರಹ್ಮಾಸ್ಮಿ". "ತತ್ವಮಸಿ", "ಪ್ರಜ್ಞಾನಂ ಬ್ರಹ್ಮಾ" , "ಆಯಮಾತ್ಮಾ ಬ್ರಹ್ಮಾ" ಮೊದಲಾದ ವಾಕ್ಯಗಳೆಲ್ಲಾ ಸುಲಭವಾದ ಭಾಷೆಯಲ್ಲಿ ತರ್ಕಸಮ್ಮತವಾದ ಮಧುರ ಕವಿತಾ ರೂಪದಲ್ಲಿ ಜಿಜ್ಞಾಸುಗಳಿಗೆ ಬೋಧಿಸಲಾಗಿದೆ. ಶಂಕರರ ಅದ್ವೈತವೇ ದೇವಾಂತದಲ್ಲಿ ಕೊನೆ ಸಿದ್ಧಾಂತ. ಅದೇ ಪರಮ ಸತ್ಯ. ಆದ್ದರಿಂದಲೇ ವಿಜ್ಞಾನ ಶಾಸ್ತ್ರವು ಹೊಸದಾಗಿ ಕಂಡುಹಿಡಿದಿರುವ ಸಿದ್ಧಾಂತಗಳಿಗಾಗಲೀ ಮೇಧಾವಿಗಳ ಹೇತುವಾದಗಳಿಗಾಗಲೀ ಚಲಿಸದೇ ದೃಢವಾಗಿ ಸುಸ್ಥಿರವಾಗಿ ನಿಂತಿದೆ. ಅದ್ವೈತವು ದ್ರವ್ಯಶಕ್ತಿಗಳಿಗೂ ಮಾಯಾವರಣದಿಂದ ಕೂಡಿರುವಂತೆ ಜಗತ್ತಿಗೂ ಇರುವ ಏಕತೆಯನ್ನು ಹೇಳುವುದು. ಆ ಮಾಯೆಯೂ ಸಹ ಆದಿಪುರುಷ ನಿರ್ಮಿತವೇ. ಮಾನವನ ಮಾನಸದಿಂದ ಅಹಂಕಾರವೆನ್ನುವ ದ್ವೈತವನ್ನು ತೊಲಗಿಸುವುದಕ್ಕೂ ಅದ್ವೈತ ಭಾವವನ್ನು ಸಿದ್ಧಿಸಿಕೊಳ್ಳುವುದಕ್ಕೂ ತೀವ್ರವಾದ ಸಾಧನೆಯು ಆತ್ಯಾವಶ್ಯವೆಂದು ಶಂಕರರಿಗೆ ತಿಳಿದಿತ್ತು. ಆದ್ದರಿಂದಲೇ ಅದಕ್ಕೆ ಪ್ರಥಮ ಶಿಕ್ಷಣವಾಗಿ ಯೋಗ, ಭಕ್ತಿ, ಕರ್ಮಸೂತ್ರಗಳನ್ನು ಬೋಧಿಸಿದರು. ಆ ಮೂರು ಬುದ್ಧಿಗೆ ವಿಕಾಸವನ್ನುಂಟುಮಾಡಿ, ಭಾವ ವಿಕಾರಗಳನ್ನು ತೊಲಗಿಸಿ ಹೃದಯವನ್ನು ಪರಿಶುದ್ಧಗೊಳಿಸಿ, ವ್ಯಕ್ತಿಗೂ ಜಗತ್ತಿಗೂ ಇರುವ ಸತ್ಯವಾದ ಏಕತೆಯನ್ನು ತಿಳಿಯಪಡಿಸುವುದು. ಲೋಕದಲ್ಲಿರುವ ಪ್ರತಿ ಪ್ರದೇಶದಲ್ಲಿಯೂ ಪ್ರತಿಪದಾರ್ಥದಲ್ಲಿಯೂ ಸರ್ವತ್ರ ಸರ್ವರಲ್ಲಿಯೂ ಭಗವಂತನ ಕರುಣೆ ತುಂಬಿದೆ ಎನ್ನುವ ಜ್ಞಾನದ ಅರಿವೇ ಅದ್ವೈತ.

ಶಂಕರರು ಸಾಧನೆಗೆ ಮೊಟ್ಟ ಮೊದಲಿನ ಹಂತವೇ ಸತ್ಸಂಗವೆಂದು ಹೇಳಿರುವುದು. ಸತ್ಸಂಗವನ್ನು ನಿಸ್ಸಂಗತ್ವವನ್ನು ಜೀವನದಲ್ಲಿ ಅಳವಡಿಸಿದರೆ ಮೌನದಲ್ಲಿಯೇ ಏಕಾಂತವಾಸದಲ್ಲಿಯೂ ಆಸಕ್ತಿ ಹುಟ್ಟಿಸುವುದು. ಅದು ಮೋಹವನ್ನು ದೂರ ಮಾಡುವುದು. ಪ್ರಾರ್ಥನೆಗೆ ಭಗವದ್ಗೀತೆಯನ್ನು ಕೇಳಿದುದರಿಂದ ಇದೇ ಫಲವುಸಿದ್ಧಿಸಿತು. ಅದು ಲಭಿಸಿದಾಗ ನಿಶ್ಚಲ ತತ್ವವು ದೃಢವಾಗುವುದು. ಸ್ಥಿರವಾಗುವುದು. ತತ್ ಅದು ಎಂದರೆ ಪರಮಾತ್ಮತ್ವಂ ನೀನು, ಎಂದರೆ ಜೀವಾತ್ಮ ಎನ್ನುವುದರ ಪರಮಾರ್ಥ ಎಂದರೆ ಇವೆರಡಕ್ಕೂ ಇರುವ ಏಕತ್ವವನ್ನು ಗುರುತಿಸುವುದೇ ಅರಿಯುವುದೇ, ಮುಕ್ತಿ ಪ್ರಾಪ್ತಿ.



ಶ್ರೀ ಶಂಕರಾಚಾರ್ಯರ ಸಾಧನೆಗಳ ಕಿರುಮಾಹಿತಿ.

ವೈಶಾಖಶುದ್ಧ ಪಂಚಮಿಯಂದು "ಶ್ರೀ ಶಂಕರ ಜಯಂತಿ" ಈ ದಿನವನ್ನು ಭಾರತ ಸರ್ಕಾರ ದಾರ್ಶನಿಕರ ದಿನ ಎಂದು ಘೋಷಿಸಿದೆ.

1)ಪರಿಪೂರ್ಣ ನಾಮ - ಶ್ರೀ ಆದಿ ಶಂಕರಾಚಾರ್ಯ ವಿಶ್ವಕರ್ಮ

2. ಕಾಲ : ಕ್ರಿ.ಶ. 788 -820

3. ತಾಯಿ - ತಂದೆ : ಆರ್ಯಾಂಬೆ ಶಿವಗುರು

4. ಜನ್ಮಸ್ಥಳ : ಕೇರಳದ ಪೂರ್ಣ ನದಿ ತೀರದ ಕಾಲಡಿ

5. ಸನ್ಯಾಸ ಸ್ವೀಕಾರ : ಎಂಟನೆಯ ವರ್ಷ

6. ಗುರುಗಳು: ಶ್ರೀ ಗೋವಿಂದ ಭಗವತ್ಪಾದರು

7. ಪ್ರತಿಪಾದಿಸಿದ ದರ್ಶನ : ಅದ್ವೈತ ಸಿದ್ಧಾಂತ

8. ಪಂಥಗಳು: ಶಿವ, ವೈಷ್ಣವ, ಶಾಕ್ತ, ಸೌರ ಗಾಣಪತ್ಯ, ಕೌಮರ.

9. ಪಂಚಾಯತನ ದೇವತೆಗಳು : ಸೂರ್ಯ, ಗಣಪತಿ, ದುರ್ಗೆ, ಶಿವ, ವಿಷ್ಣು.

10. ಶಂಕರರ ಮಾತೃಭಾಷೆ : ಮಲಯಾಳಂ

11.ಶಂಕರರ ಸಂಪರ್ಕ ಭಾಷೆ : ಸಂಸ್ಕೃತ

12. ಚಿನ್ನದ ನೆಲ್ಲಿಕಾಯಿ ಮಳೆ ಸುರಿಸಿದ ಸ್ತೋತ್ರ : ಕನಕಧಾರ ಸ್ತೋತ್ರ

13. ನೆಲ್ಲಿಕಾಯಿ ಭಿಕ್ಷೆಯಿತ್ತ ಮನೆಯ ಇಂದಿನ ಹೆಸರು : ಸ್ವರ್ಣತ್ತಿಲ್ಲಂ

14. ಗುರುದ್ರೋಹ : ತುಷಾಗ್ನಿಯಲ್ಲಿ ಆತ್ಮ ಸಮರ್ಪಿಸಿಕೊಂಡರು, ಕುಮಾರಿಲ ಭಟ್ಟರು (ಕುಮಾರ್ಲ ಭಾಟ್)

15.ಶಂಕರರ ಶಿಷ್ಯಂದಿರು ಮತ್ತು ಪೀಠಗಳ ಪ್ರಥಮಾಚಾರ್ಯರು : ಪದ್ಮಪಾದಚಾರ್ಯ,ಹಸ್ತಾಮಲಕಾ ಚಾರ್ಯ, ತೋಟಕಾಚಾರ್ಯ, ಸುರೇಶ್ವರಾಚಾರ್ಯ

16.ಪದ್ಮಪಾದಚಾರ್ಯರ ಪೂರ್ವನಾಮ : ಸನಂದನ

17. ಸುರೇಶ್ವರಾಚಾರ್ಯರ ಪೂರ್ವನಾಮ : ಮಂಡನ ಮಿಶ್ರ

18. ರಚಿಸಿದ ಗ್ರಂಥಗಳು : 54

19. ರಚಿಸಿದ ಕೊನೆಯ ಗ್ರಂಥ : ವಿವೇಕ ಚೂಡಾಮಣಿ

20. ಪ್ರಸ್ಥಾನತ್ರಯಗಳು : ಬ್ರಹ್ಮಸೂತ್ರ, ಭಗವದ್ಗೀತೆ, ಉಪನಿಷತ್ತುಗಳು

21. ಬ್ರಹ್ಮಸೂತ್ರ : 555 ಸೂತ್ರಗಳು

22.ಭಗವದ್ಗೀತೆ : 18 ಅಧ್ಯಾಯ (ವ್ಯಾಖ್ಯಾನ) 700 ಶ್ಲೋಕಗಳು

23. ಉಪನಿಷತ್ತುಗಳು : 10

24. ರಚಿಸಿದ ಸ್ತೋತ್ರಗಳು : 72

25. ಕಾಶ್ಮೀರದಲ್ಲಿ ಕುಷ್ಠರೋಗಿಯ ಮೋಕ್ಷಕ್ಕಾಗಿ ಹೇಳಿದ ಸ್ತೋತ್ರ : ಏಕಶ್ಲೋಕಿ (ಕಿಂ ಜ್ಯೋತಿಸ್ತವ)

26.ಕಾಶಿಯಲ್ಲಿ ರಚಿಸಿದ ಸ್ತೋತ್ರಗಳು : 1. ಕಾಲಭೈರವಾಷ್ಟಕ, 2. ಮನೀಷಾ ಪಂಚಕ 3. ಅನ್ನಪೂರ್ಣ ಸ್ತೋತ್ರ 4. ಕಾಶಿ ಸ್ತೋತ್ರ

27. ಚತುರಾಮ್ನಾಯ ಪೀಠಗಳು: ಮತ್ತು ಪೀಠಗಳ ಪ್ರಥಮಾಚಾರ್ಯರು:

ಶೃಂಗೇರಿಪೀಠ - ಸುರೇಶ್ವರಾಚಾರ್ಯರು - ದಕ್ಷಿಣ

ಜಗನ್ನಾಥ ಪೀಠ - ಪದ್ಮಪಾದಾಚಾರ್ಯರು - ಪೂರ್ವ

ದ್ವಾರಕಾ ಪೀಠ - ಹಸ್ತಾಮಲಕಾಚಾರ್ಯರು - ಪಶ್ಚಿಮ;

ಜ್ಯೋತಿಷ್ಮತಿ ಪೀಠ - ತೋಟಕಾಚಾರ್ಯರು - ಉತ್ತರ

29. ಪೀಠಗಳ ದೇವದೇವಿಯರು

1. ಚಂದ್ರಮೌಳೇಶ್ವರ - ಶಾರದದೇವಿ

2. ಜಗನ್ನಾಥ - ವಿಮಾಲಾದೇವಿ

3. ಸಿದ್ಧೇಶ್ವರ - ಭದ್ರಕಾಳಿ

4. ನಾರಾಯಣ - ಪೂರ್ಣದೇವಿ

30. ಪವಿತ್ರ ತೀರ್ಥಗಳು - ತುಂಗಾ, ಗೋಮತಿ, ಅಲಕಾನಂದ, ಪೂರ್ವಸಮುದ್ರ

31. ಸರ್ವಜ್ಞ ಪೀಠಾರೋಹಣ: ಕಾಶ್ಮೀರದ ಶಂಕರ ಗಿರಿಯಲ್ಲಿರುವ ಶಾರದ ಮಂದಿರ

32. ಶಂಕರರ ಮಹಾಸಿದ್ಧಾಂತ : - ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವನಾಪರಃ ಅರ್ಥ :- ಬ್ರಹ್ಮವು ಸತ್ಯ, ಜಗತ್ತು ಮಿಥ್ಯಾ ಜೀವವು ಬ್ರಹ್ಮಕ್ಕಿಂತ ಬೇರೆಯಲ್ಲ

33. ಶಂಕರರ ಸಾಧನೆ ; 1. ಅಷ್ಟವರ್ಷೇ ಚತುರ್ವೇದಿ- 8 ನೇ ವರ್ಷಕ್ಕೆ 4 ವೇದಗಳ ಅಧ್ಯಯನ

2. ದ್ವಾದಶೇ ಸರ್ವಶಾಸ್ತ್ರವಿತ್ 12 ನೇ ವರ್ಷಕ್ಕೆ ಸಕಲ ಶಾಸ್ತ್ರಗಳ ಪಾಂಡಿತ್ಯ

3. ಷೋಡಶೇ ಕೃತವಾನ್ ಭಾಷ್ಯಂ - 16 ನೇ ವರ್ಷಕ್ಕೆ ಭಾಷ್ಯ ರಚನೆ

4. ಮೂವತ್ತೆರಡನೆ ವರ್ಷಕ್ಕೆ ದೇಹತ್ಯಾಗ

34. ದೇಹತ್ಯಾಗ - ಕೇದಾರನಾಥ - ವೈಶಾಖ ಶುದ್ಧ ದ್ವಾದಶಿ

# ಪ್ರಶ್ನೋಪನಿಷತ್

- ಶ್ರೀಮತಿ. ಎ. ಗೀತ ವೀರರಾಘವನ್

ಪ್ರಶ್ನೋಪನಿಷತ್ತು ಅಥರ್ವವೇದಕ್ಕೆ ಸೇರಿದುದು. ಪ್ರಶ್ನೋಪನಿಷತ್ತು ಗದ್ಯ ರೂಪದಲ್ಲಿದೆ. ಇದರಲ್ಲಿ ಆರು ಅಧ್ಯಾಯಗಳಿವೆ. ಇದರಲ್ಲಿ ಆರು ಜನ ಶಿಷ್ಯರು ಕಬಂಧಿ ಕತ್ಯಾಯನ, ಭಾರ್ಗವ ವೈದರ್ಭಿ, ಕೌಸಲ್ಯ ಅಶ್ವಲಾಯನ, ಯಯಾನಿ ಗಾರ್ಗ್ಯ, ಶೈಬ್ಯ ಸತ್ಯಕಾಮ, ಸುಕೇಷ ಭರದ್ವಾಜ ಎಂಬ ಆರು ಶಿಷ್ಯರು ಗುರುಗಳಾದ ಪಿಪ್ಪಿಲಾದರನ್ನು ಆಶ್ರಯಿಸಿ ಅವರಿಂದ ತಮ್ಮ ಆರು ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದು ಕೊಳ್ಳುತ್ತಾರೆ. ಆರು ಪ್ರಶ್ನೆಗಳು ಅವುಗಳಿಗೆ ಆರು ಉತ್ತರಗಳು ಇಲ್ಲಿವೆ. ಪಿಪ್ಪಿಲಾದರು ಶಿಷ್ಯರಿಗೆ ಒಂದು ವರ್ಷ ಗುರುಕುಲ ವಾಸವನ್ನು ವಿಧಿಸುತ್ತಾರೆ. ಒಂದು ವರ್ಷ ನೀವು ತಪಸ್ಸನ್ನಾ ಚರಿಸುತ್ತಿರಿ. ಬ್ರಹ್ಮಚರ್ಯೆ ಮತ್ತು ಶ್ರದ್ಧೆ ಇವುಗಳನ್ನು ಅನುಷ್ಠಿಸಿ. ಆ ಮೇಲೆ ನೀವು ನಿಮ್ಮ ಪ್ರಶ್ನೆಗಳನ್ನು ಕೇಳಬಹುದು. ನಮಗೆ ತಿಳಿದಿದ್ದರೆ ಉತ್ತರಿಸುತ್ತೇವೆ ಎಂದು ಹೇಳುತ್ತಾರೆ.

ಈ ಆರು ಮಂದಿ ಶಿಷ್ಯರು ಗುರುಕುಲ ವಾಸವನ್ನು ಮುಗಿಸಿ ಕೇಳುವ ಆರು ಪ್ರಶ್ನೆಗಳನ್ನು ಈ ಉಪನಿಷತ್ತಿನಲ್ಲಿ ವಿವರಿಸಿದೆ. ಮೊದಲ ಪ್ರಶ್ನೆಯನ್ನು ಕಬಂಧಿ ಕಾತ್ಯಾಯನ ಅತ್ಯಂತ ಮಹತ್ವವಾದ ಜಗತ್‌ಸೃಷ್ಟಿಗೆ ಸಂಬಂಧಿಸಿದುದನ್ನು ಕೇಳುತ್ತಾನೆ. ಅವನ ಪ್ರಶ್ನೆ ಯಾವುದರಿಂದ ಈ ಎಲ್ಲಾ ಜೀವಿಗಳು ಹುಟ್ಟಿವೆ? ಎಂದು ಪ್ರಶ್ನಿಸುತ್ತಾನೆ. ಪಿಪ್ಪಿಲಾದರು ಉತ್ತರಿಸುತ್ತಾರೆ. ಎಲ್ಲಾ ಜೀವಿಗಳ ದೇವ ಪ್ರಜಾಪತಿ ತಪಸ್ಸನ್ನು ಆಚರಿಸಿ ರಾಯ ಮತ್ತು ಪ್ರಾಣರೆಂಬ ದಂಪತಿಗಳನ್ನು ಸೃಷ್ಟಿಸಿ ದರು. ರಾಯ ಆಹಾರ ಮತ್ತು ಪ್ರಾಣ ಆ ಆಹಾರವನ್ನು ಅನು ಭವಿಸುವವನು. ಇದು ಅಚೇತನ ಮತ್ತು ಚೇತನನಿಗೆ ಸಂಬಂಧಿಸಿದೆ. ಇಲ್ಲಿ ದೇವಯಾನ ಮತ್ತು ಪಿತೃಯಾನಗಳ ವಿಷಯವನ್ನು ತಿಳಿಸಿದೆ.

ಎರಡನೆಯ ಪ್ರಶ್ನೆಯನ್ನು ಭಾಗರ್ವ ವೈದರ್ಭಿ ಕೇಳು ತ್ತಾನೆ. ಈ ಪ್ರಶ್ನೆ ಇಂದ್ರಿಯಗಳಿಗೂ ಮತ್ತು ಮುಖ್ಯ ಪ್ರಾಣಕ್ಕೂ ಪ್ರತಿ ದೇಹದಲ್ಲಿ ಸಂಬಂಧಿಸಿದುದು. ಪಿಪ್ಪಿಲಾದರು ಇಲ್ಲಿ ಪ್ರಾಣದ ಪ್ರಮುಖ್ಯತೆ ಬೇರೆ ಇಂದ್ರಿಯಗಳಿಗಿಂತ ಇರುವುದನ್ನು ವರ್ಣಿಸುತ್ತಾರೆ. ಮುಖ್ಯ ಪ್ರಾಣವು ದೇಹದಿಂದ ಮೇಲಕ್ಕೆ ಏಳು ವಾಗ ಇಂದ್ರಿಯಗಳು ಅದನ್ನು ಹಿಂಬಾಲಿಸಬೇಕು. ಜೇನಿನ ರಾಜ ಹಾರುವಾಗ ಎಲ್ಲಾ ಜೇನುಗಳು ಅದರ ರಕ್ಕೆಗೆ ಸೇರಿ ಕೊಂಡು ಹಾರುವಂತೆ.

ಮೂರನೆಯ ಪ್ರಶ್ನೆಯನ್ನು ಕೌಸಲ್ಯಾ ಅಶ್ವಲಾಯನ ಕೇಳುತ್ತಾನೆ. ದೇಹಕ್ಕೆ ಪ್ರಾಣ ಹೇಗೆ ಬರುತ್ತದೆ? ಅದು ಎಲ್ಲಿಂದ ಬರುತ್ತದೆ? ಅದು ತನ್ನನ್ನೇ ವಿಭಜಿಸಿಕೊಂಡು ಹೇಗೆ ವಾಸಿ ಸುತ್ತದೆ? ಅದು ಹೇಗೆ ದೇಹದಿಂದ ಹೊರಡುತ್ತದೆ? ಈ ಎಲ್ಲಾ ಪ್ರಶ್ನೆಗಳೂ ಪ್ರಾಣದ ಸ್ವರೂಪ ಮತ್ತು ಆರಂಭಕ್ಕೆ ಸಂಬಂಧಿ ಸಿದುದು. ಪಿಪ್ಪಿಲಾದರ ಉತ್ತರ ಪ್ರಾಣ ಪರಮಾತ್ಮನಿಂದ ಉಂಟಾದುದು. ಅದು ದೇಹಕ್ಕೆ ಜೀವಾತ್ಮನೊಡನೆ ಬರುತ್ತದೆ. ಪ್ರಾಣವು ಉಳಿದ ಇಂದ್ರಿಯಗಳನ್ನು ನಿರ್ದೇಶಿಸುತ್ತದೆ. ಒಬ್ಬ ರಾಜನು ತನ್ನ ಮಂತ್ರಿ ಮಂಡಲವನ್ನು ನಿಯೋಜಿಸಿಕೊಳ್ಳು ವಂತೆ. ಅದು ಸತ್ಕರ್ಮಗಳಿಂದ ಪುಣ್ಯಲೋಕಕ್ಕೆ ಮೇಲುಗಡೆ ಯಿಂದ ಹೋಗುತ್ತದೆ ಅಥವಾ ತನ್ನ ಪಾಪಗಳಿಂದ ಪಾಪಿಷ್ಠ ವಾದ ಲೋಕಕ್ಕೆ ಹೋಗುತ್ತದೆ.

ನಾಲ್ಕನೆಯ ಪ್ರಶ್ನೆ ಸ್ವಪ್ನ ಲೋಕಕ್ಕೆ ಸಂಬಂಧಿಸಿದುದು. ಯಯಾತಿ ಗಾರ್ಗ್ಯ ಪಿಪ್ಪಿಲಾದರನ್ನು ಕೇಳುತ್ತಾನೆ. ಒಬ್ಬ ಮನುಷ್ಯನಲ್ಲಿ ಯಾವ ಯಾವ ಅಂಗಗಳನ್ನು ನಿದ್ರೆ ಆವರಿ ಸುತ್ತದೆ? ಯಾವ ಅಂಗಗಳು ಎಚ್ಚರವಾಗಿರುತ್ತದೆ? ಸ್ವಪ್ನವನ್ನು ಅನುಭವಿಸುವ ದೈವ ಯಾವುದು? ಇದು ಯಾರಿಗೆ ಸಂತೋಷ



**ಎಲ್ಲಾ ಜೀವಿಗಳ ದೇವ ಪ್ರಜಾಪತಿ ತಪಸ್ಸನ್ನು ಆಚರಿಸಿ ರಾಯ ಮತ್ತು ಪ್ರಾಣರೆಂಬ ದಂಪತಿಗಳನ್ನು ಸೃಷ್ಟಿಸಿದರು. ರಾಯ ಆಹಾರ ಮತ್ತು ಪ್ರಾಣ ಆ ಆಹಾರವನ್ನು ಅನು ಭವಿಸುವವನು. ಇದು ಅಚೇತನ ಮತ್ತು ಚೇತನನಿಗೆ ಸಂಬಂಧಿಸಿದೆ.**

ವನ್ನು ಕೊಡುತ್ತದೆ. ಪಿಪ್ಪಿಲಾದರು ಉತ್ತರಿಸುತ್ತಾರೆ. ಬೆಳಗ್ಗೆ ಸೂರ್ಯನ ಕಿರಣಗಳು ಸೂರ್ಯನಿಂದ ಬಿಡಿ ಬಿಡಿಯಾಗಿ ಹರಡಿದಂತೆ ಸಂಜೆ ಸೂರ್ಯಾಸ್ತಮದ ಸಮಯದಲ್ಲಿ ಆ ಕಿರಣಗಳು ಒಟ್ಟಾಗಿ ಬೆಳಕಿನ ವ್ಯೂಹದಲ್ಲಿ ಸೇರುವಂತೆ ಇಂದ್ರಿಯಗಳಾದ ಕಿವಿ ಮುಂತಾದುವು ಮನಸ್ಸಿನಲ್ಲಿ ಚೇತನನು ನಿದ್ರಿಸುವಾಗ ಒಂದಾಗುತ್ತವೆ. ಪ್ರಾಣ ಮಾತ್ರ ಎಚ್ಚರವಾಗಿರುತ್ತದೆ. ಸ್ವಪ್ನಾವಸ್ಥೆಯಲ್ಲಿ ಕ್ಷೇತ್ರಜ್ಞ ಅಥವಾ ಜೀವಾತ್ಮ ಕನಸುಗಳನ್ನು ಕಾಣುತ್ತಾನೆ. ಪಕ್ಷಿಗಳು ಗೂಡನ್ನು ಸೇರುವಂತೆ ನಿದ್ರೆಯಲ್ಲಿ ಜೀವಾತ್ಮನು ಪರಮಾತ್ಮನಲ್ಲಿ ಒಂದಾಗುತ್ತಾನೆ. ನಂತರ ಅವನು ಯಾವ ಸ್ವಪ್ನವನ್ನೂ ಕಾಣುವುದಿಲ್ಲ.

ಶೈಬ್ಯ ಸತ್ಯಕಾಮ ಐದನೆಯ ಪ್ರಶ್ನೆಯನ್ನು ಕೇಳುತ್ತಾನೆ. ಅದು ಪ್ರಣವೋಪಾಸಕನು ಗೆದ್ದಿರುವ ಪ್ರಪಂಚಕ್ಕೆ ಸಂಬಂಧಿಸಿದೆ. ಪಿಪ್ಪಿಲಾದರು "ಓಂಕಾರ" ಅತ್ಯಂತ ಶ್ರೇಷ್ಠವಾದುದೆಂದೂ ಬ್ರಹ್ಮನೂ ಅದಕ್ಕಿಂತ ಕಡಿಮೆಯವನೆಂದು ತಿಳಿಸುತ್ತಾರೆ. ಮೂರು ಮಂತ್ರಗಳಲ್ಲಿ "ಓಂಕಾರ"ವನ್ನು ಉಪಾಸಿಸುವರು ಬ್ರಹ್ಮಲೋಕವನ್ನು ಪಡೆಯುತ್ತಾನೆ.

ಆರನೆಯ ಪ್ರಶ್ನೆಷೋಡಶ ಕಲಾಪುರುಷನಿಗೆ ಸಂಬಂಧಿಸಿದುದು. ಷೋಡಶ ಕಲಾಪುರುಷ ಎಲ್ಲಿ ಇರುತ್ತಾನೆ? ಇದಕ್ಕೆ ಉತ್ತರವಾಗಿ ಪಿಪ್ಪಿಲಾದರು ಜೀವಾತ್ಮನ ದೇಹದಲ್ಲಿ ಹೃದಯ ಕಮಲದಲ್ಲಿರುತ್ತಾನೆಂದು ಉತ್ತರಿಸಿದರು.

ಪಿಪ್ಪಿಲಾದರು ಶಿಷ್ಯರಿಗೆ ಒಂದು ವರ್ಷ ತಪಸ್ಸನ್ನಾಚರಿಸುತ್ತಿರಿ. ಬ್ರಹ್ಮಚರ್ಯ ಮತ್ತು ಶ್ರದ್ಧೆ ಇವುಗಳನ್ನು ಅನುಷ್ಠಿಸಿ ಎಂದು ಹೇಳುತ್ತಾರೆ. ಇದರಿಂದ ತಪಸ್ಸು, ಬ್ರಹ್ಮಚರ್ಯೆ, ಶ್ರದ್ದೆ ಇವು ಜ್ಞಾನಸಂಪಾದನೆಗೆ ಅವಶ್ಯಕವೆಂದು ತಿಳಿಸಿ ಕೊಟ್ಟಂತಾಯಿತು. ಶಿಷ್ಯರನ್ನು ಹೊಂದುವುದರಲ್ಲಿ ಗುರು ಅತ್ಯಾಸಕ್ತಿ ಹೊಂದಬಾರದೆಂಬುದು ತೋರಿಸಿಕೊಟ್ಟಂತಾಯಿತು. ಶಿಷ್ಯನಿಗೆ ಗುರುವಿನಲ್ಲಿ ಅಚಲ ಶ್ರದ್ಧೆ ಮತ್ತು ಭಕ್ತಿ ಇರಬೇಕೆಂದು ತೋರಿಸಿ ಕೊಟ್ಟಂತಾಯಿತು.

ಈ ಉಪನಿಷತ್ತಿನಿಂದ ತತ್ವಜ್ಞಾನವನ್ನು ಗುರು ಮುಖೇನ ಪಡೆದು ಕೊಳ್ಳಬೇಕೆಂದು ತಿಳಿದು ಬರುತ್ತದೆ. ಸಾಧಕನು ಶ್ರದ್ಧೆಯನ್ನು ಹೊಂದಿ ಬ್ರಹ್ಮಚರ್ಯೆ ಮೊದಲಾದ ನಿಯಮಗಳನ್ನು ಪಾಲಿಸಬೇಕು. ಯಾವ ಜ್ಞಾನ ಪ್ರಾಪ್ತಿಗೂ ಮನಸ್ಸಿನ ಏಕಾಗ್ರತೆ, ಶ್ರದ್ಧೆ ಮೊದಲಾದುವು ಅತ್ಯವಶ್ಯಕವಾಗಿ ಸಂಪಾದಿಸಬೇಕಾದ ಗುಣಗಳು.

**ಡಯಲ್ ಯುವರ್ ಇ.ಓ.**

**ಯಾತ್ರಿಕ ಭಕ್ತರಲ್ಲಿ..... ವಿನಂತಿ**

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು
ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಆಚಾರ್ಯ ಮಧ್ವರು ಸಂದರ್ಶಿಸಿದ ತಾಣಗಳು

-ವಿದ್ವಾನ್. ಜಿ. ಗೋಪಾಲಾಚಾರ್



ಆಚಾರ್ಯ ಮಧ್ವರು ವಿಶ್ವ ಕಂಡ ಶ್ರೇಷ್ಠ ದಾರ್ಶನಿಕರು. ಪ್ರಸ್ಥಾನತ್ರಯಗಳಿಗೆ ಅದ್ಭುತ ವ್ಯಾಖ್ಯಾನ ಮಾಡಿದ ಮಹಾಮಹಿಮರು. ಇವರು ಸುಮಾರು ಎಂಟು ನೂರು ವರ್ಷಗಳ ಹಿಂದೆ ಕರ್ನಾಟಕದ ಕರಾವಳಿಯಲ್ಲಿ ಪವಿತ್ರ ಕ್ಷೇತ್ರವೆಂದು ಪ್ರಸಿದ್ಧವಾದ ಪಾಜಕದಲ್ಲಿ ಅವತರಿಸಿದರು. ಈ ಜಗಕೆ ತತ್ವವಾದದ ಹೊಸ ಬೆಳಕನ್ನು ನೀಡಿದ ಪೂರ್ಣಪ್ರಜ್ಞರು. ವಾಯುದೇವರ ಅವತಾರಭೂತರಾದ ಇವರು ಬಾಲ್ಯದಲ್ಲೇ ಅನೇಕ ಲೀಲೆಗಳನ್ನು ತೋರಿದ್ದಾರೆ. ಭಗವಾನ್ ಪರಶುರಾಮನು ನೆಲೆಸಿರುವ ಪಾಜಕಕ್ಷೇತ್ರವು ಇವರ ಅನೇಕ ಲೀಲೆಗಳಿಗೆ ಸಾಕ್ಷಿಯಾಗಿದೆ. ಮನುಷ್ಯರಿಂದ ಮಾಡಲು ಅಸಾಧ್ಯವಾದ ಕಾರ್ಯಗಳನ್ನು ಮಾಡಿ ಸಜ್ಜನರಿಗೆ ತಮ್ಮ ವ್ಯಕ್ತಿತ್ವವನ್ನು ತೋರಿಸಿದ್ದಾರೆ. ಜಗದ ಸಕಲ ಸುಜೀವಿಗಳಿಗೆ ಸುಜ್ಞಾನದ ಸುಧೆಯನ್ನು ಉಣಿಸಲು ಯತಿಶ್ರೇಷ್ಠರಾದ ಶ್ರೀ ಅಚ್ಯುತಪ್ರಜ್ಞರಲ್ಲಿ ಯತ್ಯಾಶ್ರಮವನ್ನು ಸ್ವೀಕರಿಸಿದರು. ಕನ್ಯಾ ಕುಮಾರಿಯಿಂದ ಹಿಮಾಲಯದ ವರೆಗಿನ ಸಮಗ್ರ ಭಾರತದ ಭೂಪ್ರದೇಶಗಳನ್ನು ಸಂಚರಿಸಿ ಸಜ್ಜನರನ್ನು ಉದ್ಧರಿಸಿದ್ದಾರೆ.

ಆ ಕಾಲದಲ್ಲಿ ಲಿಕುಚ ವಂಶವು ಖ್ಯಾತ ವಿದ್ವತ್ಕುಲವಾಗಿತ್ತು. ಈ ಕುಲದಲ್ಲಿ ಜನಿಸಿದ್ದ ವಿದ್ವಾಂಸರಾಗಿದ್ದ ಶ್ರೀ ತ್ರಿವಿಕ್ರಮ ಪಂಡಿತರು ಕಾಸರಗೋಡಿನಲ್ಲಿ ನೆಲೆಸಿದ್ದರು. ಇವರು ಬಾಲ್ಯದಲ್ಲಿಯೇ "ಉಷಾಹರಣ" ಎಂಬ ಶ್ರೇಷ್ಠಕಾವ್ಯವನ್ನು ಬರೆದಿದ್ದಾರೆ. ಇವರು ಸಂಚಾರಕ್ರಮೇಣ ಆ ಪ್ರಾಂತ್ಯಕ್ಕೆ ಆಗಮಿಸಿದ್ದ ಆಚಾರ್ಯಮಧ್ವರ ವಿದ್ವತ್ತಿಗೆ ತಲೆಬಾಗಿ ಶಿಷ್ಯತ್ವವನ್ನು ಸ್ವೀಕರಿಸಿದರು. ಶ್ರೀ ತ್ರಿವಿಕ್ರಮಪಂಡಿತರ ಮಕ್ಕಳೇ ಶ್ರೀ ನಾರಾಯಣ ಪಂಡಿತರು. ಇವರು ಆಚಾರ್ಯಮಧ್ವರ ಚರಿತ್ರೆಯನ್ನು ಹದಿನಾರು ಸರ್ಗಗಳಲ್ಲಿ ಸುಂದರವಾಗಿ ಪೋಣಿಸಿದ್ದಾರೆ. ಈ ಕಾವ್ಯಕ್ಕೆ "ಮಧ್ವವಿಜಯ" ಎಂದು ಹೆಸರು. ಮಧ್ವವಿಜಯದಲ್ಲಿ ಉಲ್ಲೇಖಿಸಿರುವ ಮಧ್ವರು ಸಂದರ್ಶಿಸಿದ ಅನೇಕ ಪ್ರದೇಶಗಳು ಇಂದಿಗೂ ಅನೇಕರಿಗೆ ತಿಳಿದಿಲ್ಲ. ಕಾಲದ ಪ್ರಭಾವದಿಂದ ಕೆಲವು ಪ್ರದೇಶಗಳು ಅನ್ಯಮತೀಯರ ಆಕ್ರಮಣಕ್ಕೆ ಒಳಗಾಗಿವೆ. ಇನ್ನು ಕೆಲವು ಸ್ಥಳಗಳು ಸಂಚಾರದ ಸುವ್ಯವಸ್ಥೆಯ ಕೊರತೆಯಿಂದ ಮತ್ತು ಸರಿಯಾದ ಮಾಹಿತಿಯ ಕೊರತೆಯಿಂದ ಜನರ ಸಂಪರ್ಕದಿಂದ ದೂರವಾಗಿದೆ. ಆಚಾರ್ಯ ಮಧ್ವರು ತಮ್ಮ ಸಂಚಾರದ ಸಂದರ್ಭದಲ್ಲಿ ಅನೇಕ ಭಕ್ತರಿಗೆ ಅನುಗ್ರಹ ಪೂರ್ವಕವಾಗಿ ದೇವತಾಪ್ರತಿಮೆಗಳನ್ನು ನೀಡಿದ್ದಾರೆ. ಇಂದಿಗೂ ಅನೇಕರ ಮನೆಗಳಲ್ಲಿ ಈ ಮೂರ್ತಿಗಳು ಇವೆ. ಈ ವಿಚಾರವೂ ಅನೇಕರಿಗೆ ತಿಳಿದಿಲ್ಲ.

ಮಧ್ವಗುರುಗಳು ಸಂದರ್ಶಿಸಿದ ಪ್ರಮುಖ ಸ್ಥಳಗಳನ್ನು ಮತ್ತು ಅನುಗ್ರಹಪೂರ್ವಕವಾಗಿ ನೀಡಿದ ದೇವತಾ ಪ್ರತಿಮೆಗಳ ವಿವರಗಳನ್ನೂ ಇಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ಇದೊಂದು ಅಪೂರ್ವ ಸಂಗ್ರಹ. ಮಧ್ವ ಯಾತ್ರೆಯ ಈ ಪ್ರದೇಶಗಳನ್ನು

ಕಾಣುವ ಹಂಬಲವಿರುವವರಿಗೆ ಉಪಯೋಗವಾಗಲಿ ಎಂಬುದೇ ಈ ಯೋಜನೆಯ ಉದ್ದೇಶ. ಮಧ್ವನವಮಿಯ ಪರ್ವ ಸಂದರ್ಭದಲ್ಲಿ ಆಚಾರ್ಯರ ಅಪೂರ್ವವಾದ ಸಾಧನೆಗಳನ್ನು ಮೆಲುಕುಹಾಕಲು ಇದೊಂದು ಪ್ರಯತ್ನ.

**1. ಪಾಜಕ ಕ್ಷೇತ್ರ -**

ಈ ಕ್ಷೇತ್ರವು ಆಚಾರ್ಯಮಧ್ವರ ಜನ್ಮಭೂಮಿ. ಜನ್ಮಭೂಮಿಗೆ ಹೋಗುವ ಮಾರ್ಗದ ಎರಡು ಬದಿಗಳಲ್ಲಿ ಎರಡು ಬೆಟ್ಟಗಳು ಸಿಗುತ್ತವೆ. ಒಂದರಲ್ಲಿ ಭಗವಾನ್ ಪರಶುರಾಮ ದೇವರು ನೆಲೆಸಿದ್ದಾರೆ.ಮತ್ತೊಂದರಲ್ಲಿ ಜಗನ್ಮಾತೆಯಾದ ದುರ್ಗಾದೇವಿ. ಈ ದೇವಿಯನ್ನು ಪರಶುರಾಮದೇವರು ಇಲ್ಲಿ ಪ್ರತಿಷ್ಠಾಪಿಸಿದ್ದಾರೆ. "ವಿಮಾನಗಿರಿ" ಎಂಬುವ ಹೆಸರಿದೆ ಈ ಬೆಟ್ಟಕ್ಕೆ. ಪಾಜಕದ ನಾಲ್ಕು ದಿಕ್ಕುಗಳಲ್ಲಿ ಪರಶು - ಗದಾ- ಬಾಣ- ಧನಸ್ಸು ಎಂಬ ನಾಲ್ಕು ತೀರ್ಥಗಳನ್ನು ಪರಶುರಾಮದೇವರು ನಿರ್ಮಿಸಿದ್ದಾರೆ. ಈ ಪವಿತ್ರ ಕ್ಷೇತ್ರವೇ ಮಧ್ಯಗೇಹ ದಂಪತಿಗಳ ವಾಸಪ್ರದೇಶವಾಗಿತ್ತು. ಇವರು ಸಂತಾನಭಾಗ್ಯವನ್ನು ಹಂಬಲಿಸಿ ಉಡುಪಿಯ ಶ್ರೀ ಅನಂತಾಸನ ಸನ್ನಿಧಿಯಲ್ಲಿ ಕಠಿಣವಾದ ಪಯೋವ್ರತವನ್ನು ಕೈಗೊಂಡರು. ಇದರಿಂದ ಸಂತುಷ್ಟನಾದ ಭಗವಂತನ ಅನುಗ್ರಹದಿಂದ ಇವರಿಗೆ ವಾಯುದೇವರು ಮಗನಾಗಿ ಅವತರಿಸಿದರು. ಹುಟ್ಟಿದ ಮಗುವಿಗೆ "ವಾಸುದೇವ" ಎಂದು ನಾಮಕರಣ ಮಾಡಿದರು. ಜ್ಞಾನ ಪ್ರಸಾರಕ್ಕಾಗಿಯೇ ಅವತರಿಸಿದ್ದರಿಂದ ಈ ಹೆಸರು ಅನ್ವರ್ಥವಾಗಿತ್ತು. ವಾಸುದೇವನು ತೋರಿದ ಅನೇಕ ಲೀಲೆಗಳಿಗೆ ಈ ಮನೆ ಸಾಕ್ಷಿಯಾಗಿದೆ.

ಈಗ ಈ ಮನೆಯಲ್ಲಿ ಅನೇಕ ಸ್ಮಾರಕಗಳನ್ನು ಸಂರಕ್ಷಿಸಲಾಗಿದೆ. 1. ವಾಸುದೇವನಿಗೆ ತಂದೆ ಅಕ್ಷರಾಭ್ಯಾಸವನ್ನು ಮಾಡಿಸಿದ ಕಲ್ಲು, 2. ತಂದೆಯ ಮೇಲಿನ ಕರುಣೆಯಿಂದ ತಾನೇ ನಿರ್ಮಿಸಿದ ಪರಶುರಾಮ ನಿರ್ಮಿತ ನಾಲ್ಕು ತೀರ್ಥಗಳ ಸನ್ನಿಧಾನವುಳ್ಳ ವಾಸುದೇವ ತೀರ್ಥ,3. ಹುಣಸೆ ಬೀಜಗಳನ್ನು ನೀಡಿ ತಂದೆಯ ಸಾಲವನ್ನು ತೀರಿಸಿದ ಸ್ಥಳ, 4.ಹಾಲಿನ ಪಾತ್ರೆಗೆ ಮುಚ್ಚುವುದಕ್ಕಾಗಿ ತಂದ ದೊಡ್ಡ ಕಲ್ಲುಗಳು, 5. ತಾಯಿಯ ಕರೆಗೆ ಓಗೊಟ್ಟು ಹಾರಿ ಬಂದಾಗ ಮೂಡಿದ ವಾಸುದೇವನ ದಿವ್ಯ ಪಾದಗಳು, 6. ವಾಸು ದೇವನನ್ನು ಕೊಲ್ಲಲು ಬಂದು ಇವನ ಕಾಲಿನ ಬೆರಳಿನ ತುದಿಗೆ ಸಿಲುಕಿ ಅಸುನೀಗಿದ ಸರ್ಪಾಸುರ, ವೇದಪ್ರಾಮಾಣ್ಯನನ್ನು ಸಮರ್ಥಿಸುತ್ತ ನೆಟ್ಟ ಗಿಡ, ಹೀಗೆ ಇನ್ನೂ ಅನೇಕ ಮಹಿಮೆಗಳಿಗೆ ಈ ಕ್ಷೇತ್ರವು ಸಾಕ್ಷಿಯಾಗಿದೆ. ಈ ಮಠವು ಶ್ರೀಕಾಣಿಯೂರು ಮಠದ ಆಡಳಿತದಲ್ಲಿದೆ.

**1. ಸಂದಳಿಗೆಪಾಡಿ:**

ವಾಸುದೇವನು ಹುಟ್ಟಿದಾಗ ತಂದೆ ಮಧ್ಯಗೇಹ ಭಟ್ಟರು ತನ್ನ ಕುಟುಂಬದೊಂದಿಗೆ ಕುಲಸ್ವಾಮಿಯಾದ ಉಡುಪಿಯ ಶ್ರೀ ಅನಂತೇಶ್ವರನನ್ನು ಆರಾಧಿಸಲು ಪಾಜಕದಿಂದ ಉಡುಪಿಗೆ ಬರುತ್ತಾರೆ. ಕುಲದೇವತೆಯನ್ನು ಆರಾಧಿಸಿ ಪಾಜಕಕ್ಕೆ ಹೋಗುವಾಗ ದಾರಿಯಲ್ಲಿ ದೊಡ್ಡದೊಂದು ವನ ಸಿಗುತ್ತದೆ. ಆಗ ಮಧ್ಯರಾತ್ರಿಯ ಸಮಯ. ಅಲ್ಲಿ ಕ್ರೀಡಿಸುತ್ತಿದ್ದ ಪಿಶಾಚವು ಒಬ್ಬನಲ್ಲಿ ರಕ್ತವನ್ನು ಕಾರಿಸಿ ಎಲ್ಲವನ್ನೂ ಹೆದರಿಸುತ್ತದೆ. ಅಲ್ಲಿದ್ದವರಿಗೆ ವಾಸುದೇವನ ಮಹಿಮೆಯನ್ನು ತಿಳಿಸುತ್ತದೆ. ಪಿಶಾಚಿಯು ತಿಳಿಸಿದ ವಿಚಾರವನ್ನು ಕೇಳಿ ಎಲ್ಲರೂ ಆಶ್ಚರ್ಯಗೊಂಡರು.ಈ ಘಟನೆ ನಡೆದದ್ದು ಸಂದಳಿಕೆಪಾಡಿಯಲ್ಲಿ. ಈ ಸ್ಥಳವು ಉಡುಪಿಯಿಂದ ಅಲೆವೂರಿಗೆ ಹೋಗುವ ಮಾರ್ಗದಲ್ಲಿದೆ.

**2. ಮೂಡಿಲ್ಲಾಯರು -**

ಉಡುಪಿಯ ಪೂರ್ವದಿಕ್ಕಿನಲ್ಲಿದ್ದ ಈ ಮನೆಯವರಿಗೆ ಮೂಡಿಲ್ಲಾಯರು ಎಂದು ಹೆಸರು. ವಾಸುದೇವನು ಸಣ್ಣ ಮಗುವಾಗಿದ್ದಾಗ ಅವನಿಗೆ ಹಾಲಿನ ವ್ಯವಸ್ಥೆಗಾಗಿ ಇವರು ಗೋದಾನವನ್ನು ಮಾಡುತ್ತಾರೆ. ಸಾಕ್ಷಾತ್ ವಾಯುದೇವರಿಗೇ ದಾನ ಮಾಡಿದ್ದರಿಂದ ಅಪರಿಮಿತವಾದ ಫಲವನ್ನು ಹೊಂದಿದರು. ಈ ಮನೆಯವರ ಸೇವೆಗೆ ಸಂತುಷ್ಟರಾಗಿ ಶ್ರೀ ಮಧ್ವಾಚಾರ್ಯರು ಗರುಡಾರೂಢ ಲಕ್ಷ್ಮೀನಾರಾಯಣ ಪ್ರತಿಮೆಯನ್ನು ಅನುಗ್ರಹಿಸಿದ್ದಾರೆ. ಈ ಮನೆಯು ಉಡುಪಿಯ ಚಿಟ್ಪಾಡಿಯಲ್ಲಿದೆ. ಶ್ರೀಶ್ರೀನಿವಾಸ ದೇವಸ್ಥಾನದ ಮುಂಭಾಗದಲ್ಲಿರುವ ಬಲ್ಲಾಳರ ಮನೆಯಲ್ಲಿ ಈ ಮೂರ್ತಿಯು ಕಂಗೊಳಿಸುತ್ತಿದೆ. ಪರ್ಯಾಯ ಪೀಠವೇರುವ ಶ್ರೀಗಳು ಈ ಮನೆಗೆ ಬಂದು ದೇವರ ದರ್ಶನವನ್ನು ಮಾಡಿ ಆಮಂತ್ರಣದ ರಾಯಸವನ್ನು ನೀಡುವ ಪದ್ಧತಿಯು ಇಂದಿಗೂ ನಡೆದುಕೊಂಡು ಬರುತ್ತಿದೆ. ಈಗ ಈ ಮನೆಯಲ್ಲಿ ಚಿತ್ಪಾಡಿ ಬೀಡು ಬಲ್ಲಾಳರಾದ ಡಾ॥ ಗೋಪಾಲಕೃಷ್ಣ ಬಲ್ಲಾಳರು ಸಾಮಾಜಿಕ ಸೇವೆಯ ಜೊತೆಗೆ ಪಾರಂಪರಿಕ ಧಾರ್ಮಿಕ ಆಚರಣೆಗಳೊಂದಿಗೆ ಎಲ್ಲರಿಗೂ ಚಿರಪರಿಚಿತರಾಗಿದ್ದಾರೆ.

**3. ಕೊಡವೂರು ಶಂಕರನಾರಾಯಣ -**

ಒಮ್ಮೆ ವಾಸುದೇವನು ತಂದೆ ತಾಯಿಯ ಜೊತೆಯಲ್ಲಿ ಮಲ್ಪೆಯ ಸಮೀಪವಿರುವ ನಿಡಿಯೂರಿನ ಬಂಧುಗಳ ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಹೋಗುತ್ತಾನೆ. ಮನೆಯಲ್ಲಿ ಬಂಧು ವ್ಯಾಮೋಹದಲ್ಲಿ ಯಾರೂ ವಾಸುದೇವನನ್ನು ಗುರುತಿಸುವುದಿಲ್ಲ. ಆಗ ವಾಸುದೇವನು ಅಲ್ಲಿಂದ ಉಡುಪಿಯ

ಮಾರ್ಗದಲ್ಲಿ ಸಿಗುವ ಕಾನನದೇವತಾಸದನ ಎಂದೇ ಪ್ರಸಿದ್ಧವಾದ ಕೊಡವೂರಿನ ಈ ಶಂಕರನಾರಾಯಣ ದೇವಾಲಯಕ್ಕೆ ಆಗಮಿಸುತ್ತಾನೆ. ಕೇವಲ ನಾಲ್ಕು ವರ್ಷದ ಬಾಲಕ ವಾಸುದೇವನು ಏಕಾಂಗಿಯಾಗಿ ಕಾಡಿನ ದಾರಿಯಲ್ಲಿ ಬಂದು ಶ್ರೀ ಶಂಕರನಾರಾಯಣ ದೇವರನ್ನು ಸ್ತುತಿಸುತ್ತಾನೆ. ಇದು ಅತ್ಯಂತ ಪ್ರಾಚೀನವಾದ ದೇವಸ್ಥಾನವಾಗಿದೆ. ಈಗಲೂ ಅಷ್ಟ ಮಠದ ಶ್ರೀಪಾದರು ಇಲ್ಲಿಗೆ ಬಂದು ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ.

**4. ಬನ್ನಂಜೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ -**

ಕೊಡವೂರಿನಿಂದ ಉಡುಪಿಗೆ ಬರುವಾಗ ಈ ದೇವಸ್ಥಾನವು ಸಿಗುತ್ತದೆ. ಬನ್ನಂಗಾಯಿ ಹೆಚ್ಚು ಬೆಳೆಯುವ ಸ್ಥಳವಾದ್ದರಿಂದ ಬನ್ನಂಜೆ ಎಂಬ ಹೆಸರು. ಬಹು ಸುಂದರವಾದ ದೇವಸ್ಥಾನ,ವಾಸುದೇವನು ಇಲ್ಲಿಗೆ ಆಗಮಿಸಿ ಶಿವಾಂತರ್ಯಾಮಿಯಾದ ನಾರಾಯಣನನ್ನು ಸ್ತುತಿಸಿದ್ದಾನೆ. ಇತ್ತೀಚೆಗೆ ಈ ದೇವಸ್ಥಾನವು ಜೀರ್ಣೋದ್ಧಾರಗೊಂಡು ಭವ್ಯವಾಗಿದೆ.

**5. ನಯಂಪಳ್ಳಿ -**

ಉಡುಪಿ ಬ್ರಹ್ಮಾವರದ ಮಾರ್ಗದಲ್ಲಿ ಸಂತೆಕಟ್ಟೆಯ ಸನಿಹದಲ್ಲಿ ಈ ಗ್ರಾಮವಿದೆ. ಸಂಸ್ಕೃತದಲ್ಲಿ ಘೃತವಲ್ಲಿ ಎಂದು, ಕನ್ನಡದಲ್ಲಿ ನೇಯಂಪಳ್ಳಿ ಎಂದು ಹೆಸರು. ಇಲ್ಲಿ ತುಪ್ಪವು ಸಮೃದ್ಧವಾಗಿ ದೊರೆಯುತ್ತಿತ್ತು. ಇಲ್ಲಿ ಪ್ರಾಚೀನವಾದ ಮಲ್ಲಿಕಾರ್ಜುನ ದೇವಾಲಯವಿದೆ. ಒಮ್ಮೆ ಈ ದೇವಸ್ಥಾನದಲ್ಲಿ ಮಡಿನ್ನಾಯ ಕುಲದಲ್ಲಿ ಜನಿಸಿದ ಶಿವಪಂಡಿತರಿಂದ ಪ್ರವಚನ ಕಾರ್ಯಕ್ರಮವಿತ್ತು. ವಾಸುದೇವನು ತಾಯಿಯ ಜೊತೆಯಲ್ಲಿ ಇಲ್ಲಿಗೆ ಬರುತ್ತಾನೆ. ಆ ಪಂಡಿತರು ನಡೆಸುತ್ತಿದ್ದ ಪ್ರವಚನವು ವೇದವ್ಯಾಸರಿಗೆ ವಿರುದ್ಧವಾಗಿರುವುದನ್ನು ಸಭೆಯಲ್ಲಿ ತಿಳಿಸುತ್ತಾನೆ. ಸಣ್ಣ ವಯಸ್ಸಿನಲ್ಲಿ ವಾಸುದೇವನು ತೋರಿದ ಈ ಪ್ರತಿಭೆಯನ್ನು ಕಂಡು ಎಲ್ಲರೂ ವಿಸ್ಮಿತರಾಗುತ್ತಾರೆ. ಇಂದಿಗೂ ಈ ದೇವಾಲಯವನ್ನು ಮಡೆ ಮಲ್ಲಿಕಾರ್ಜುನ ದೇವಸ್ಥಾನವೆಂದು ಕರೆಯುತ್ತಾರೆ.

**6. ದಂಡತೀರ್ಥ**

ಉಡುಪಿ ಮಂಗಳೂರು ಮಾರ್ಗದಲ್ಲಿ ಕಾಪುವಿನ ಸಮೀಪದಲ್ಲಿ ಈ ಪ್ರದೇಶವಿದೆ. ಹಿಂದೆ ಇಲ್ಲಿ ತೋಟಂತಿಲ್ಲಾಯರ ಗುರುಕುಲ ಇತ್ತು. ಶ್ರೀ ಮಧ್ಯಗೇಹ ಭಟ್ಟರು ವಾಸುದೇವನಿಗೆ ಉಪನಯನವನ್ನು ಮಾಡಿ ವೇದಾಧ್ಯಯನಕ್ಕಾಗಿ ತೋಟಂತಿಲ್ಲಾಯರ ಬಳಿಯಲ್ಲಿ ಕಳಿಸುತ್ತಾರೆ. ವಾಸುದೇವನು ಈ ಗುರುಕುಲದಲ್ಲಿ ತನ್ನ ಅಗಾಧವಾದ ಮಹಿಮೆಯನ್ನು ತೋರಿಸುತ್ತಾನೆ. ಬೇಸಿಗೆಯ ಧಗೆಯಿಂದ ಧರೆಯು ಒಣಗಿದಾಗ ವಾಸುದೇವನು ಎಲ್ಲರ ಉಪಯೋಗಕ್ಕಾಗಿ ತನ್ನ ಕೈಯಲ್ಲಿದ್ದ ಪಾಲಾಶ ದಂಡದಿಂದ ಎಂದೂ ಬತ್ತದ ನೀರಿನ ಸೆಲೆಯನ್ನು ಉಂಟು ಮಾಡುತ್ತಾನೆ. ಇದೇ ಇಂದು ದಂಡತೀರ್ಥ. ಸನ್ಯಾಸಾಶ್ರಮದ ನಂತರ ಗುರುಗಳಾದ ತೋಟಂತಿಲ್ಲಾಯರಿಗೆ ಕುಂಚೀಕೃಷ್ಣನನ್ನು ನೀಡಿ ಅನುಗ್ರಹಿಸುತ್ತಾರೆ. ಬಲು ಸುಂದರವಾದ ಈ ತಟಾಕದಲ್ಲಿ ಪರ್ಯಾಯ ಪೀಠವೇರುವ ಶ್ರೀಗಳು ಜನವರಿ 18 ರಂದು ಬೆಳಿಗ್ಗೆ 4 ಕ್ಕೆ ಸ್ನಾನವನ್ನು ಮಾಡಿ ಆಹ್ನಿಕವನ್ನು ಪೂರೈಸಿ ಪುನೀತರಾಗಿ ಸರ್ವಜ್ಞ ಪೀಠಾರೋಹಣಕ್ಕಾಗಿ ಉಡುಪಿಗೆ ಹೋಗುವ ಪದ್ಧತಿ ಬೆಳೆದು ಬಂದಿದೆ. ಶ್ರೀ ಗೋಪಾಲಕೃಷ್ಣನ ಸನ್ನಿಧಾನವಿರುವ ಮಠವು ಇಲ್ಲಿದೆ. ಈ ದಂಡತೀರ್ಥ ಮತ್ತು ಮಠವು ಶ್ರೀಕೃಷ್ಣಾಪುರ ಮಠದ ಆಡಳಿತದಲ್ಲಿದೆ.

**7. ಮಧ್ವಕಟ್ಟೆ -**

ಈ ಸ್ಥಳವು ಉಡುಪಿಯಿಂದ ಕಾಪುವಿಗೆ ಹೋಗುವಾಗ ಕಾಪುವಿನ ಸಮೀಪದ ಪಾಂಗಳದಲ್ಲಿದೆ. ವಾಸುದೇವನು ಪಾಜಕದ ಮನೆಯಿಂದ ಗುರುಕುಲಕ್ಕೆ ಬರುವಾಗ ಮತ್ತು ಗುರುಕುಲದಿಂದ ಮನೆಗೆ ಹೋಗುವಾಗ ಒಂದು ಅಶ್ವತ್ಥ ಮರದ ಕೆಳಗೆ ವಿಶ್ರಮಿಸುತ್ತಿದ್ದನು. ಮೊದಲು ಇಲ್ಲಿ ಶ್ರೀಜನಾರ್ದನ ದೇವಸ್ಥಾನವಿತ್ತು. ಈಗ ದೇವಸ್ಥಾನವು ಸ್ವಲ್ಪ ದೂರದಲ್ಲಿದೆ. ಉತ್ಸವದ ಸಂದರ್ಭದಲ್ಲಿ ಈಗಲೂ ಉತ್ಸವಮೂರ್ತಿಯನ್ನು ತಂದು ಇಲ್ಲಿ ಪೂಜಿಸುತ್ತಾರೆ. ವಾಸುದೇವನು ವಿಶ್ರಮಿಸುತ್ತಿದ್ದ ಸ್ಥಳಕ್ಕೆ ಮಧ್ವಕಟ್ಟೆ ಎಂದು ಕರೆಯುತ್ತಾರೆ.

**8. ಕಾನ್ಲೂರು ಮಠ**

ಕರ್ನಾಟಕ ಕೇರಳದ ಗಡಿಭಾಗದಲ್ಲಿ ಈ ಗ್ರಾಮವಿದೆ. ಮಂಗಳೂರು ಪುತ್ತೂರು ಮಾರ್ಗವಾಗಿ ಈಶ್ವರಮಂಗಳದಿಂದ ಈ ಊರಿಗೆ ಹೋಗಬೇಕು. ಸನ್ಯಾಸಾಶ್ರಮವನ್ನು ಸ್ವೀಕರಿಸಲು ಸಂಕಲ್ಪಿಸಿದ ವಾಸುದೇವನು ಪಾಜಕದ ಮನೆಯನ್ನು ತೊರೆದು ಈ ಊರಿನ ಮಠಕ್ಕೆ ಬರುತ್ತಾನೆ. ಆ ಕಾಲದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದ ಯತಿಶ್ರೇಷ್ಠರಾದ ಶ್ರೀ ಅಚ್ಯುತಪ್ರಜ್ಞರು ಈ ಮಠದಲ್ಲಿ ವಿರಾಜಮಾನರಾಗಿದ್ದರು. ವೇದಾಂತದ ಶ್ರೇಷ್ಠ ಗುರುಕುಲವೂ ಇಲ್ಲಿತ್ತು. ಮಗನ ಯತ್ಯಾಶ್ರಮದ ವಾರ್ತೆಯನ್ನು ತಿಳಿದ ತಂದೆ ಮಧ್ಯಗೇಹ ಭಟ್ಟರು ಈ ಮಠಕ್ಕೆ ಬರುತ್ತಾರೆ. ಆಶ್ರಮದ ವಿಷಯದಲ್ಲಿ ತಂದೆಯೊಂದಿಗೆ ನಡೆಸಿದ ಒಪ್ಪಂದದಂತೆ ಇನ್ನೊಂದು ಗಂಡು ಮಗು ತಂದೆಗೆ ಆಗುವ ತನಕ ಆಶ್ರಮ ಸ್ವೀಕರಿಸದೇ ಗುರುಗಳ ಬಳಿಯಲ್ಲೇ ಇರುವನು. ಒಮ್ಮೆ ವಾಸುದೇವನು ತನಗೆ ತಮ್ಮ ಹುಟ್ಟಿದ ವಾರ್ತೆಯನ್ನು ಕೇಳಿ

ಮನೆಗೆ ಬಂದು ತಂದೆ ತಾಯಿಯರ ಅನುಮತಿಯನ್ನು ಪಡೆದು ಸನ್ಯಾಸಾಶ್ರಮವನ್ನು ಸ್ವೀಕರಿಸುತ್ತಾನೆ. ಶ್ರೀ ಅಚ್ಯುತ ಪ್ರಜ್ಞರು ವಾಸುದೇವನಿಗೆ "ಪೂರ್ಣಪ್ರಜ್ಞ" ಎಂದು ನಾಮ



ಕರಣವನ್ನು ಮಾಡುತ್ತಾರೆ.ಇವರು ಸರ್ವಜ್ಞರಾದ್ದರಿಂದ ಈ ಹೆಸರು ಅನ್ವರ್ಥವಾಗಿತ್ತು. ಆಶ್ರಮದ ಮುಂಚೆ ಕೆಲವು ಸಮಯ ಮತ್ತು ಆಶ್ರಮದ ನಂತರ ಕೆಲವು ಸಮಯ ಮಧ್ವರು ಇಲ್ಲಿ ವಾಸವಾಗಿದ್ದರು. ಈ ಮನೆಯವರ ಹೆಸರು ಕಲ್ಲೂರಾಯರು. ಇವರ ಸೇವೆಗೆ ಸಂತುಷ್ಟರಾಗಿ ಶ್ರೀಮಧ್ವಚಾರ್ಯರು ಶ್ರೀಕೃಷ್ಣನ ಸುಂದರವಾದ ವಿಗ್ರಹವನ್ನು ನೀಡಿದ್ದಾರೆ. ಅತ್ಯಂತ ಪ್ರಶಾಂತವಾದ ಈ ಮಠವು ಇಂದಿಗೂ ಯಾರ ಗಮನಕ್ಕೂ ಬರದ ತಾಣವಾಗಿದೆ.

### 9. ಮಧ್ವಸರೋವರ -

ಶ್ರೀ ಮಧ್ವಾಚಾರ್ಯರು ಸನ್ಯಾಸಾಶ್ರಮವನ್ನು ಸ್ವೀಕರಿಸಿ ಉತ್ತರ ಭಾರತ ಸಂಚಾರಕ್ಕೆ ಹೊರಡಲು ಸಂಕಲ್ಪಿಸುತ್ತಾರೆ. ಶಿಷ್ಯನ ವಿರಹವನ್ನು ತಾಳಲಾರದೇ ಶ್ರೀ ಅಚ್ಯುತಪ್ರಜ್ಞರು ಶ್ರೀ ಅನಂತೇಶ್ವರನನ್ನು ಪ್ರಾರ್ಥಿಸುತ್ತಾರೆ. ಆಗ ಅಶರೀರವಾಣಿಯ ಮೂಲಕ ಭಗವಂತನು ತಿಳಿಸಿದಂತೆ ಮೂರನೆಯ ದಿವಸ ದಲ್ಲಿ ಅಲ್ಲಿರುವ ಅನಂತಸರೋವರದಲ್ಲಿ ಗಂಗಾ ಪ್ರತ್ಯಕ್ಷ ಳಾಗುತ್ತಾಳೆ.ಮಧ್ವಾಚಾರ್ಯರ ಜೊತೆಯಲ್ಲಿ ಎಲ್ಲರೂ ಸ್ನಾನ ವನ್ನು ಮಾಡುತ್ತಾರೆ.ಅಂದಿನಿಂದ ಈ ತಟಾಕಕ್ಕೆ ಮಧ್ವ ಸರೋವರ ಎಂದು ಹೆಸರು ಬಂದಿದೆ. ಇಂದಿಗೂ ಹನ್ನೆರಡು ವರ್ಷಗಳಿಗೊಮ್ಮೆ ಗಂಗೆ ಇಲ್ಲಿ ಪ್ರತ್ಯಕ್ಷಳಾಗುವಳು ಎಂದು ಪ್ರತೀತಿ. ಉಡುಪಿಯ ಶ್ರೀಕೃಷ್ಣಮಠದ ಬಳಿಯಲ್ಲಿ ಈ ಸರೋವರವಿದೆ. ಅಷ್ಟಮಠದ ಯತಿಗಳು ಪ್ರತಿದಿನ ಇಲ್ಲಿ ಸ್ನಾನವನ್ನು ಮಾಡಿ ಶ್ರೀಕೃಷ್ಣಪೂಜೆಗೆ ತೆರಳುವರು.

(ಸಶೇಷ)

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು

## ಜೂಬ್ಲಿಹಿಲ್ಸ್, ಹೈದರಾಬಾದ್‌ನಲ್ಲಿ
## ತಿರುಮಲ ತಿರುಪತಿ ದೇವಸ್ಥಾನವು ನೂತನವಾಗಿ ನಿರ್ಮಿಸಿದ
## ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ 2019 ಮಾರ್ಚ್ 9 ರಿಂದ 13 ರ ವರೆಗೆ,
## ನಡೆದ ವಿಗ್ರಹ ಪ್ರತಿಷ್ಠೆ, ಕಲಶಸ್ಥಾಪನೆ, ಮಹಾಕುಂಭಾಭಿಷೇಕ ದೃಶ್ಯಗಳು



ಕ್ಷೀರಾಭಿಷೇಕದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯವರು



ಉಭಯದೇವಿಯರೊಂದಿಗೆ ಶ್ರೀ ಸ್ವಾಮಿಯವರು (ಉತ್ಸವ ಮೂರ್ತಿಗಳು)




ಚಂದನಾಭಿಷೇಕದಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯವರು



ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದ ದೃಶ್ಯ - ಜೂಬ್ಲಿಹಿಲ್ಸ್, ಹೈದರಾಬಾದ್



ಪೂರ್ಣಾಹುತಿ



ಪವಿತ್ರಬಿಂಬಗಳೊಂದಿಗೆ ತಿ.ತಿ.ದೇ. ಅರ್ಚಕ ಬೃಂದ, ಉನ್ನತಾಧಿಕಾರಿಗಳು



ಗರ್ಭಾಲಯದ ಶಿಖರ ಮಹಾಸಂಪ್ರೋಕ್ಷಣೆ


## ಫೆಬ್ರವರಿ 25 ರಿಂದ ಮಾರ್ಚ್ 06 ರ ವರೆಗೆ
## ತಿರುಪತಿ ಕಪಿಲತೀರ್ಥದಲ್ಲಿ
## ಶ್ರೀ ಕಪಿಲೇಶ್ವರ ಸ್ವಾಮಿಯವರಿಗೆ
## ನಡೆದ
## ವಾರ್ಷಿಕ ಬ್ರಹ್ಮೋತ್ಸವದ
## ದೃಶ್ಯಮಾಲಿಕೆ



ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ ಧ್ವಜಾರೋಹಣ



ಹಂಸವಾಹನದಲ್ಲಿ ಶ್ರೀ ಕಪಿಲೇಶ್ವರ ಸ್ವಾಮಿಯವರು



ಅಧಿಕಾರನಂದಿ ವಾಹನದಲ್ಲಿ ಶ್ರೀ ಕಪಿಲೇಶ್ವರ ಸ್ವಾಮಿಯವರು,
ಕಾಮಧೇನುವಿನ ಮೇಲೆ ಶ್ರೀ ಕಾಮಾಕ್ಷಿ ಅಮ್ಮನವರು



ಕಲ್ಪವೃಕ್ಷವಾಹನದಲ್ಲಿ ಶ್ರೀ ಕಾಮಾಕ್ಷಿ ಕಪಿಲೇಶ್ವರ ಸ್ವಾಮಿಯವರು



ಭೂತವಾಹನದಲ್ಲಿ ಶ್ರೀ ಕಪಿಲೇಶ್ವರ ಸ್ವಾಮಿಯವರು, ಕಾಮಾಕ್ಷಿ ಅಮ್ಮನವರು



ಸೂರ್ಯಪ್ರಭ ವಾಹನದಲ್ಲಿ ಶ್ರೀ ಕಾಮಾಕ್ಷಿ ಸಮೇತ ಕಪಿಲೇಶ್ವರಸ್ವಾಮಿ ಯವರು.

ತಿರುಮಲ ತಿರುಪತಿ ದೇವಸ್ಥಾನಗಳು

# ಫೆಬ್ರವರಿ 24 ರಿಂದ ಮಾರ್ಚ್ 04 ರ ವರೆಗೆ ಶ್ರೀನಿವಾಸಮಂಗಾಪುರದಲ್ಲಿ ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರಿಗೆ ತಿ.ತಿ.ದೇ., ನಿರ್ವಹಿಸಿದ ವಾರ್ಷಿಕ ಬ್ರಹ್ಮೋತ್ಸವದ ದೃಶ್ಯಮಾಲಿಕೆ


ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ಧ್ವಜಾರೋಹಣ


ದೊಡ್ಡ ಶೇಷವಾಹನದಲ್ಲಿ ಉಭಯದೇವಿಯರೊಂದಿಗೆ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು


ಸಿಂಹವಾಹನದಲ್ಲಿ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು


ಹಂಸವಾಹನದಲ್ಲಿ ಸರಸ್ವತಿ ಅಲಂಕಾರದಲ್ಲಿ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು


ಸೂರ್ಯಪ್ರಭಾವಾಹನದಲ್ಲಿ ಪ್ರಕಾಶಿಸುತ್ತಿರುವ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು


ಕಲ್ಪವೃಕ್ಷವಾಹನದಲ್ಲಿ ಕಾಮಿತಾರ್ಥ ಪ್ರದಾಯಿಯಾಗಿ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು



### ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್

'ಮಾನವ ಸೇವೆಯೇ ಮಾಧವ ಸೇವೆ' ಎನ್ನುವ ಗುರಿ ಹೊಂದಿರುವ ತಿ.ತಿ.ದೇವಸ್ಥಾನವು ವಿವಿಧ ಸಾಮಾಜಿಕ ಸಂಕ್ಷೇಮ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ಇವರ ಅಂಗವಾಗಿ ಬಾಲಬಾಲಿಯರಿಗೆ ಸಹಾಯಮಾಡುವ ಸಂಕಲ್ಪದೊಂದಿಗೆ 1943 ನೇ ಇಸವಿಯಲ್ಲಿ ಶ್ರೀವೇಂಕಟೇಶ್ವರ ಬಾಲಮಂದಿರ (ತಿರುಪತಿ) ಟ್ರಸ್ಟ್, ತಿ.ತಿ.ದೇ. ಸ್ಥಾಪಿಸಿದೆ. ಈ ಶ್ರೀ ವೇಂಕಟೇಶ್ವರ ಬಾಲಮಂದಿರ ಟ್ರಸ್ಟ್ ಪ್ರಸ್ತುತ ಶ್ರೀವೇಂಕಟೇಶ್ವರ ಜಲನಿಧಿ ಪಥಕಂ,ಕಲ್ಯಾಣಮಸ್ತು ಟ್ರಸ್ಟ್, ಶ್ರೀ ವೇಂಕಟೇಶ್ವರ ಸಮಾಚಾರ ಸಾಂಕೇತಿಕ ಟ್ರಸ್ಟ್‌ಗಳು ಎಲ್ಲವನ್ನು ಸೇರಿಸಿ 'ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್' ಎಂಬುದಾಗಿ ರೂಪ ತಳೆದಿದೆ.

## ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್‌ನ ಗುರಿಗಳು

1) ಅನಾಥ ಮಕ್ಕಳು,ವೃದ್ಧರು,ನಿರಾಶ್ರಿತರ,ಅಭಾಗ್ಯರು, ಬಡ-ಬಗ್ಗರು, ಬಲಹೀನರ ಅಭಿವೃದ್ಧಿ, ಅವರ ಸಂರಕ್ಷಣೆ, ಅವರ ಸಂಕ್ಷೇಮಕ್ಕಾಗಿ ಧರ್ಮಶಾಲೆಗಳು,ವಸತಿಗೃಹಗಳ ಏರ್ಪಾಟು. ಅನಾಥರು, ಆರ್ಥಿಕವಾಗಿ ಹಿಂದುಳಿದವರು, ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಸಹಾಯ ಮಾಡುವುದು.

2) ದಿವ್ಯಾಂಗರು,ಮಾನಸಿಕರೋಗಿಗಳಿಗೆ ಉಚಿತ ವೈದ್ಯಕೀಯ ಅನುಕೂಲಗಳನ್ನು ಒದಗಿಸಿ, ಅವರ ಜೀವನದಲ್ಲಿ ಹೊಸದೊಂದು ಆಯಾಮವನ್ನು ಕಲ್ಪಿಸುವುದು. ಈ ಲಕ್ಷ್ಯದಲ್ಲಿ ಕುಲ,ಮತ,ಜಾತಿ,ವರ್ಗ,ವರ್ಣಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಸ್ವೀಕರಿಸುವುದು.

3) ಕಿವುಡು, ಮೂಕಮಕ್ಕಳಿಗೆ, ಹುಟ್ಟಿನಿಂದಲೇ ಲೋಪವಿರುವ ಶಿಶುಗಳಿಗೆ ಶಿಶುವಿಹಾರಗಳನ್ನು ಏರ್ಪಾಟು ಮಾಡುವುದು.

4) ಪ್ರವಾಹ - ಬರ ಬಂದು ಪ್ರಕೃತಿ ವಿಪತ್ತುಗಳ ಸಮಯದಲ್ಲಿ ಅಗ್ನಿ ಅನಾಹುತಗಳಿಂದ ಅನಪೇಕ್ಷಿತ ದುರ್ಘಟನೆಗಳ ವೇಳೆಯಲ್ಲಿ ಯಥೋಚಿತವಾದ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು.

5) ಅಲ್ಲದೇ ವಿಕಲಚೇತನರಾಗಿ ಹುಟ್ಟಿ ತಂತಮ್ಮ ಗ್ರಾಮಗಳಲ್ಲಿ ನೆಲೆಸಿರುವ ಮಕ್ಕಳಿಗೆ ಬೇಕಾಗುವ ಎಲ್ಲಾ ಪರಿಕರಗಳನ್ನು ಒದಗಿಸುವುದು ಮತ್ತು ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು.

6) ಬದುಕಲು ಅತ್ಯಾವಶ್ಯಕವಾದ ಕುಡಿಯುವ ನೀರನ್ನು ಪ್ರತಿನಿತ್ಯ ತಲುಪಿಸುವುದು. ತಿರುಮಲೆ ಪಂಚಾಯಿತಿ, ತಿರುಮಲೆ ಕಾರ್ಪೊರೇಷನ್‌ಗಳಿಗೆ ಬೇಕಾಗುವ ನೀರು ಅಣೆಕಟ್ಟುಗಳನ್ನು ನಿರ್ಮಿಸುವುದು. ನೀರಿನ ಇತರ ಸಮಸ್ಯೆಗಳಿಗೆ ಉಚಿತವಾದ ಕಾರ್ಯಗಳನ್ನು ಮಾಡುವುದು.



7) ಪುಸ್ತಕಗಳಿಂದ ಆರಂಭಿಸಿ ಇಂಟರ್‌ನೆಟ್ ಮತ್ತಿತರ ಆಧುನಿಕ ಉಪಕರಣಗಳಿಂದ ನಮ್ಮ ದೇಶದ ಚರಿತ್ರೆ, ಸಾಂಸ್ಕೃತಿಕ ಸಂಪದಗಳನ್ನು ಮುಂದಿನ ಪೀಳಿಗೆಗೆ ಮುಟ್ಟಿಸುವುದು.

8) ಕ್ರಮಬದ್ಧವಾದ ಶಿಕ್ಷಣ, ನೈತಿಕ ಆದರ್ಶವಾದಗಳಿಂದ ಯುವಕರ ಆತ್ಮವಿಶ್ವಾಸವನ್ನು ಬಲಪಡಿಸುವುದು.

9) ಶ್ರೇಯಸ್ಕರವಾದ ವೈವಾಹಿಕ ಕಾರ್ಯಕ್ರಮಗಳಿಂದ ವಧುವರರು ಗೌರಾವಾಭಿಮಾನಿಗಳಿಂದ ಉನ್ನತ ದಾಂಪತ್ಯ ಜೀವನವನ್ನು ಹೊಂದುವಂತೆ ಮಾಡುವುದು.

10) ಮುಂದಾಗಿ ಕೀರ್ತಿ ಸಾಧನೆಗಳಿಗಾಗಿ ಕಷ್ಟಪಡುತ್ತಿರುವ ವ್ಯಕ್ತಿ ಮತ್ತು ಸಂಘಟನೆಗಳಿಗೆ ಸಹಕಾರ ಕೊಡುವುದು.

11) ಇವೆಲ್ಲವೂ ಅಲ್ಲದೇ, ಮೇಲ್ಕಂಡ ಗುರಿ ಸಾಧಿಸುವಲ್ಲಿ ಯಾವುದೇ ಲಾಭಾಪೇಕ್ಷೆಗೆ ಅವಕಾಶವಿರದಂತೆ ನೋಡುವುದು.

## ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್ ವಿರಾಳದ ವಿವರಗಳು.....

1) ಈ ಪಥಕ ವಿರಾಳಕ್ಕಾಗಿ ಕನಿಷ್ಠ ರೂ. 1000/-

2) ರೂ. 1000/- ಗಿಂತ ಕಡಿಮೆ ವಿರಾಳ ಸ್ವಾಮಿಯವರ ಹುಂಡಿಗೆ, ದಾತರಿಗೆ ಯಾವುದೇ ಸಮಾಚಾರವಿಲ್ಲದೆ ಜಮಾ ಮಾಡಲಾಗುತ್ತದೆ. ಎಲ್ಲಾ ವಿರಾಳವು ಒಂದೇ ಜಾತೀಯ ಬ್ಯಾಂಕ್‌ನಲ್ಲಿ ಡಿಪಾಜಿಟ್ ಮಾಡಬೇಕು. ಅದರ ಮೇಲೆ ಬರುವ ಬಡ್ಡಿಯನ್ನು ಈ ಪಥಕಕ್ಕಾಗಿ ಬಳಸಲಾಗುತ್ತದೆ. "ದಿ ಎಗ್ಸಿಕ್ಯೂಟಿವ್ ಆಫೀಸರ್, ಶ್ರೀ ವೇಂಕಟೇಶ್ವರ ಸರ್ವಶ್ರೇಯಸ್ಸು ಟ್ರಸ್ಟ್ ತಿ.ತಿ.ದೇ. ದೇವಸ್ಥಾನ, ತಿರುಪತಿ, ಎಂಬ ಹೆಸರಿನಿಂದ ಯಾವು ದಾದರೂ ಬ್ಯಾಂಕ್‌ನಲ್ಲಿ ಚೆಕ್/ಡಿಮಾಂಡ್ ಡ್ರಾಫ್ಟ್ ಮುಖಾಂತರ ವಿರಾಳವನ್ನು 'ಚೀಫ್ ಅಕೌಂಟ್ಸ್ ಆಫೀಸರ್,ತಿ.ತಿ.ದೇ., ತಿರುಪತಿ - 517501 ಇವರಿಗೆ ಕಳುಹಿಸಬೇಕು.

ಇತರ ವಿವರಗಳಿಗೆ 0877 - 2264258



# ಪರಿಪೂರ್ಣ ತತ್ತ್ವಜ್ಞಾನಿ ಯತಿರಾಜ ರಾಮಾನುಜಾಚಾರ್ಯರು

ಶ್ರೀಮತಿ. – ಕೆ.ವಿ. ಪದ್ಮಾವತಿ

ವಿವಿಧತೆಯಲ್ಲಿ ಏಕತೆ ಸಾರಿದ ಭವದ್ರಾಮಾನುಜರ ಅವತಾರದ ಸಹಸ್ರಮಾನದ ಆಚರಣೆಯ ನಿಮಿತ್ತ ಅವರ ದಾರ್ಶನಿಕ ಕ್ರಾಂತಿ, ಸಾಮಾಜಿಕ ಸುಧಾರಣೆಗಳ ಕುರಿತು ಕಿರು ಪರಿಚಯಾತ್ಮಕ ಬರಹ.

ಸೂರ್ಯ ಚಂದ್ರರು ಹೇಗೆ ಎಲ್ಲಾ ಕಾಲದಲ್ಲೂ ಪ್ರಸ್ತುತರೋ ಹಾಗೆ ವೇದಾಂತ ಅಂದರೆ ತತ್ವಜ್ಞಾನ ಪ್ರಸರಣ ಮಾಡಿದ ಆಚಾರ್ಯರು ನೀಡಿದ ಜ್ಞಾನ-ಭಕ್ತಿಗಳ ಪ್ರಕಾಶವೂ ಸರ್ವಕಾಲಕ್ಕೂ ಪ್ರಸ್ತುತ ಸಾವಿರ ವರ್ಷ ಕಳೆದರೂ ಅಚ್ಚಳಿಯದ ಪ್ರಭಾವವನ್ನು ಉಳಿಸಿ ಹೋಗಿರುವ ಮಹಾನುಭಾವರು ರಾಮಾನುಜಾಚಾರ್ಯರು. ಭರತ ಖಂಡವು ಬಹಳ ಸಂದಿಗ್ಧ ಕಾಲದಲ್ಲಿದ್ದಾಗ ನವಗ್ರಂಥ ರಚನೆಯ ಮೂಲಕ ವಿಶಿಷ್ಟಾದ್ವೈತವೆಂಬ ಆಧ್ಯಾತ್ಮಿಕ ಸಿದ್ಧಾಂತವನ್ನು ಪಸರಿಸಿ, ಭಾರತದ ತತ್ವಶಾಸ್ತ್ರ ಕ್ಷಿತಿಜದ ಧ್ರುವತಾರಾ ಸದೃಶ ಆಚಾರ್ಯ ತ್ರಯರಲ್ಲಿ ಮಧ್ಯದವರು ಸಂತ ರಾಮಾನುಜರು. ಮೋಕ್ಷ ಪ್ರಾಪ್ತಿಯ ಅವಕಾಶವನ್ನು ಸರ್ವರಿಗೂ ಸಮಾನವೆಂದು ಸಾರಿದ ಸಾಮಾಜಿಕ ಕ್ರಾಂತಿ ತೇಜ.

ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಷ್ಠಾಪಿಸಲು ಆದಿಶೇಷ ಅವತಾರಿಗಳಾಗಿ ತ್ರೇತಾಯುಗದಲ್ಲಿ ಶ್ರೀರಾಮನ ತಮ್ಮ ಲಕ್ಷ್ಮಣನಾಗಿ, ದ್ವಾಪರದಲ್ಲಿ ಶ್ರೀಕೃಷ್ಣನ ಅಣ್ಣ ಬಲರಾಮನಾಗಿ ಕಲಿಯುಗದಲ್ಲಿ ತಮಿಳುನಾಡಿನ ಶ್ರೀ ಪೆರಂಬದೂರಿನಲ್ಲಿ ಅಸೂರಿ ಕೇಶವ ಪೆರುಮಾಳ್ ಮತ್ತು ಭೂದೇವಿ ದಂಪತಿಯರಲ್ಲಿ ರಾಮಾನುಜರು ಜನಿಸಿದರು. ಮಾಧವ ಪ್ರಕಾಶರೇ ರಾಮಾನುಜರ ಶಿಷ್ಯತ್ತ್ವವನ್ನು ಸ್ವೀಕರಿಸುವಂತಾದುದು ವೈಶಿಷ್ಟ್ಯ.

ಮೊದಲಿನಿಂದಲೂ ವೈಷ್ಣವ ಧರ್ಮದ ಪ್ರಭಾವ ಇವರ ಮೇಲಿತ್ತು. ಭಕ್ತಿಮಾರ್ಗ ಇವರನ್ನು ಆಳವಾಗಿ ಆಕರ್ಷಿಸಿತ್ತು. ಶ್ರೀರಂಗದಿಂದ ಮಧುರೈಗೆ ಬೇಸರವಿಲ್ಲದೆ 18 ಬಾರಿ ಹೋಗಿ ಗೋಷ್ಠಿಪೂರ್ಣರನ್ನು ಒಲಿಸಿಕೊಂಡು ಅವರಿಂದ ಬಹಳ ಶ್ರಮಪಟ್ಟು, ಕಲಿತ ಗೋಪ್ಯವಾದಿ "ಆಷ್ಟಾಕ್ಷರಿ ಮಂತ್ರದ", ರಹಸ್ಯಾರ್ಥವನ್ನು ಸಕಲ ಚೇತನರ ಉದ್ಧಾರ ಮಾಡುವ ಉದ್ದೇಶದಿಂದ ತಿರುಕೋಟ್ಟಿಮಾರಿನ ನರಸಿಂಹ ದೇವಾಲಯದ ಗೋಪುರದ ಮೇಲಿಂದ ಮಂತ್ರವನ್ನು ಘಂಟಾ ಘೋಷವಾಗಿ ಸಾರಿದರು.

ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಮಾಧವ ಪ್ರಕಾಶರ ಗೋಷ್ಠಿಯಲ್ಲಿ, ಮಹಾ ಪೂರ್ಣರು ಪಂಚ ಸಂಸ್ಕಾರ ಮಾಡಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರವರ್ತಕರಾಗಿ ದೀಕ್ಷೆಯನ್ನಿತ್ತರು.

ಮೇಲುಕೋಟೆಗೆ ಬಂದು ಚೆಲುವನಾರಾಯಣನನ್ನು ಪ್ರತಿಷ್ಠಾಪಿಸಿ, ಉತ್ಸವ ಮೂರ್ತಿಯಾಗಿ "ರಾಮಪ್ರಿಯ" ನನ್ನೂ ತಂದು ವೈರಮುಡಿ ಉತ್ಸವವನ್ನು ಪ್ರತಿವರ್ಷವೂ ನೆರವೇರಿಸಿದರು. ದ್ವಾರ ಸಮುದ್ರದ ಹೊಯ್ಸಳ ರಾಜನಾದ ವಿಠಲ ದೇವರಾಯ (ಬಿಟ್ಟಿದೇವನ) ಮಗಳ ಭೂತ ಚೇಷ್ಟೆಯನ್ನು ನಿವಾರಿಸಿ ಅವನಿಗೆ ವಿಷ್ಣುವರ್ಧನ ಎಂಬ ಶ್ರೀ ವೈಷ್ಣವ ದೀಕ್ಷೆಯನ್ನಿತ್ತು ಅವನಿಂದ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದರು.

ಭಗವಂತನ ಕೃಪೆಯ ತಂಪನ್ನು ಸಮನಾಗಿ ಹಂಚಿದ ಸಂತ - ರಾಮಾನುಜಾಚಾರ್ಯರು ಶೇಷಾವತಾರಿಗಳಾಗಿ ಧರ್ಮೋದ್ಧಾರಕ್ಕಾಗಿ ಇಳೆಯಲ್ಲಿ ಅವತರಿಸಿದ ಆಚಾರ್ಯರದು ಸಂಘರ್ಷಮಯ ಜೀವನ, ಅವರ ಭಕ್ತಿಮಾರ್ಗ ಇಡೀ ಭಾರತದಲ್ಲಿ ಹೆಚ್ಚಿನ ಪ್ರಭಾವ ಬೀರಿ ಸನಾತನ ಧರ್ಮವನ್ನು ಕಾಪಾಡಿದ್ದು ಅವಿಸ್ಮರಣೀಯ.

ಇಂದಿದ್ದರೆ ಅದೇ ಹೆಚ್ಚು ನಾಳೆ ಏನೋ ತಿಳಿಯದು ಎಂಬಂಥ ತಾತ್ಕಾಲಿಕ ಪ್ರಜ್ಞೆಯಲ್ಲಿ ಜೀವಿಸುತ್ತಿರುವ ಜನ ಸಹಸ್ರಮಾನೋತ್ಸವವನ್ನು ಆಚರಿಸುವುದೇ? ಆಶ್ಚರ್ಯವೆನಿಸಬಹುದು. ಆದರೂ ಸತ್ಯ. ಏಕೆಂದರೆ ಸಾವಿರ ವರ್ಷ ಕಳೆದರೂ ಅಚ್ಚಳಿಯದ ಪ್ರಭಾವವನ್ನು ಉಳಿಸಿ ಹೋಗಿರುವ ಮಹಾನುಭಾವರು ರಾಮಾನುಜಾಚಾರ್ಯರು ಪೂರ್ಣಯುಸ್ಸನ್ನು 120 ವರ್ಷ ಈ ಭೂಮಿಯ ಮೇಲೆ ಕಳೆದದ್ದು ಅವರ ಭಕ್ತರ, ಶಿಷ್ಯರ, ಸಾಮಾನ್ಯ ಜನರ,ಅವರ ಕೃಪೆಗೆ ಪಾತ್ರರಾದ ದೀನ ದಲಿತರ ಭಾಗ್ಯವೇ ಸರಿ. ಲಕ್ಷ್ಮಣಮುನಿ, ಎಂಬೆರು ಮಾನಾರ್, ಶ್ರೀ ಭಾಷ್ಯಕಾರರು ತಿರುಪ್ಪಾವೈ ಜೀಯರ್, ರಾಜಹಂಸ, ಒಡೆಯವರ್ ಮುಂತಾದ ಹದಿನೇಳು ಸಾರ್ಥಕವಾದ ನಾಮ ಧೇಯಗಳಿಂದ ಭೂಷಿತರಾದ ರಾಮಾನುಜಾಚಾರ್ಯರು ನಮ್ಮ ಸಮಾಜಕ್ಕೆ ನೀಡಿದ ಕೊಡುಗೆ ಎಂದರೆ ಭಕ್ತಿಯ ನೆಲೆಯಲ್ಲಿ ಸಾಮಾಜಿಕ ಏರುಪೇರುಗಳನ್ನು ಸಮಗೊಳಿಸಿ



ವರ್ಣ ಜಾತಿ ವರ್ಗಗಳ ಅನ್ಯೋನ್ಯತೆಯನ್ನು ಬೆಳೆಸಿದ್ದು. ಅವರ ಶ್ರೀ ಭಾಷ್ಯ ಅಂದರೆ ಬ್ರಹ್ಮ ಸೂತ್ರಗಳಿಗೆ ಬರೆದಿರುವ ವ್ಯಾಖ್ಯಾನದ ಮಂಗಳ ಶ್ಲೋಕವೇ ಅವರು ಭಕ್ತಿಗೆ ನೀಡಿದ ಪಾರಮ್ಯತೆಯನ್ನು ಎತ್ತಿ ತೋರುತ್ತದೆ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳೆಂಬ ಲೀಲಾವಿನೋದದಲ್ಲಿ ನೆಲೆಸಿರುವ ಸಕಲ ಲೋಕ ನಾಯಕನೂ ಪರಬ್ರಹ್ಮನೂ ಆದ ಶ್ರೀನಿವಾಸನಲ್ಲಿ ನನ್ನ ಬುದ್ಧಿಯೆಲ್ಲವೂ ಭಕ್ತಿಯಾಗಿ ಮಾರ್ಪಡಲಿ, ಎಂದು ಹಾಡಿದ್ದಾರೆ. ಆಚಾರ್ಯರು.

ಭಗವದ್ರಾಮಾನುಜರು ಆಧ್ಯಾತ್ಮಕ್ಷೇತ್ರದ ದಿಗ್ಗಜರು. ಸ್ವತಃ ಪರಮಾತ್ಮನನ್ನು ಕಂಡು ಆ ದಿವ್ಯವೈಭವವನ್ನು ಅನುಭವಿಸಿ ಪರವಶರಾಗಿ ಹಾಡಿದವರು. ರಾಜಾಶ್ರಯದಲ್ಲಿದ್ದ ಅಂದಿನ ಧರ್ಮ ಮತ್ತು ಸಮಾಜ ವ್ಯವಸ್ಥೆಯನ್ನು ದೇವಸ್ಥಾನದ ತೆಕ್ಕೆಗೆಳೆದು ಅದನ್ನೆ ಸಾಮಾಜಿಕ ಕೇಂದ್ರವಾಗಿ ಪರಿವರ್ತಿಸಿ ಅವರ್ಣಿಯರಿಗೂ ಸಮಾಜದ ಮುಖ್ಯ ವಾಹಿನಿಯಲ್ಲಿ ಸ್ಥಾನ ಕಲ್ಪಿಸಿದರು.

ರಾಮಾನುಜರು ವಿಶಿಷ್ಟಾದ್ವೈತ ಮತ ಪ್ರಚಾರಕ್ಕಾಗಿ ಭಾರತದಲ್ಲೆಲ್ಲ ಸಂಚಾರ ಮಾಡಿದರು. ತೊಂಡನೂರು ನರಸಿಂಹ ದೇವಾಲಯದಲ್ಲಿ ರಾಮಾನುಜರನ್ನು ವಾದ ಮಾಡಲು ಕರೆದಾಗ, ಆದಿಶೇಷಾಂಶರಾದ ಆಚಾರ್ಯರು ದೇವಾಲಯದ ಹಿಂಬದಿಯಲ್ಲಿ ಒಂದು ಸಾವಿರ ರೂಪದಿಂದ ಅವರಿಗೆ ಉತ್ತರ ಕೊಟ್ಟು ಸಂಪೂರ್ಣವಾಗಿ ಜಯಿಸಿದರು. ಅದರ ನೆನಪಿಗಾಗಿ ಈಗಲೂ ತೊಂಡನೂರು ನರಸಿಂಹ ದೇವಾಲಯದ ಗೋಡೆಯ ಮೇಲೆ ರಾಮಾನುಜರು ಸಹಸ್ರ ಫಣಿಯುತರಾಗಿ ಗೋಚರಿಸುವುದನ್ನು ಕಾಣಬಹುದು.

ರಾಮಾನುಜರು ಬೋಧಿಸಿದ ಧರ್ಮಕ್ಕೆ ವಿಶಿಷ್ಟಾದ್ವೈತವೆಂದು ಹೆಸರು. ಶ್ರೀ ಶಂಕರಾಚಾರ್ಯರು ಬೋಧಿಸಿದ್ದು ಅದ್ವೈತ. ಅದ್ವೈತದಲ್ಲಿ ಯಾವ ಗುಣಗಳು ಇಲ್ಲದ ನಿರ್ಗುಣ ಬ್ರಹ್ಮದ ತತ್ತ್ವವನ್ನು ಹೇಳಲಾಗಿದೆ. ಆದರೆ ವಿಶಿಷ್ಟಾದ್ವೈತದಲ್ಲಿ ಸಗುಣೇಶ್ವರ ಉಪಾಸನೆಯನ್ನು ಹೇಳಿದೆ, ಎಂದರೆ ದೇವರಿಗೆ ಅನಂತ ಕಲ್ಯಾಣ ಗುಣಗಳಿವೆ; ದೇವರಿಗಿರುವ ಕಲ್ಯಾಣ ಗುಣಗಳು (ಒಳ್ಳೆಯ ಗುಣಗಳು) ಅನೇಕವಾದರೂ ಅವುಗಳಲ್ಲಿ ಮುಖ್ಯವಾದುವು ಸತ್ಯ, ಸೌಶೀಲ್ಯ ಮತ್ತು ಸೌಂದರ್ಯ. ಜೀವ ಮತ್ತು ಜಗತ್ತು ಗಳಿಂದ ವಿಶಿಷ್ಟನಾದ ಬ್ರಹ್ಮನ ಅದ್ವೈತವನ್ನು ಬೋಧಿಸಿದ ಧರ್ಮ ವಿಶಿಷ್ಟಾದ್ವೈತ. ವೈಷ್ಣವ ಸಂಪ್ರದಾಯವೂ, ವಿಷ್ಣು ದೇವಾಲಯಗಳೂ ಬಹಳ ಹಿಂದಿನಿಂದ ಇದ್ದರೂ ವಿಶಿಷ್ಟಾದ್ವೈತವನ್ನು ವಿಶೇಷವಾಗಿ ಪ್ರಚಾರ ಮಾಡಿದವರು ರಾಮಾನುಜಾಚಾರ್ಯರು.

ರಾಮಾನುಜಾಚಾರ್ಯರು ಜಾತಿ ಭೇದವಿಲ್ಲದೆ ಎಲ್ಲರಿಗೂ ಬೋಧಿಸಿದರು. ಎಲ್ಲರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು. ಹಿಂದುಳಿದವರನ್ನು ಬಹಳ ಮಮತೆಯಿಂದ, ಪ್ರೇಮದಿಂದ ಕಂಡು ಅವರಿಗೆ ಭಕ್ತಿಮಾರ್ಗ ತೋರಿಸಿದರು.

ಬಿಗಿಯಾಗಿದ್ದ ಅಂದಿನ ಸಾಮಾಜಿಕ ಕಟ್ಟಳೆಗಳನ್ನು ಮೀರಿ ಸಮಾನತೆಯನ್ನು ತಂದ ರಾಮಾನುಜರ ಬೌದ್ಧಿಕ ಸಾಹಸ

ಅಸಾಮಾನ್ಯವಾದುದು. ಶ್ರೀ ವೈಷ್ಣವ ದೇವಾಲಯಗಳನ್ನು ನೋಡಿದಾಗ, ಈ ಸರ್ವಸಮಾನತೆಯು ತತ್ವ, ರಾಮಾನುಜರ ಸುಧಾರಣೆಗಳ ಮಹತ್ವ ತಿಳಿಯುತ್ತದೆ. ಭಕ್ತರೇ ಭಗವಂತನಿಗೆ ಅತಿಪ್ರಿಯರೆಂಬುದನ್ನು ಆಳ್ವಾರರಿಗೆ ಇರುವ ಸನ್ನಿಧಿಗಳು ತಿಳಿಸುತ್ತದೆ.

ಮೇಲುಕೋಟೆಯ ಚೆಲುವನಾರಾಯಣನ ಪದತಲದಲ್ಲಿ ಇರುವ ಬೀಬಿನಾಚ್ಚಿಯಾರ್‌ಗೆ ನಿತ್ಯ ನೆರವೇರಿಸುವ ಪೂಜಾ ಕಾರ್ಯಕ್ರಮ ರಾಮಾನುಜ ಮತದ ಉದಾರತೆಯನ್ನು ಭಕ್ತಿಯೆಂಬುದು ಮುಕ್ತಿಗೆ ಏಕೈಕ ಅರ್ಹತೆಯಾಗಿದೆ ಎಂದು ಘೋಷಿಸುತ್ತದೆ.

ಜ್ಞಾನ-ಭಕ್ತಿ ವೈರಾಗ್ಯಗಳ ಸಾಮರಸ್ಯವನ್ನು ಸ್ಥಾಪಿಸಿ ವ್ಯಕ್ತಿ ಶೀಲದೊಂದಿಗೆ ವಿಶ್ವಕಲ್ಪನೆಯನ್ನು ಬೋಧಿಸಿದ ದಿವ್ಯಾತ್ಮ, ಬುದ್ಧಿ ಹೃದಯ ಆದರ್ಶ ಯಥಾರ್ಥ ಇಹ - ಪರ ಇಲ್ಲದರ ಮಧುರ ಮಿಲನವನ್ನು ಸಾಧಿಸಿ ಇಂದ್ರಿಯ ಹಾಗೂ ಆತ್ಮಕಲ್ಯಾಣಗಳಿಗೆ ನೇರವಾಗಿ, ಎಲ್ಲರ ಅನುಭವಕ್ಕೂ ನಿಲುಕುವಂತಹ ಸಿದ್ಧಾಂತವನ್ನು ಸ್ಥಾಪಿಸಿದ ನೇತಾರ.

ಶ್ರೀ ಲಕ್ಷ್ಮೀನಾರಾಯಣನೇ ಪರತತ್ತ್ವ, ಚೇತನ, ಅಚೇತನಗಳೆಲ್ಲವೂ ಅವನಿಗೆ ಅಧೀನವಾದುವು ಮಾನವನು ತನ್ನ ಆತ್ಮೋನ್ನತಿ ಮತ್ತು ಶಾಶ್ವತ ಸುಖವಾದ ಮೋಕ್ಷ ಇವೆರಡನ್ನು ಪಡೆಯಲು ಶ್ರೀ ಮನ್ನಾರಾಯಣನಲ್ಲಿ ದೃಢವಾದ ವಿಶ್ವಾಸಪೂರ್ವಕ ಶರಣಾಗತಿಯಲ್ಲದೆ ಬೇರೆ ಗತಿ ಇಲ್ಲ - ಇದು ರಾಮಾನುಜರ ಉಪದೇಶ.

ತಮ್ಮ ನೂತನ ಶರೀರ - ಶರೀರ ಸಂಬಂಧ ಸಿದ್ಧಾಂತದ ಮೂಲಕ ಭೇದ - ಅಭೇದ ಶೃತಿವಾಕ್ಯಗಳಲ್ಲಿ ಸಮನ್ವಯ, ಪಾಂಚರಾತ್ರ ಆಗಮದ ಪ್ರಮಾಣ ಸ್ಥಾಪನೆ ದೇವಾಲಯಗಳ ನಿರ್ಮಾಣ ಆಗಮೋಕ್ತ ಪೂಜಾ ವ್ಯವಸ್ಥೆ ಪ್ರಪತ್ತಿಯ ಮೂಲಕ ಎಲ್ಲರಿಗೂ ಮೋಕ್ಷ ಇವು ರಾಮಾನುಜರು ಸಾಧಿಸಿದ ಐದು ಮಹತ್ಕಾರ್ಯಗಳು.

ಹಿಂದೆ ನಮ್ಮಲ್ಲಿ ಹುಟ್ಟಿದ ಸಾಂಖ್ಯವೇ ಮೊದಲಾದ ದರ್ಶನಗಳು ಇಂದಿನ ವೈಜ್ಞಾನಿಕ ಬೌದ್ಧಿಕ ಅನ್ವೇಷಣೆಗಳಾಗಿ, ಬೌದ್ಧಿಕ ಸಿದ್ಧಿಗಳಾಗಿ ಅಸ್ತಿತ್ವವನ್ನು ಹೊಂದಿದ್ದವು ಅವುಗಳು ಧಾರ್ಮಿಕ ಮತಗಳಾಗಲಿಲ್ಲ. ಪಂಥಗಳೂ ಆಗಲಿಲ್ಲ. ಆದರೆ ತ್ರಿಮತಗಳು ಧಾರ್ಮಿಕ ಪಂಥಗಳಿಗೂ ದಾರಿ ಮಾಡಿಕೊಟ್ಟು ಅನುಯಾಯಿಗಳನ್ನು ಹೊಂದಿ ಆಚಾರ ವಿಚಾರಗಳ ಎರಡೂ ಘಟ್ಟದಲ್ಲಿಯೂ ಅಸ್ತಿತ್ವನ್ನು ಪ್ರಚಾರವನ್ನು ಪಡೆದವು. ರಾಮಾನುಜ ಮತವು ಶ್ರೀವೈಷ್ಣವ ಮತವಾಗಿ ಪ್ರಖ್ಯಾತವಾಗಿ ಎಲ್ಲ ವರ್ಗಗಳನ್ನು ಆಕರ್ಷಿಸಿ ಏಕಸೂತ್ರದಲ್ಲಿ ಬಂಧಿಸುವುದರಲ್ಲಿ ಯಶಸ್ವಿಯಾಯಿತು. ಅದರ ಸೈದ್ಧಾಂತಿಕ ಉದಾರತೆಯಿಂದ



ಒಂದು ಕ್ರಾಂತಿಕಾರಕ ವಾತಾವರಣವನ್ನು ಅದು ಉಂಟು ಮಾಡಿತು. ಅಂತೆಯೇ ಅವರು ತಂದ ಸುಧಾರಣಾ ಕ್ರಮಗಳಿಗೆ ಇಟ್ಟ ಸಮಾನತೆಯ ಹೆಜ್ಜೆಗಳಿಗೆ, ಕೊಟ್ಟ ಪಾರಮಾರ್ಥಿಕ ಚಿಂತನೆಗಳಿಗೆ ಮುರಿದ ಭೌತಿಕ, ಸಾಮಾಜಿಕ ಶೃಂಖಲೆಗಳಿಗೆ ಸಿಗಬೇಕಾದ ಗಮನವು ಲಭ್ಯವಾಗಿಲ್ಲ. ಭಾರತೀಯ ಚಿಂತನಕ್ಕೆ ಹೊಸ ಕ್ರಾಂತಿಕಾರೀ ಆಯಾಮವನ್ನು ಕೊಟ್ಟ ರಾಮಾನುಜದರ್ಶನ, "ಇಹ"ವನ್ನು ಬದಲಾಯಿಸುತ್ತ, ಪರದ ದರ್ಶನವನ್ನು ಕೊಟ್ಟಿತು ಎಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕು.

ಮುಸಲ್ಮಾನ ಅರಸನ ಬಳಿ ಹಿಂದೂ ದೇವರ ವಿಗ್ರಹ! ಅದನ್ನು ಬಿಟ್ಟಿರಲಾರೆ ಎಂದು ಅರಸು ಕುವರಿ, ಕನಸಿನಲ್ಲಿ ದೇವರು ತಿಳಿಸಿದಂತೆ ಓರ್ವ ಧರ್ಮಗುರು ವಿಗ್ರಹವನ್ನು ಪಡೆಯುವುದು; ಅದನ್ನೇ ಹಿಂಬಾಲಿಸಿಕೊಂಡು ಬಂದ ಮುಸಲ್ಮಾನ ರಾಜಪುತ್ರಿ ಅವರ ಸೇವೆಯಲ್ಲೇ ಕಣ್ಮರೆಯಾಗುವುದು. ಹಿಂದೂಗಳ ಯಾತ್ರಾ ಸ್ಥಳದಲ್ಲಿ ಮುಸಲ್ಮಾನ ಯುವತಿಯ ಮೂರ್ತಿ! ಎಂಥ ಸೋಜಿಗದ ಕಥೆ!

ಮೇಲುಕೋಟೆ, ಕರ್ನಾಟಕ ರಾಜ್ಯದ ಪ್ರಸಿದ್ಧ ಯಾತ್ರಾ ಸ್ಥಳ, ಅಲ್ಲಿನ ಚೆಲುವನಾರಾಯಣ ಸ್ವಾಮಿಯನ್ನು ಪ್ರತಿಷ್ಠೆ ಮಾಡಿದವರು ಧರ್ಮಗುರು "ರಾಮಾನುಜಾಚಾರ್ಯರು". ವಿಗ್ರಹವನ್ನು ರಾಮಾನುಜಾಚಾರ್ಯರು ದೆಹಲಿಯ ಸುಲ್ತಾನನಿಂದ ಪಡೆದರೆಂದು ನಂಬಿಕೆಯಿದೆ. ಕನಸಿನಲ್ಲಿ ನಾರಾಯಣ ದೇವರು ಹೇಳಿದಂತೆ ತಮಗೆ ಬೇಕಾದ ರಾಮಪ್ರಿಯ ವಿಗ್ರಹವನ್ನು ರಾಮಾನುಜರು ಅರಿಸಿ ಸುಲ್ತಾನದಿಂದ ಪಡೆದರು; ಸುಲ್ತಾನನ ಮಗಳು ಬೀಬಿ ನಾಚ್ಚಿಯಾರ್ ಆ ವಿಗ್ರಹವನ್ನು ಪ್ರೀತಿಸುತ್ತಿದ್ದಳು. ಅದನ್ನು ಬಿಟ್ಟಿರಲಾರದೆ ಮೇಲುಕೋಟೆಗೆ ಬಂದಳು; ಅಲ್ಲಿಯೇ ದೇವನಲ್ಲಿ ಐಕ್ಯಳಾದಳು - ಎಂದು ಹೇಳುತ್ತಾರೆ. ಬೀಬೀ



ನಾಚ್ಚಿಯಾರ್ ಮೂರ್ತಿಯನ್ನು ಮೇಲುಕೋಟೆಯಲ್ಲಿ ಈಗಲೂ ಕಾಣಬಹುದು.

**ರಾಮಾನುಜ ನಮನ**

♦ ಭಗವದ್ ಭಕ್ತಿಯ ನೆಲೆಯಲ್ಲಿ ವರ್ಣ - ಜಾತಿ - ವರ್ಗಗಳ ಅನ್ಯೋನ್ಯತೆಯನ್ನು ಸಮಾಜದಲ್ಲಿ ಬೆಳೆಸಿದುದು. ಕೇವಲ ಸಂಸ್ಕೃತ ವೇದಗಳು ಮಾತ್ರವಲ್ಲದೆ ಜಾನಪದ ದ್ರಾವಿಡ ವೇದಗಳಿಗೂ ದೇವರ ಪೂಜೆಯಲ್ಲಿ ದೇವಾಲಯ ಗಳಲ್ಲಿ ಸ್ಥಾನ ಮಾನವನ್ನು ದೃಢಪಡಿಸಿದುದು.

♦ ಭಗವದ್ ಭಕ್ತಿಯಿರುವಂತಹ ಚಂಡಾಲಜಾತಿ ಯವರಿಗೆ ಮೇಲುಕೋಟೆ ಚೆಲುವನಾರಾಯಣನ ಸೇವೆ ಮಾಡಲು ಶಾಸ್ತ್ರ ವಿರೋಧವಿಲ್ಲದಂತೆ ವ್ಯವಸ್ಥೆ ಮಾಡಿದುದು.

♦ ಶ್ರೀ ರಂಗದಲ್ಲಿ ಆರೋಗ್ಯ ಶಾಲೆಯನ್ನು ಏರ್ಪಡಿಸಿ ಸಾರ್ವಜನಿಕರಿಗೆ ಉಚಿತ ಚಿಕಿತ್ಸೆ ಔಷಧಗಳಿಗೆ ವ್ಯವಸ್ಥೇ ಮಾಡಿದುದು. ನಾನಾ ರಾಜ್ಯದ ಜನಸಾಮಾನ್ಯರಿಗೆ ಭಕ್ತಿ ಪ್ರಪತ್ತಿ ವಿಚಾರಗಳನ್ನು ಪ್ರಚುರ ಪಡಿಸುವಂತೆ ಸಂಚಾರಿ ಗುರುಗಳನ್ನು ಏರ್ಪಡಿಸಿದುದು.

♦ ಜಾನಪದ ನಾನಾ ಜಾತಿಗಳಲ್ಲೂ ದಾಸಯ್ಯನೆಂಬು ವರಿಗೆ ದೀಕ್ಷೆ ಕೊಟ್ಟು ಆಯಾ ಜಾತಿಯವರನ್ನು ಜಾತಿ ಕೆಡಿಸದೇ ಸ್ವಧರ್ಮದಲ್ಲಿ ಪರಿಶುದ್ಧವಾಗಿರುವಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡಿದುದು.

♦ ತೊಣ್ಣೂರು ಮುಂತಾದ ಕಡೆ ದೊಡ್ಡ ಕೆರೆಗಳನ್ನು ಕಟ್ಟಿಸಿ ಕೃಷಿಕರಿಗೂ ಸ್ಥಾನಾನುಷ್ಠಾನಪರರಿಗೂ ತೀರ್ಥ ಶುದ್ಧಿಯ ಜೊತೆ ಧಾನ್ಯ ಸಮೃದ್ಧಿಯೂ ಆಗುವಂತೆ ಮಾಡಿ ದುದು.

♦ ತಿರುಪತಿಯ ಬಳಿ ಮಂಡಯಂ ಎಂಬ ಐದು ಅಗ್ರಹಾರಗಳನ್ನು ಏರ್ಪಡಿಸಿ ಕಾಡುಗಳನ್ನು ನಾಡನ್ನಾಗಿ ಮಾಡಿದುದು. ಇದನ್ನು ರಾಮಾನುಜರು ತಮ್ಮ ಪಾದಕಾಣಿಕೆ ಯಾಗಿ ಬಂದ ಹಣದಿಂದ ಭೂಮಿಯನ್ನು ಖರೀದಿಸಿ ಮಾಡಿ ದರು.

♦ ಬಿಳಿಗಿರಿರಂಗನಬೆಟ್ಟದ ಸೋಲಿಗರಿಗೆ ಅನುಗ್ರಹಿಸಿ ಅವರ ಮೂಲದೇವರಾದ ಕಂಕಣಲಕ್ಷ್ಮಿಗೆ ರಂಗನೊಡನೆ ಮದುವೆ ಮಾಡಿಸಿ ಉಚ್ಛ ನೀಚ ಕುಲಗಳಲ್ಲಿ ಭಗವದ್ ಭಕ್ತಿಯಿಂದ ಅನ್ಯೋನ್ಯತೆ ಏರ್ಪಡಿಸಿದುದು.

♦ ಅಷ್ಟಾಕ್ಷರವೆಂಬ ಮಂತ್ರಕ್ಕೆ ವೈದಿಕ ಅವೈದಿಕ ಭೇದವಿಲ್ಲದಂತೆ ಪ್ರಯೋಗವಿರುವುದನ್ನು ಆಗಮ ಕಲ್ಪಗಳಿಂದ ನಿರ್ಣಯಿಸಿ,ಅರ್ಹರಾದ ಎಲ್ಲರಿಗೂ ಮಂತ್ರೋಪದೇಶ ಮಾಡಿ, ಮಂತ್ರದ ವಿವರಣೆಯ ಮೂಲಕ ವೇದಂತಾರ್ಥಗಳನ್ನು ತಿಳಿ ಸಿದುದು.

♦ ತಮ್ಮ ಜೀವಿತಾವಧಿಯ ಮೂರನೆಯ ಒಂದು ಭಾಗ ಸಮಯವನ್ನು ಸುಮಾರು 36 ವರ್ಷಗಳನ್ನು ಕನ್ನಡನಾಡಿನ ಜನತೆಯ ಏಳಿಗೆಗಾಗಿ ಮೀಸಲಿರಿಸಿ ಸಂಚರಿಸಿದುದು. (ಕೋಣನಕಲ್ ಬೆಟ್ಟದ ಶಾಸನ)

♦ ಮೇಲುಕೋಟೆಯ ಚೆಲುವನಾರಾಯಣದ ಸೇವೆಗಾಗಿ 18 ಜಾತಿಯ ಜನರಿಗೂ ನಿವಾಸ ಶ್ರೇಣಿಗಳನ್ನು ಏರ್ಪಡಿಸಿ ಹಳೆಯ ಕೋಟೆಯ ಒಳಗೂ ಹೊರಗೂ 'ತಿರು ನಾರಾಯಣಪುರ' ನಗರವನ್ನು ಏರ್ಪಡಿಸಿದುದು.

♦ ದೆಹಲಿಯ ದಿಲು ಎಂಬ ಪ್ರದೇಶದಲ್ಲಿದ್ದ ರಾಮ ಪ್ರಿಯ ದೇವಮೂರ್ತಿಯನ್ನು ಯಾದಗಿರಿಗೆ ಹಿಂತಿರುಗಿಸಿ ಕರೆತಂದು ಧಿಲುವಿನ ಮ್ಲೇಚ್ಛರಾಜನ ಮಗಳ ಭಗವದ್ ಭಕ್ತಿಗೆ ಮೆಚ್ಚಿ ದೇವರ ಪಾದಗಳಲ್ಲಿ ಲಕ್ಷ್ಮೀ ರೂಪದಲ್ಲಿ ಅವಳ ವಿಗ್ರಹ ಸ್ಥಾಪಿಸಿದುದು ಮತ್ತು ಮ್ಲೇಚ್ಛರಿಗೂ ದೇವರ ಸೇವೆಗಳಿಗೆ ಅವಕಾಶ ಮಾಡಿ ದುದು.

♦ ಏಳೂ ನೂರು (700) ಸನ್ಯಾಸಿಗಳನ್ನು 12,000 ನಾನಾ ವರ್ಣ ಜಾತಿಗಳ ಏಕಾಂಗಿ ಸ್ವಯಂ ಸೇವಕರನ್ನು ಭಕ್ತಿ ಮಾರ್ಗದ ವಿಸ್ತರಣೆಗೆ ಜೊತೆಗಿಟ್ಟುಕೊಂಡು ಮೂರು ಸಲ ಭಾರತದಾದ್ಯಂತ ಸಂಚರಿಸಿದುದು.

♦ ಕನ್ನಡ ನಾಡಿನಲ್ಲಿ ರಾಮಾನುಜರ ಪ್ರಭಾವದಿಂದ ಸುಮಾರು ಇನ್ನೂರು (200) ವರ್ಷಗಳಲ್ಲಿ ಇಪ್ಪತ್ತಾರು ಸಾವಿರ (26,000) ದೇವಾಲಯಗಳೂ ಸಾರ್ವಜನಿಕರ ಭಕ್ತಿ ಸೇವೆಗೆ ರಾಜ - ಮಹಾರಾಜ ರಾಣಿ ಮಂತ್ರಿ ಸೇನಾಪತಿ ಧನಿಕ ವೈಶ್ಯರಿಂದಲೂ ಶೂದ್ರ ಭಕ್ತರಿಂದಲೂ ಸ್ಥಾಪಿತವಾಗಿರುವುದು ಗಮನಾರ್ಹ.




**ಮುಂದುವರಿಯುವುದು-**

19,ಸಂಖ್ಯೆಯ ಶಾಸನವು ರಾಜೇಂದ್ರ ಚೋಳನ 1 ಆಡಳಿತದ ಮೊದಲನೆಯ ವರ್ಷದ್ದಾಗಿದ್ದು ಇದೊಂದು ವಿಚಾರಣೆಯನ್ನೂ, ಫಲವಾದ ನ್ಯಾಯ ತೀರ್ಮಾನವನ್ನೂ, ವಿವರಿಸುವುದು. ತಿರುಮಂಡಿಯಂ ಸಭೆಯವರು 23 ಫೊನ್ (ಹೊನ್ನು)ಗಳನ್ನು ಸ್ವೀಕರಿಸಿ ತಿರುವೆಂಕಟಮುಡೈಯಾನನ ಸನ್ನಿಧಿಯಲ್ಲಿ ದಿನವೂ 23 ತುಪ್ಪದ ದೀಪವನ್ನು ಒಂದು ಕರ್ಪೂರ ಆರತಿಯನ್ನೂ ಬೆಳಗುವೆವೆಂದು ಶಿಲಾಶಾಸನದ ಒಪ್ಪಂದದಂತೆ ನಡೆದುಕೊಳ್ಳದೆ ಎರಡು ದೀಪ ಮಾತ್ರವೇ ಬೆಳಗುತ್ತಿರುವುದಾಗಿ ತಿಳಿದುಬಂದಾಗ ಕೊತ್ತಮಂಗಲ ಮುಡೈಯಾನನಾದ ಅಧಿಕಾರಿಯು (ರಾಜ್ಯಪಾಲ) ವಿಚಾರಣೆ ನಡೆಸಿ, ವೆಂಕಟೇಶ್ವರ ಸ್ವಾಮಿಯ ಭಂಡಾರವನ್ನು ನೋಡಿ ಕೊಳ್ಳುತ್ತಿದ್ದ ತಿರುಚಾನೂರು ಸಭೆಗೆ ಹಣ ಸಲ್ಲಿಸಬೇಕೆಂದೂ, ಆಲಯದಲ್ಲಿ ಹಚ್ಚ ಬೇಕಾದ ದೀಪಗಳಿಗೆ ತಕ್ಕ ತುಪ್ಪವನ್ನು ಬೆಟ್ಟಕ್ಕೆ ದಿನವೂ ತಿರುಚಾನೂರಿನಿಂದ ತೆಗೆದುಕೊಂಡು ಹೋಗಿ ಒಂದು ಕರ್ಪೂರ ದೀಪದೊಡನೆ ಒಟ್ಟು 24 ದೀಪಗಳನ್ನು ಬೆಳಗಬೇಕೆಂದೂ ತೀರ್ಪು ನೀಡಿದನು.

ತಿರುಮಲೆಯ ಆಲಯದ ವ್ಯವಹಾರಗಳನ್ನೆಲ್ಲ ತಿರುಚಾನೂರಿನ ಸಭೆ ಅಥವಾ ಸಮಿತಿ (ಪಂಚಾಯಿತಿ) ನೋಡಿಕೊಂಡು, ಆಲಯದ ಪರವಾಗಿ ಕಾಣಿಕೆ, ದಾನ, ಧರ್ಮ ದತ್ತಿಗಳನ್ನು ಸ್ವೀಕರಿಸಿ, ಅದಕ್ಕೆ ದಿನವೂ ಬೇಕಾಗುವ ವಸ್ತುಗಳನ್ನು ಸಾಹಿತ್ಯ ಸಾಂಬಾರ ಪದಾರ್ಥಗಳನ್ನು ನೀಡುತ್ತ ಇದ್ದಿತೆಂದೂ, ಇಲ್ಲಿಯೇ ಒಂದು ಉಗ್ರಾಣವಿದ್ದಿತೆಂದೂ, ಅದರ ಮೇಲು ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಿತೆಂದು ಇದರಿಂದಾಗಿ ತಿಳಿದು ಬರುತ್ತದೆ. ಹಾಗಾಗಿಯೇ ಪಲ್ಲವ ಚೋಳ ಆಡಳಿತ ಕಾಲದಲ್ಲಿ ಆಲಯಕ್ಕೆ ನೀಡಿರುವ ದಾನಗಳಲ್ಲಿ ಹಲವು ತಿರುಚಾನೂರಿನಲ್ಲಿನ ಶಾಸನಗಳಲ್ಲಿ ದಾಖಲೆಯಾಗಿರುವುದನ್ನು ಕಾಣುತ್ತೇವೆ. ತಿರುಚಾನೂರಿನಲ್ಲಿಯಾಗಲೀ ತಿರುಪತಿಯಲ್ಲಿಯಾಗಲೀ ಹನ್ನೆರಡನೆಯ ಶತಮಾನದವರೆಗೆ ಯಾವುದೇ ದೇವಾಲಯವಿದ್ದಂತೆ ತಿಳಿದು ಬರುವುದಿಲ್ಲ. ತಿರುಚಾನೂರಿನ ಪ್ರಾಧಾನ್ಯವೆಂದರೆ ಆಡಳಿತಗಾರರ ಪರ್ಯವೇಕ್ಷಣೆಯ ಪ್ರವಾಸಕಾಲದಲ್ಲಿ ಬೆಟ್ಟದ ತಡಿಯ ತಿರುಚಾನೂರು ತಂಗುದಾಣವಾಗಿ ಅನುಕೂಲಕರವಾಗಿದ್ದಿತು ಎಂಬುದೇ ಆಗಿದೆ. ಇಲ್ಲಿ ಆಡಳಿತದ ಅನುಕೂಲಕ್ಕಾಗಿ ಒಂದು ನ್ಯಾಯಾ ಸ್ಥಾನದಂತಹ ಸಭಾಭವನವನ್ನೂ ನಿರ್ಮಾಣ ಮಾಡಲಾಗಿದ್ದಿತು. ಈ ಶಾಸನದಲ್ಲಿ ತಿರುಮಂಡಿಯಂ ಗ್ರಾಮವೂ ತಿರುಚಾನೂರು ಗ್ರಾಮದಂತೆಯೇ ದೇವದಾನದ (ಶ್ರೀವೆಂಕಟೇಶ್ವರಸ್ವಾಮಿಗೆ ಸೇರಿದ) ಗ್ರಾಮವೆಂದು ಗುರುತಿಸಲಾಗಿದೆ. ಒಂದನೇ ಕುಲೋತ್ತುಂಗ ಚೋಳನ ಆಡಳಿತಕಾಲದ (ಕ್ರಿ.ಶ. 1070 ರಿಂದ ಕ್ರಿ.ಶ. 1120) 21 ನೇ ಸಂಖ್ಯೆ ಶಾಸನದಿಂದ ನಮಗೆ ತಿಳಿದು ಬರುವ ಅಂಶವೆಂದರೆ ತಿರುಚಾನೂರಿನಿಂದ ಪಶ್ಚಿಮಕ್ಕೆ ಅರೆಮೈಲು ದೂರದಲ್ಲಿರುವ ಯೋಗಿ ಮಲ್ಲಾವರವು ತಿರುಚಾನೂರಿನ ಒಂದು ಭಾಗವೇ ಆಗಿದ್ದಿತು ಹಾಗೂ ಇಲ್ಲಿ ಪೂಜೆಗೆ ಪಾತ್ರನಾದ ದೇವರ ಹೆಸರು ತಿಪ್ಪಲಾಧೀಶ್ವರ ಮುಡೈಯಾನ್ ಮಹಾದೇವನ್ (ಶಿವಲಿಂಗ) ಆಗಿದ್ದಿತು. ಈಗ ಮುಂಡ್ಲಪೂಡಿ ಎಂದು ಕರೆಯಲಾಗುತ್ತಿರುವ ಅಂದಿನ ಮುನ್ನೈಪೂಂಡಿ ಗ್ರಾಮವು ಈ ದೇವರಿಗೆ ದೇವದಾನವಾಗಿ ನೀಡಲಾಗಿದ್ದಿತು. ಈ ಮಹಾದೇವನನ್ನು ಈಗ ಪರಾಶರೇಶ್ವರ ಎಂದು ಕರೆಯುವರು. ಕ್ರಿ.ಶ. 1221 ರಲ್ಲಿನ ರಾಜ ರಾಜದೇವ ಚೋಳ 111 ನ ಆಡಳಿತದ ಐದನೆಯ ವರ್ಷದಲ್ಲಿ ಹೊರಬಿದ್ದ ಶಾಸನದಲ್ಲಿ (ನಂ - 34 ) ಈಗ ತಿರುಚಾನೂರಿನಲ್ಲಿ ಸುಂದರ ರಾಜ

ಸ್ವಾಮಿಯೆಂದು ತಿಳಿಯಲಾಗುತ್ತಿರುವ ಅಳಗಿಯ ಪೆರುಮಾಳ ದೇವರನ್ನು ಮೊದಲ ಬಾರಿಗೆ ಹೆಸರಿಸಿ, ಒಬ್ಬಾನೊಬ್ಬ ಪೊಕ್ಕಾರನ್ ಪಾಂಡಿಯದರೈಯನ್ ಎಂಬಾತನು ಒಂದು ಭೂಮಿಯನ್ನು ಹದಗೊಳಿಸಿ, ಬೇಸಾಯಕ್ಕೆ ತಕ್ಕ ಭೂಮಿಯನ್ನಾಗಿ ಮಾಡಿ, ಇದರ ಬೇಸಾಯದಿಂದ ಬೆಳೆದ ಬೆಳೆಯನ್ನು ಬಳಸಿ ಪಂಗುನಿ ಮಾಸದಲ್ಲಿ (ಮಾರ್ಚ್ - ಎಪ್ರಿಲ್) ಈ ದೇವರಿಗೆ ಉತ್ಸವ ನಡೆಸಲು ಒಪ್ಪಿದೆ ಆ ಊರಿನ ಕೈಕೋಲರಿಗೆ (ನೇಕಾರ ಜನರಿಗೆ ) ಒಪ್ಪಿಸಿದನು. ಈ ದೇವರಿಗೆ ಈ ಸ್ಥಳವು ಪ್ರಾಚೀನ ಕಾಣಿಕೆಯಾಗಿದ್ದಿತು ಎಂದು ತಿಳಿದು ಬರುವುದು.

36 ನೇ ಶಾಸನವು ತಿಳಿಸುವಂತೆ ತಿರುಚಾನೂರು ಸಭೈಯಾರರು ತಿಪ್ಪಲಾಧೀಶ್ವರ ಆಲಯದ ವ್ಯವಹಾರಗಳನ್ನೂ ನೋಡಿಕೊಳ್ಳುತ್ತಿದ್ದರು.

ರಾಜರಾಜ ಚೋಳ 111 ನೆಯ ಆಡಳಿತದ 19 ನೇ ವರ್ಷದಲ್ಲಿ (ಕ್ರಿ.ಶ. 1235) (ಕ್ರಮಸಂಖ್ಯೆ - 40) ತಿಳಿದು ಬರುವಂತೆ ಆ ಮುನ್ನ ಕೆಲಕಾಲದ ಹಿಂದೆ ಪೆರಿಯ ನಾಟ್ಟವರು - ನಾಡು ಅಥವಾ ಗ್ರಾಮಗಳ ಗುಂಪಿನ ಸಭೆಯ ಸದಸ್ಯರು ತಿರುಮಂಗೈ ಆಳ್ವಾರರ ವಿಗ್ರಹವನ್ನು ಶ್ರೀ ಗೋವಿಂದರಾಜ ಸ್ವಾಮಿ ಆಲಯದಲ್ಲಿ ಸ್ಥಾಪಿಸಿದ್ದು. ಈ ವಿಗ್ರಹಕ್ಕೆ ನಿತ್ಯ ಪೂಜೆಯ ಸಲುವಾಗಿ ಅಮೃತಪಡಿಯೂ,ಅಲಂಕಾರಕ್ಕಾಗಿ ಶಾತ್ತು ಪಡಿಯೂ, ಅಗತ್ಯವಿದ್ದುದರಿಂದ ಎಲ್ಲರೂ ಒಟ್ಟಿಗೆ ಆಲಯಕ್ಕೆ ಸಂಬಂಧಿಸಿದ ತಿರುವಿಳಂ ಕೋಯಿಲಿನಲ್ಲಿ ಸೇರಿ (ತಿರುಚಾನೂರಿನಲ್ಲಿನ ನವ ನಿರ್ಮಾಣ) ಕುಡುವೂರು ನಾಡಿನ ಕುಡುವೂರು ಗ್ರಾಮದ ಜನ ಕುಡುವೂರಾರ್ ನೀಡಿದ ಜಮೀನಿನ ದಾನವನ್ನು ಒಪ್ಪಿಕೊಂಡರು. ಹೀಗೆ ನಡೆದದ್ದರಿಂದ ತಿಳಿದುಬರುವ ಅಂಶವೆಂದರೆ ನಾಡಿನ ಒಳಗಿನ ಜಮೀನಿನ ದತ್ತತೆಯನ್ನು ನಾಡಿನ ಸಭೆಯು ಆ ಮೋದಿಸಬೇಕಾಗಿದ್ದಿತು. ಜಮೀನಿನಲ್ಲಿ ಬೆಳೆದದ್ದರಲ್ಲಿನ ಆಲಯ ಭಾಗವನ್ನು ಆಲಯದ ಶ್ರೀ ಭಂಡಾರದ ಉಸ್ತುವಾರಿಯ ಜನರು ಸಂಗ್ರಹಿಸಬೇಕಾಗಿದ್ದಿತು. ಈ ಹೊತ್ತಿಗೆ ಎಂದರೆ ಹದಿಮೂರನೆ ಶತಮಾನದ ಎರಡನೆಯ ಹಾಗದಲ್ಲಿ-ಕಾಲುಭಾಗದಲ್ಲಿ-ತಿರುಮಲೆಯ ವೆಂಕಟೇಶ್ವರಾಲಯದ ಸ್ಥಾನತ್ತಾರರೂ ಶ್ರೀ ಭಂಡಾರದವರೂ ತಿರುಚಾನೂರು ಸಭೆಯಾರ ಉಸ್ತುವಾರಿಯಿಂದ ಮುಕ್ತರಾಗಿ ತಮ್ಮ ವ್ಯವಹಾರಗಳನ್ನು ತಾವೇ ನೋಡಿಕೊಳ್ಳುವಂತಹ ಸ್ಥಿತಿಯನ್ನು ತಲುಪಿ, ಗೋವಿಂದರಾಜಸ್ವಾಮಿ ಆಲಯದ ಉಸ್ತುವಾರಿಗೆ ಪ್ರತ್ಯೇಕವಾದ ಸಿಬ್ಬಂದಿಯಾಗಲೀ ಸಭೆಯಾಗಲೀ ಇಲ್ಲವಾಗಿದ್ದುದರಿಂದ ಈ ಆಲಯಗಳ ವ್ಯವಹಾರವನ್ನೂ ಅವರೇ ನೋಡಿಕೊಳ್ಳುತ್ತಿದ್ದಂತೆ ತೋರುತ್ತದೆ. ಈ ದಾಖಲೆಯಲ್ಲಿಯಾಗಲೀ ಇದಕ್ಕೆ ಮುಂಚಿನ ಯಾವುದೇ ದಾಖಲೆಯಲ್ಲಿಯಾಗಲೀ ಗೋವಿಂದರಾಜ ಸ್ವಾಮಿಯ ಪ್ರತಿಷ್ಠಾಪನೆ ಎಂದು ನಡೆಯಿತೆಂದಾಗಲೀ, ಯಾರು ಯಾವಾಗ ಗೋವಿಂದರಾಜ ಸ್ವಾಮಿಗೆ ಆಲಯ ನಿರ್ಮಿಸಿದರೆಂಬುದಾಗಲೀ ಕಂಡು ಬರುವುದಿಲ್ಲ. ಸಾಮಾನ್ಯವಾಗಿ ನಂಬಿರುವಂತೆ ಕ್ರಿ.ಶ.1017 ರಿಂದ 1137 ರ ವರೆಗೆ ಜೀವಿಸಿದ್ದಂತಹ ಶ್ರೀರಾಮಾನುಜರಿಂದ 11 ನೇ ಶತಮಾನದಲ್ಲಿಯಾಗಲೀ ಅಥವಾ ಕ್ರಿ.ಶ.1120 ರಲ್ಲಿ ಕುಲೋತ್ತುಂಗ ಚೋಳನ ಮರಣಾನಂತರವಾಗಲೀ ಆಲಯದ ನಿರ್ಮಾಣವಾಗಿ ಗೋವಿಂದರಾಜ ಸ್ವಾಮಿಯು ಪ್ರತಿಷ್ಠೆಯಾಗಿರಬೇಕು. ಪ್ರಚಲಿತವಿರುವ ಐತಿಹ್ಯದಂತೆ ಒಬ್ಬ ಚೋಳ ರಾಜನು ಚಿದಂಬರದ ಬಳಿಯ ಸಮುದ್ರಕ್ಕೆ ಗೋವಿಂದರಾಜನನ್ನು ಎಸೆದ ಸಂದರ್ಭದಲ್ಲಿ ಶ್ರೀರಂಗದಿಂದ ಭಗವದ್ರಾಮಾನು ಜರು ಮೇಲುಕೋಟೆಗೆ ಬಂದು ಸೇರಿದರು. ಆತ ಚಿದಂಬರದ ಬಳಿಯ ಸಮುದ್ರದ ತಡಿಯಿಂದ ತಂದ ಗೋವಿಂದ ರಾಜ ಸ್ವಾಮಿಯ ಮೂರ್ತಿ ಸರಿಸುಮಾರು ಎರಡು ಅಡಿಗಳ ಚಿಕ್ಕದಾದ ಉತ್ಸವ ಮೂರ್ತಿ ಮಾತ್ರವೇ ಆಗಿದ್ದುದರಿಂದ ಅದನ್ನು ಶಯನ ಭಂಗಿಯಲ್ಲಿ ಆ ಅದನ್ನು ಶಯನ ಭಂಗಿಯಲ್ಲಿರಿಸಿ ಐದರಿಂದ ಆರು ಅಡಿ ಉದ್ದವಾದ ಮೂರ್ತಿಯನ್ನಾಗಿಸಲು ಗಾರೆಯನ್ನು ಬಳಸಲಾಯಿತು. ಜೊತೆಗೇ ಲಕ್ಷ್ಮೀ ಬ್ರಹ್ಮ ಮುಂತಾದ ದೇವತಾ ವಿಗ್ರಹಗಳನ್ನು ಬಿಡಸಲಾಯಿತು.

40, 41 ನೇಯ ಕ್ರಮಾಂಕದ ಶಾಸನಗಳು ತಿರುಚಾನೂರಿನ ತಿರುವಿಳಂಕೋಯಿಲ್ ಅನ್ನು ಕುರಿತು ಹೇಳುತ್ತವೆ. ಇದರ ನಿರ್ಮಾಣದ ಕಾಲದ ಬಗ್ಗೆಯಾಗಲೀ ಪ್ರತಿಷ್ಠೆಯಾದ ವಿಗ್ರಹದ ಬಗ್ಗೆಯಾಗಲೀ, ಪ್ರತಿಷ್ಠಾಪನೆ ಮಾಡಿದವರ ಹೆಸರಿನ ಬಗ್ಗೆಯಾಗಲೀ ಯಾವ ವಿವರಗಳೂ ದೊರೆಯುವುದಿಲ್ಲ. (ಜೊತೆಗೇ 43, 118, 119, 120,129, 137,144) ಪ್ರಾಯಶಃ ಇದು ಅಳಗಿಯ ಪೆರುಮಾಳರ ಪ್ರತಿಷ್ಠಾಪನೆಯನ್ನು ಕುರಿತು ಆಗಿರ ಬಹುದು (ಕ್ರಮಾಂಕ 34) ತ್ರುಟಿತವಾದ 42 ನೇ ಕ್ರಮಾಂಕದ ಶಾಸನವೊಂದು ತೆಲುಗು ಚೋಳ ರಾಜನಾದ ನೆಲ್ಲೂರಿನ ಮಧುರಾಂತಕ ಪೊತ್ತಪಿ ಚೋಳ ಅಲ್ಲುನ್ ತಿರುಕಾಳತ್ತಿ ದೇವನ ಆಡಳಿತದ ಐದನೆಯ ವರ್ಷದಲ್ಲಿ ಪ್ರಕಟವಾದದ್ದು-ಪ್ರಾಯಶಃ ಸೈನ್ಯಾಧಿಕಾರಿಯಾಗಿದ್ದು-ಒಬ್ಬಾನೊಬ್ಬ ನಾಯಕನು ವೆಂಕಟೇಶ್ವರಸ್ವಾಮಿಗೆ ಭೂಮಿಯನ್ನು ಕಾಣಿಕೆಯಾಗಿ ನೀಡಿದ ಬಗ್ಗೆ

ಇದು ತಿಳಿಸುವುದು. ಈ ರಾಜನು ಅಂದು ಕಂಚಿಯವರೆಗಿನ ರಾಜ್ಯವನ್ನು ಆಳುತ್ತಿದ್ದ ಈತನ ಆಡಳಿತದ ಐದನೆಯ ವರ್ಷ ಕ್ರಿ.ಶ. 1255ಕ್ಕೆ ಸರಿ ಹೋಗುತ್ತದೆ.

43 ನೇ ಶಾಸನದಿಂದ ಸ್ಥಾನತ್ತಾರರ ಅಭ್ಯರ್ಥನೆಯ ಮೇರೆಗೆ ಒಂದಷ್ಟು ಭೂಮಿಯನ್ನು ಆಲಯಕ್ಕೆ ಕೊಡಬೇಕೆಂದು ಕುಡವೂರು ನಾಡಿನ ಮಹಾಜನ ಹಾಗೂ ತೊಂಡಪ್ಪಾಡಿ ಪಟ್ರುವಿನ ಜನರು ಶಿಫಾರಸ್ಸು ಮಾಡಿದಾಗ ಅದನ್ನು ಅಗರ ಪರ್ರುವಿನ ವಾರಿಯ ವಿಮಾನಾಟ್ಟಾನ್ (ವಿಭಾಗಾಧಿಪತಿ) ಅನು ಮೋದಿಸಿ ಮುಂದೆ ಮಾಡಿದಾಗ ಜಟಾವರ್ಮ ಸುಂದರ ಪಾಂಡ್ಯ 1 ನ ಸಾಮಂತನಾದ ವೀರನರಸಿಂಗ ದೇವರಾಯ ಯಾದವರಾಯರು ತನ್ನ ಅಮೋದವನ್ನು ಬಾಯಿಮಾತಿನ ಮೂಲಕ ತಿಳಿಸಿದಾಗ ಅದನ್ನು ಯಾದವರಾಯರು ಶಾಸನದ ಮೂಲಕ ಸ್ಥಾನತ್ತಾರರಿಗೆ ಪಾಂಡ್ಯ ಸಾಮ್ರಾಟನ ಆಡಳಿತದ ಮೂರನೆಯ ವರ್ಷದಿಂದ ಚಲಾವಣೆಗೆ (ಕ್ರಿ.ಶ. 1254) ಬರುವ ಹಾಗೆ ನೋಡಿ ಕೊಂಡ ನೆಂದು ತಿಳಿದು ಬರುತ್ತದೆ. ಈ ಭೂಮಿಯನ್ನು ತಿರುವಿಳಂಕೋಯಿಲಿ ನಲ್ಲಿದ್ದ ಅಳತೆಗೋಲಿನಿಂದ ಅಳೆಯಲಾಯಿತು.

44ನೇ ಕ್ರಮಾಂಕದ ಶಾಸನವು ವೀರನರಸಿಂಗದೇವ ಯಾದವರಾಯನು ಸುಂದರಪಾಂಡ್ಯನ ಆಡಳಿತದ (ಕ್ರಿ.ಶ. 1263) 12 ನೇ ವರ್ಷದಿಂದ ಚಲಾವಣೆಗೆ ಬರುವಂತೆ ಪಾದರಿವೇಡು ಗ್ರಾಮವನ್ನು ದಾನವಾಗಿ ನೀಡಿ ಅಲ್ಲಿಂದ ಉಂಟಾಗುವ ಉತ್ಪನ್ನದಿಂದ ತಿರುವೆಂಕಟಮುಡೈಯಾನನಿಗೆ ನಿತ್ಯ ಪೂಜೆ ನೈವೇದ್ಯ ನಡೆಯಬೇಕು ಎಂಬುದನ್ನು ತಿಳಿಸುವುದು.

45 ಹಾಗೂ 46 ನೇ ಶಾಸನಗಳು ಜಟಾವರ್ಮ ಸುಂದರ ಪಾಂಡ್ಯ 1 ನ ಪ್ರಶಸ್ತಿಯನ್ನು (ಆತನ ಸೈನಿಕ ಸಾಹಸ ಕೀರ್ತಿ ಪ್ರತಿಷ್ಠೆಗಳ ಗುಣಗಾನ) ಮಾಡುತ್ತ ಆತನು ಚಂದ್ರವಂಶದ ಆಭರಣವೆಂದೂ ಮಧುರೆಯ ಒಡೆಯನೆಂದೂ (ಮಧುರಾ ಮಾಧವ ಎಂದೂ) ಕೇರಳ, ವಂಶನಾಶಕ ನೆಂದೂ, ಲಂಕೆಯನ್ನೂ ಸೂರೆ ಮಾಡಿದ ಎರಡನೆಯ ರಾಮನೆಂದೂ, ಚೋಳ ಕುಲಪರ್ವತಕ್ಕೆ ಆಗಸದಿಂದ ಎರಗಿದ ವಜ್ರಾಯುಧವೆಂದೂ ಕಾಡಕ (ಕಾಡವ-ಪಲ್ಲವ) ಮದಗಜಗಳಿಗೆ ಜ್ವರದಂತಹವನೂ,ವಿವಿಧ ಶತ್ರುದುರ್ಗಗಳನ್ನು ನಾಶಪಡಿಸಿದವನೂ, ವೀರಗಂಡ ಗೋಪಾಲನೆಂಬ ಅರಣ್ಯಕ್ಕೆ ಬೆಂಕಿ ಯಂತಹವನೂ, ಅತಿ ಸುಂದರವಾದ ಕಂಚೀಪುರದ ಒಡೆಯನೂ, ವಕಾಕತೀಯ ಗಣಪತಿಯೆಂಬ ಹರಿಣಕ್ಕೆ ಹುಲಿಯಾದವನೂ, ಶರಣಾ ಗತರಾಯ ಸುರತ್ರಾಣನೂ, ಮಹಾರಾಜಾಧಿರಾಜ ಪರಮೇಶ್ವರನೂ, ಮೂಲೋಕ ದೊಡೆಯನೂ, ವೀರಗಂಡ ಗೋಪಾಲನನ್ನು ಸ್ವರ್ಗದಲ್ಲಿ ಸ್ಥಾಪಿ ಸಿದವನ್ನು ಅರಸರನ್ನು ಅಂಕೆಯಲ್ಲಿಟ್ಟವನೂ... ಇತ್ಯಾದಿ ಬಿರುದಾಂಕಿತನಾಗಿದ್ದ ನೆನ್ನುತ್ತದೆ.

45 ನೆ ಯ ಶಾಸನದ ಕೊನೆಯಲ್ಲಿ ಕ್ರಿ.ಶ. 1266 ರಲ್ಲಿನ ಆತನ ಆಡ ಳಿತದ 14 ನೇ ವರ್ಷದ ಎದಿರಾಂಡುಪಿನಲ್ಲಿ ಕಾವೇರಿ ನದಿಯ ದಕ್ಷಿಣದಂಡೆ ಯಲ್ಲಿನ ದಕ್ಷಿಣದ ಎರಡು ಹಳ್ಳಿಗಳನ್ನು ಈ ಮೊದಲೇ ತಾನು ದಾನವಾಗಿತ್ತಿರುವುದನ್ನು ಪುನಃ ಧ್ರುವೀಕರಿಸಿದ್ದಾನೆ. (ಕ್ರ.55ರಲ್ಲಿ ಕೂಡ ಇದೇ ವಿಷಯ).

(ಎದಿರು ವರ್ಷ ಎಂಬ ಅರ್ಥದ 'ಎದಿ ರಾಂಡು-ರಾಜರ ಆಳ್ವಿಕೆಯ ಕಾಲದಲ್ಲಿ ಅವರು ರಾಜ್ಯವನ್ನು ಆಗ ಅಥವಾ ಸ್ವಲ್ಪ ಹಿಂದೆ ಕಳೆದುಕೊಂಡದ್ದನ್ನು ಸೂಚಿಸುತ್ತದೆ. ಜಟಾವರ್ಮ,ಸುಂದರ ಪಾಂಡ್ಯ 1 ಅಪ್ರತಿಮ ಪರಾಕ್ರಮಿಯಾಗಿದ್ದು-ಕೇರಳ ದೇಶವನ್ನು ಎಂದರೆ ತಿರುವಾಂಕೂರನ್ನು ಆಕ್ರಮಿಸಿ, ಕಾವೇರಿ ನದಿಯ ದಡದ ಚೋಳದೇಶವನ್ನು ಗೆದ್ದವನು,ನೆಲ್ಲೂರಿನವರೆಗಿದ್ದ ಹಳೆಯ ಪಲ್ಲವ ರಾಜ್ಯವನ್ನು ವಶಪಡಿಸಿ ಕೊಂಡವನು ಹದಿ ನಾಲ್ಕು ವರ್ಷಗಳವರೆಗೆ ಅತ್ಯಂತ ವಿಜಯೋ ತ್ಸಾಹದಿಂದ ರಾಜ್ಯಭಾರ ಮಾಡಿದವನು. ಹದಿ ನಾಲ್ಕನೆಯ ವರ್ಷದ ಕೊನೆಯಲ್ಲಿ ಅಥವಾ ಹದಿನೈದನೆಯ ವರ್ಷದ ಮೊದಲಿನಲ್ಲಿ ಪರಾ ಜಯ ಹೊಂದಿ ತನ್ನ ರಾಜ್ಯವನ್ನು ಕಳೆದು ಕೊಂಡ ಎಂಬುದನ್ನು ಚಿಂತಿಸಿದರೆ ಆಶ್ಚರ್ಯ ವಾಗುತ್ತದೆ.ಎದಿರಾಂಡು (ಎದಿರ್+ ಅಂಡು-ಎದುರು ವರ್ಷ) ಎಂಬ ಪದ ಇದನ್ನೇ ಸೂಚಿ ಸುವುದು. ಆತನಿಂದ ಸೋಲನ್ನನು ಭವಿಸಿದ ಯಾವ ರಾಜನೂ ಆತನನ್ನು ಪುನಃ ಸೋಲಿಸಿ ಆತನ ರಾಜ್ಯವನ್ನು ಸ್ವಾಧೀನ ಪಡಿಸಿಕೊಳ್ಳುವಷ್ಟು ಪ್ರಬಲನಾಗಿರಲಿಲ್ಲ ಪ್ರಾಯಶಃ ಇದು ಸಾಧ್ಯವಾದದ್ದು ಆತನ ಜೊತೆಗೆ ಸೇರಿ ಆಡಳಿತ ನಡೆಸುತ್ತಿದ್ದ ವಿಕ್ರಮ ಪಾಂಡ್ಯನಿಂದ ಆಗಿದ್ದಿರಬಹುದು. ಏನೇ ಆದರೂ ಹದಿನೈದನೆಯ ವರ್ಷದ ಆರಂಭ ದಲ್ಲಿ ಎಂದರೆ 14 ನೇ ವರ್ಷದ ಎದಿ ರಾಂಡು ವಿಲ್ಲಿ (ಕ್ರಿ.ಶ. 1268 ) ತನ್ನ ಸಿಂಹಾಸನ ವನ್ನೂ, ರಾಜ್ಯವನ್ನೂ ಆತ ಮರಳಿ ಪಡೆ ದನು.)

(ಸಶೇಷ)



ಭಾಗವತ ಕಥಾಸಾಗರ

# ದಕ್ಷಯಜ್ಞ ವಿಧ್ವಂಸ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್.ಬದ್ರಿನಾಥ್

ವೈಷ್ಣವಾಪರಾಧವು ಈ ಪ್ರಪಂಚದಲ್ಲೇ ಅತಿ ಭಯಂಕರವಾದುದು. ಆ ವೈಷ್ಣವಾಪರಾಧ ಪ್ರಭಾವದಿಂದ ಯಾವನೂ ತಪ್ಪಿಸಿಕೊಳ್ಳಲಾರನು. ಅಷ್ಟಕ್ಕೂ ವೈಷ್ಣವನೆಂದರೆ ಯಾರು? ಯಾವ ಮಹನೀಯನು ವಿಷ್ಣುಭಕ್ತನೋ ಅವನೇ ವೈಷ್ಣವನು. ಶ್ರೀಮದ್ಭಾಗವತದಲ್ಲಿ ಪರಮಶಿವನು ಮಹಾವೈಷ್ಣವನಾಗಿ ಕರೆಯಲ್ಪಟ್ಟಿದ್ದಾನೆ.ಅಂತಹ ಮಹಾವೈಷ್ಣವನ ನಿಂದೆಗೆ ಕಾರಣನಾದರೆ ಎಂತಹ ಘೋರವುಂಟಾಗುವುದೋ ಅದನ್ನು ವಿವರಿಸುವುದೇ ಈ ದಕ್ಷಯಜ್ಞ ವಿಧ್ವಂಸದ ಕಥೆ.

ಈ ವ್ಯಾಖ್ಯಾನವು ಶ್ರೀ ಮದ್ಭಾಗವತದಲ್ಲಿ ಚತುರ್ಥ ಸ್ಕಂದದಲ್ಲಿ ಬರುತ್ತದೆ.

ಈ ಕಥೆ ಶಿವ ಪತ್ನಿಯಾದ ಸತಿದೇವಿಯಿಂದ ಪ್ರಾರಂಭಗೊಳ್ಳುತ್ತದೆ.ಆಕೆ ದಕ್ಷನ ಪುತ್ರಿಯಾಗಿ ಜನಿಸುತ್ತಾಳೆ. ಸ್ವಾಯಂಭುವ ಮನುವಿಗೆ ಆಕೂತಿ,ದೇವಹೂತಿ,ಪ್ರಸೂತಿಯೆಂಬ ಮೂವರು ಪುತ್ರಿಯರು; ಪ್ರಿಯವ್ರತ, ಉತ್ತಾನಪಾದ ಎಂಬ ಇಬ್ಬರು ಪುತ್ರರು. ಮನು ತನ್ನ ಮೂವರು ಪುತ್ರಿಯರಲ್ಲಿ ಪ್ರಸೂತಿಯನ್ನು ಬ್ರಹ್ಮಪುತ್ರನಾದ ದಕ್ಷನಿಗೆ ಕೊಟ್ಟು ಮದುವೆ ಮಾಡುತ್ತಾನೆ.ಪ್ರಸೂತಿ-ದಕ್ಷರ ಸಂತಾನವೇ ಈ ಮೂರು ಲೋಕಗಳನ್ನು ಆವರಿಸಿದೆ.ಅವರಿಗೆ ಹದಿನಾರು ಮಂದಿ ಪುತ್ರಿಯರು ಜನಿಸಿದ್ದಾರೆ.ಅವರಲ್ಲಿ ಹದಿಮೂರು ಮಂದಿಗೆ ಧರ್ಮನೊಂದಿಗೆ ವಿವಾಹವಾಗಿದೆ. ಒಂದು ಪುತ್ರಿಗೆ ಅಗ್ನಿದೇವನೊಂದಿಗೆ ವಿವಾಹ ವೇರ್ಪಟ್ಟಿದೆ. ಉಳಿದ ಇಬ್ಬರಲ್ಲಿ ಒಬ್ಬರಿಗೆ ಪಿತೃದೇವತೆಗಳೊಂದಿಗೆ ವಿವಾಹ ನಡೆದಿದೆ. ಹಾಗೆ ಮಿಕ್ಕೊಬ್ಬ ಕನ್ಯೆಗೆ ಭವನಾಶನಾದ ಶಿವನ ಪತ್ನಿಯಾಗಿ ಮದುವೆ ಜರುಗಿದೆ. ಆಕೆಯೇ ಸತಿದೇವಿ.

ಸತಿದೇವಿ ತನ್ನ ಪತಿಯ ಸೇವೆಯಲ್ಲಿ ಬಹಳ ಶ್ರದ್ಧೆ ವಹಿಸಿದ್ದಾಳೆ. ಆದರೂ ಆಕೆಗೆ ಸಂತಾನ ಸೌಭಾಗ್ಯ ದೊರೆಯಲಿಲ್ಲ. ಅದು ಏಕೆಂದರೆ ಆಕೆ ತನ್ನ ಯೌವನ ಕಾಲದಲ್ಲಿ ಯೋಗಾಗ್ನಿಯಲ್ಲಿ ದೇಹವನ್ನು ತ್ಯಜಿಸಿದ್ದಾಳೆ. ದೋಷರಹಿತನಾದ ತನ್ನ ಪತಿಯಾದ ಶಿವನನ್ನು ತನ್ನ ತಂದೆ ಪದೇ ಪದೇ ನಿಂದಿಸುವುದರಿಂದ ಬೇಸತ್ತು ಆಕೆ ಪ್ರಾಣತ್ಯಾಗ ಮಾಡಿದ್ದಾಳೆ. ಆದರೆ ದಕ್ಷನು ತನ್ನ ಅಳಿಯನಾದ ಶಿವನನ್ನು ಮಾತು ಮಾತಿಗೆ ನಿಂದಿಸಲು ಕಾರಣವೇನೆಂದು ತಿಳಿದುಕೊಳ್ಳಬೇಕಾಗುತ್ತದೆ. ಒಮ್ಮೆ ಪ್ರಜಾಪತಿ ಒಂದು ಮಹಾಯಜ್ಞವನ್ನು ಕೈಗೊಂಡಿದ್ದಾನೆ. ಅದರಲ್ಲಿ ಪಾಲ್ಗೊಳ್ಳಲು ಮಹರ್ಷಿಗಳು ಮನುಗಳು, ದೇವತೆಗಳು,ಅಗ್ನಿದೇವತೆಗಳು ತಮ್ಮ ಅನುಯಾಯಿಗಳೊಂದಿಗೆ ಪ್ರತಿಸ್ಪರ್ಧಿಗಳಾಗಿ ಬಂದಿದ್ದಾರೆ. ಆ ಸಭೆಯಲ್ಲಿ ಬ್ರಹ್ಮ, ಶಿವರೂ ಸಹಾ ಅಸೀನರಾಗಿದ್ದಾರೆ. ಈ ವಿಧವಾಗಿ ಯಜ್ಞಸಭೆಯಲ್ಲಿ ಎಲ್ಲರೂ ಸುಖಾಸೀನರಾದ ಸಮಯದಲ್ಲಿ ದಕ್ಷ

ಪ್ರಜಾಪತಿ ಅಲ್ಲಿಗೆ ಬಂದಿದ್ದಾನೆ.ಆತನ ದೇಹ ಕಾಂತಿ ಎಲ್ಲರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದೆ. ಇದರಿಂದಾಗಿ ಎಲ್ಲರೂ ಆತನ ಗೌರವಾರ್ಥವಾಗಿ ಎದ್ದು ನಿಂತಿದ್ದಾರೆ. ಸಭಾಪತಿಯಾದ ಬ್ರಹ್ಮ ಕೂಡಾ ಸಮಯೋಚಿತವಾಗಿ ದಕ್ಷನನ್ನು ಆಹ್ವಾನಿಸಿದ್ದಾನೆ. ಎಲ್ಲರೂ ತನ್ನನ್ನು ನೋಡಿ ಮರ್ಯಾದೆ ಪೂರ್ವಕವಾಗಿ ಎದ್ದು ನಿಂತರೂ ತನ್ನ ಅಳಿಯನಾದ ಶಿವನು ಆಸನದ ಮೇಲೆ ಕುಳಿತಿರುವುದು ದಕ್ಷನಿಗೆ ಮತ್ತೆಲ್ಲಿಲ್ಲದ ಕೋಪ ವನ್ನು ತಂದಿದೆ. ಈ ಕೋಪವನ್ನು ತಡೆಯದೇ ಶಿವನಿಗೆ ನಾನಾ ವಿಧವಾಗಿ ದೂಷಿಸುತ್ತಾ "ಈ ಶಿವನು ಮರ್ಯಾದೆ ಯೆಬುಂದನ್ನು ಮಣ್ಣಲ್ಲಿ ಕಲಿಸಿದ್ದಾನೆ. ಸಭೆಯಲ್ಲಿ ಹೇಗೆ ನಡೆದು ಕೊಳ್ಳಬೇಕೆಂಬುದೂ ಸಹಾ ತಿಳಿಯದು. ಸಾಧುವಿನಂತ ನಟಿಸಿ ನನ್ನ ಕುಮಾರಿಯನ್ನು ವಿವಾಹ ಗೈದಿದ್ದಾನೆ.ಮಂಗನ ಕಣ್ಣಿನೀತನಿಗೆ ಬಂಗಾರದ ಕಣ್ಣಿನ ನನ್ನ ಪುತ್ರಿ ಪತ್ನಿಯಾಗಿದ್ದಾಳೆ. ನನ್ನ ತಂದೆಯಾದ ಬ್ರಹ್ಮನ ಮಾತಿನ ಮೇರೆಗೆ ಮಗಳನ್ನು ಕೊಟ್ಟಿ ದ್ದೇನೆ ವಿನಃ ಆತನ ಮೇಲಿನ ಗೌರವದಿಂದಲ್ಲ.ಆದ್ದರಿಂದ ಇಂದಿ ನಿಂದ ಈತನಿಗೆ ಯಜ್ಞ ಭಾಗವು ಇಲ್ಲದಲೇ ಹೋಗಬೇಕೆಂದು ಶಪಿಸುತ್ತೇನೆ." ಎಂದಿದ್ದಾನೆ. ಈ ರೀತಿಯಲ್ಲಿ ತೀವ್ರವಾಗಿ ಶಪಿಸಿ ದಕ್ಷನು ಯಾರು ಹೇಳಿದರೂ ಶಾಂತನಾಗದೇ ಸಭೆಯಿಂದ ಹೊರಟು ಹೋಗಿದ್ದಾನೆ.

ಶಿವನಿಗೆ ಶಾಪವುಂಟಾಗಿದೆಯೆಂದು ತಿಳಿದು ನಂದೀ ಶ್ವರನು ಕೋಪೋದ್ರಿಕ್ತನಾಗಿದ್ದಾನೆ. ಶಿವನನ್ನು ಶಪಿಸಿದ ದಕ್ಷ ನನ್ನು, ಆ ಸಮಯದಲ್ಲಿ ಶಿವ ನಿಂದನೆಯನ್ನು ಕೇಳಿಯೂ ಮೌನ ರಾಗಿದ್ದ ಬ್ರಾಹ್ಮಣರನ್ನು ಆತನು ಶಪಿಸಲು ಸನ್ನದ್ಧನಾಗಿದ್ದಾನೆ. "ದೇಹವೇ ಸರ್ವಸ್ವವೆಂದು ಭಾವಿಸಿದ ದಕ್ಷನು ಅತಿ ಶೀಘ್ರದಲ್ಲೇ ಮೇಕೆಯ ಶಿರಸ್ಸನ್ನು ಹೊಂದುವವನಾಗಲಿ; ಆ ಬ್ರಾಹ್ಮಣರೆಲ್ಲರೂ ಕೇವಲ ದೇಹ ಪೋಷಣೆಗೇ ತಮ್ಮ ತಪೋವ್ರತಗಳನ್ನು ಒದಿ ಗಿರಿಸಿ ಭಕ್ಷ್ಯಭೋಜ್ಯಗಳನ್ನು ತ್ಯಜಿಸುವಂತಾಗಲಿ ಅವರೆಲ್ಲರೂ ಭಿಕ್ಷೆಯೆತ್ತಿ ಜೀವಿಸುವಂತಾಗಲಿ ಎಂದು ನಂದೀಶ್ವರನು ಒಂದೇ ಉಸಿರಿಗೆ ಎಲ್ಲರನ್ನು ಶಪಿಸಿದ್ದಾನೆ. ಆ ಶಾಪವನ್ನು ಕೇಳುತ್ತಲೇ ಭೃಗುಮಹರ್ಷಿ ಶಿವಾನುಯಾಯಿಗಳನ್ನು ತೀವ್ರವಾಗಿ ಶಪಿಸುತ್ತಾ "ಶಿವವ್ರತವನ್ನು ಪಾಲಿಸುವವನು ಪಾಷಾಂಡನಾಗಲಿ! ಶಿವಾ ರ್ಚನೆಯನ್ನು ಮಾಡುವವನು ಜಟೆಬೆಳೆಸಿಕೊಂಡು ಮದ್ಯ - ಮಾಂಸಾಹಾರಗಳನ್ನು ಸೇವಿಸುವಂತಾಗಲಿ" ಎಂದಿದ್ದಾನೆ. ಈ ರೀತಿಯಲ್ಲಿ ಶಾಪಪ್ರತಿಶಾಪಗಳು ನಡೆಯುತ್ತಿದ್ದರೆ ಶಿವನು ಮಾತ್ರ ಏನೂ ಮಾತಾಡದೇ ಮೌನವಾಗಿ ಸಭೆಯಿಂದ ಹೊರಟು ಹೋಗಿದ್ದಾನೆ.ನಂತರ ಪ್ರಜಾಪತಿಗಳೆಲ್ಲರೂ ಯಜ್ಞವನ್ನು ಪೂರ್ತಿ ಮಾಡಿ ತಮ್ಮ ತಮ್ಮ ನಿವಾಸಗಳಿಗೆ ತೆರಳಿದ್ದಾರೆ.

ಪ್ರಜಾಪತಿಯ ಯಜ್ಞವಾದರೂ ಶಿವ-ದಕ್ಷರ ಮಧ್ಯೆ ವೈರತ್ವವು ಮಾಯವಾಗಲಿಲ್ಲ. ಒಂದು ಬಾರಿ ದಕ್ಷನು ಒಂದು ಮಹಾಯಜ್ಞವನ್ನು ಮಾಡಬೇಕೆಂದು ಸಂಕಲ್ಪಿಸಿ ಎಲ್ಲರನ್ನೂ ಆಹ್ವಾನಿಸಿದ್ದಾನೆ. ಆದರೆ ಶಿವನನ್ನು ಮಾತ್ರ ಆಮಂತ್ರಿಸಲಿಲ್ಲ. ದೇವಿ ದೇವತೆಯರೆಲ್ಲರೂ ವಿಮಾನಗಳಲ್ಲಿ ದಕ್ಷಯಜ್ಞಕ್ಕೆ ಹೋಗು ವುದನ್ನು ನೋಡಿದ ಸತಿದೇವಿ ತಾನು ಕೂಡಾ ಯಜ್ಞಕ್ಕೆ ಹೋಗ ಬೇಕೆಂದು ಬಯಸಿದ್ದಾಳೆ. ಆದರೆ ಶಿವನು ಅದಕ್ಕೆ ಸಮ್ಮತಿಸಲಿಲ್ಲ. ಕರೆಯದ ಸ್ಥಳ ತಂದೆ ಮನೆಯಾದರೂ ಸೈ ಹೋಗಬಾರದೆಂದು ಶಿವನು ವಾದಿಸಿದ್ದಾನೆ. ಆದರೂ ಸತಿದೇವಿ ಹಠ ಮಾಡಿ ತಂದೆ ಮಾಡುವ ಯಜ್ಞಕ್ಕೆ ಹೊರಟಿದ್ದಾಳೆ.ಶಿವನು ಇನ್ನು ಮಾಡಬೇಕಾ ದದ್ದೇನೂ ಇಲ್ಲವೆಂದು ಮಣಿದು ಪ್ರಮಥ ಗಣನನ್ನು, ನಂದೀಶ್ವರನನ್ನು ಜೊತೆ ಮಾಡಿ ಸತೀ ದೇವಿಯನ್ನು ಯಜ್ಞಕ್ಕೆ ಕಳಿಸಿದ್ದಾನೆ. ಯಜ್ಞ ಮಂಟಪ ತಲುಪಿದ ಸತಿದೇವಿಯನ್ನು ಯಾರೂ ಸ್ವಾಗತಿಸಲಿಲ್ಲ. ತಾಯಿ - ಸೋದರಿಯರು ಸಹಾ ದಕ್ಷನ ಆಗ್ರಹಕ್ಕೆ ಭಯಪಟ್ಟು ಬಾಯ್ತೆರೆದು ಮಾತನಾಡಲಿಲ್ಲ. ದಕ್ಷನು ಆಕೆಯ ಕಡೆಗೆ ಕಣ್ಣೆತ್ತಿಯೂ ನೋಡಲಿಲ್ಲ. ಅಷ್ಟೇ ಅಲ್ಲದೇ ಸಭೆಯಲ್ಲಿ ನಡೆಯುತ್ತಿರುವ ಯಜ್ಞದಲ್ಲಿ ಶಿವನಿಗೆ ಆಹುತಿಗಳನ್ನು ಕೊಡದಿರುವುದನ್ನು ಸತಿದೇವಿ ಗಮನಿಸಿದ್ದಾಳೆ. ತನ್ನ ಪತಿ ತಕ್ಕುದಾದ ಗೌರವವು ಸಿಗದೇ ಹೋದುದರಿಂದ ಆಕೆ ಕ್ರುದ್ಧಳಾಗಿ ಶಿವನಿಂದನೆಗೆ ಮೊದಲಾದ ದಕ್ಷನಿಂದ ಲಭಿ ಸಿದ ತನ್ನ ದೇಹವನ್ನು ಕೂಡಲೇ ತ್ಯಜಿಸಬೇಕೆಂದು ನಿರ್ಧರಿಸಿ ಸನ್ನದ್ಧಳಾಗಿದ್ದಾಳೆ. ಆಕೆ ಯಾಗಾಗ್ನಿಯಲ್ಲಿ ಕುಳಿತು ತನ್ನ ದೇಹ ವನ್ನು ಭಸ್ಮಗೊಳಿಸಿದ್ದಾಳೆ.ತಿರುಗಿ ಬಿದ್ದ ಶಿವಾನುಯಾಯಿಗಳನ್ನು ಭೃಗುವಿನಿಂದ ಸೃಷ್ಟಿತರಾದ ಋಭುನಾಮಕ ದೇವತೆಗಳು ಥಳಿ ಸಿದ್ದಾರೆ. ಕಡೆಗೆ ಈ ವಾರ್ತೆ ಶಿವನನ್ನು ತಲುಪಿದೆ.

ಶಿವನು ಕೂಡಲೇ ತನ್ನ ಜಟಾಜಟೆಯಿಂದ ಒಂದು ಕೂದಲನ್ನು ಬೇರು ಸಮೇತ ಕಿತ್ತು. ನೆಲಕ್ಕೆ ಬಡಿದಿದ್ದಾನೆ. ಅದರಿಂದ ಮಹಾಭಯಂಕರವಾದ ವೀರಭದ್ರನು ಆವಿರ್ಭವಿಸಿ ದ್ದಾನೆ. ಆ ವೀರಭದ್ರನು ಶಿವಾಜ್ಞಾನುಸಾರ ದಕ್ಷಯಜ್ಞ ಸ್ಥಳಕ್ಕೆ ಬಂದು ಸಮಸ್ತ ವಿಧ್ವಂಸಕವಾದ ಕಾರ್ಯಗಳನ್ನು ಕೈಗೊಂಡಿ ದ್ದಾನೆ.ವೀರಭದ್ರನ ಹೆಜ್ಜೆ ತಾಗುತ್ತಲೇ ಭೂಮಿ ಕಂಪಿಸಿದೆ. ಅದು ಕ್ಷಣದಲ್ಲೇ ಬಿರು ಕೊಡೆದು ಯಜ್ಞ ಸ್ಥಳವನ್ನೆಲ್ಲಾ ಛಿದ್ರ ಛಿದ್ರ ಗೊಳಿ ಸಿದೆ. ಎಲ್ಲಾ ಯಜ್ಞ ಕುಂಡಗಳಲ್ಲಿಯೂ ಅಗ್ನಿ ಆರಿ ಹೋಗಿದೆ. ಮಂಟಪಗಳು ಸೀದು ಹೋಗಿವೆ. ಯಜ್ಞವ್ರತಗಳು ಭಗ್ನ ಗೊಂಡಿವೆ.ಆಗ ವೀರಭದ್ರನು ಭೃಗುವನ್ನು ಹಿಡಿದುಕೊಂಡು ಆತನ ಮೀಸೆಯನ್ನು ಬೇರು ಸಹಿತ ಕೀಳಿದ್ದಾನೆ. ದಕ್ಷನು ಶಿವ ನಿಂದನೆ ಮಾಡುತ್ತಿದ್ದಾಗ. ಕಣ್ಣು ಮಿಟುಕಿಸಿ ನಕ್ಕ ಭೃಗನ ನೇತ್ರ ಗಳನ್ನು ಆತನು ಕಿತ್ತೊಗೆದ್ದಾನೆ. ಶಿವನಿಂದನೆ ಸಮಯದಲ್ಲಿ

ವಿಕಾರವಾಗಿ ನಕ್ಕ ಪೂಷನ ಹಲ್ಲುಗಳನ್ನು ವೀರಭದ್ರನು ಪುಡಿ ಮಾಡಿದ್ದಾನೆ. ಈ ರೀತಿಯಾಗಿ ಶಿವನಿಂದನೆಯಲ್ಲಿ ಪರೋಕ್ಷವಾಗಿ, ಅಪರೋಕ್ಷವಾಗಿ ಪಾಲ್ಗೊಂಡ ಎಲ್ಲರಿಗೂ ತಕ್ಕುದಾದ ಶಾಸ್ತಿಯಾಗಿದೆ. ನಂತರ ವೀರಭದ್ರನು ದಕ್ಷನನ್ನು ಹಿಡಿದುಕೊಂಡು ನೆಲಕ್ಕುರುಳಿಸಿ ಎದೆ ಮೇಲೆ ಕುಳಿತಿದ್ದಾನೆ. ಅಷ್ಟಾದರೂ ದಕ್ಷನು ಶಿರ ಭಾಗಲಿಲ್ಲ. ಆಗ ಆತನು ಯಜ್ಞದಲ್ಲಿ ಬಲಿ ಕೊಡಲು ದಕ್ಷ ತಾನೇ ತಯಾರಿಸಿದ್ದ ಆಯುಧದಿಂದ ವೀರಭದ್ರನು ದಕ್ಷನ ಶಿರವನ್ನು ಖಂಡಿಸಿ ದಕ್ಷಿಣಾಗ್ನಿಯಲ್ಲಿ ಅಹುತಿ ಕೊಟ್ಟ ಕಡೆಗೆ ಯಜ್ಞ ಸ್ಥಳಕ್ಕೆ ಬೆಂಕಿಯಿಟ್ಟು ಎಲ್ಲರೂ ಕೈಲಾಸಕ್ಕೆ ತೆರಳಿದ್ದಾರೆ.

ಆಗ ಋತ್ವಿಕರು, ಸಭಾಸದರು, ದೇವತೆಗಳು ಶಿವನ ಸೇನೆಯೊಂದಿಗೆ ಶತಃ ಪ್ರಯತ್ನದೊಂದಿಗೆ ಬ್ರಹ್ಮನ ಬಳಿ ಹೋಗಿ ನಡೆದುದೆಲ್ಲವನ್ನು ವಿವರಿಸಿದ್ದಾರೆ. ಆಗ ಬ್ರಹ್ಮನು ಅವರೆಲ್ಲರನ್ನು ಕರೆದುಕೊಂಡು ಕೈಲಾಸ ಪರ್ವತದ ಹತ್ತಿರಕ್ಕೆ ನಡೆದಿದ್ದಾನೆ. ಅಲ್ಲಿ ಶಿವನು ಪೂರ್ತಿಯಾಗಿ ಧ್ಯಾನದಲ್ಲಿ ಮುಳುಗಿದ್ದಾನೆ. ದರ್ಭಾಸನದ ಮೇಲೆ ಆಸೀನನಾದ ಶಿವನು ಬ್ರಹ್ಮನನ್ನು ನೋಡುತ್ತಲೇ ಗೌರವದಿಂದ ಎದ್ದು ನಿಂತಿದ್ದಾನೆ. ನಂತರ ಬ್ರಹ್ಮ ದೇವತೆಗಳೆಲ್ಲರ ಪಕ್ಷದಿಂದ ಪ್ರಾರ್ಥಿಸುತ್ತಾ ದಕ್ಷನು ಪ್ರಾರಂಭಿಸಿದ ಯಜ್ಞವನ್ನು ಪೂರ್ತಿ ಮಾಡಿ ಯಜ್ಞ ಭಾಗವನ್ನು ತೆಗೆದುಕೊಳ್ಳಬೇಕೆಂದು ಶಿವನಿಗೆ ಬೋಧನೆ ಮಾಡಿದ್ದಾನೆ. ಶಿವಾನುಯಾಯಿಗಳ ದ್ವಾರಾ ಗಾಯಗೊಂಡ ದೇವತೆಗಳು ಋತ್ವಿಜರುಗಳಿಗೆ ಸ್ವಾಸ್ತ್ಯವನ್ನು ನೀಡಬೇಕೆಂದು ಬೇಡಿಕೊಂಡಿದ್ದಾನೆ.

ಬ್ರಹ್ಮ ದೇವನ ಮಾತುಗಳನ್ನು ಕೇಳದೆ ಶಿವನು ಉತ್ತರಿಸುತ್ತಾ "ಅವಿವೇಕಿಗಳನ್ನು ಸರಿತಿದ್ದಲು ನಾನು ಈ ರೀತಿ ಮಾಡಿದ್ದೇನೆ"ಎಂದು ಹೇಳಿದ್ದಾನೆ. ದಕ್ಷನ ಶಿರವು ಯಜ್ಞಾಗ್ನಿಯಲ್ಲಿ ಭಸ್ಮವಾಗಿದ್ದ ಕಾರಣ ಇನ್ನು ಮೇಕೆಯ ಶಿರಸ್ಸಿನಿಂದಲೇ ಜೀವಿಸ ಬೇಕಾಗುವುದೆಂದು ಭವನು ತಿಳಿಸಿದ್ದಾನೆ. ಉಳಿದೆಲ್ಲರಿಗೂ ಸಹಾ ಶೀಘ್ರದಲ್ಲೇ ಆರೋಗ್ಯವುಂಟಾಗುವುದೆಂದು ಆತನು ಧೈರ್ಯ ಹೇಳಿದ್ದಾನೆ.ತದನಂತರ ಶಿವನೊಂದಿಗೆ ಕಲೆತು ಎಲ್ಲರೂ ಯಜ್ಞ ಸ್ಥಳಕ್ಕೆ ಹೋಗಿದ್ದಾರೆ. ಅಲ್ಲಿ ಶಿವಾಜ್ಞೆಯ ಮೇರೆಗೆ ಮೇಕೆಯ ತಲೆಯನ್ನು ದಕ್ಷನ ಮುಂಡಕ್ಕೆ ಅಂಟಿಸಿ ದಕ್ಷನ ಪ್ರಾಣವನ್ನು ಮರುಕಳಿಸಿದ್ದಾರೆ. ಪ್ರಾಣ ಬಂದ ತಕ್ಷಣ ದಕ್ಷನು ತನ್ನ ಮೇಕೆಯ ಶಿರವನ್ನು ಕಂಡು ದುಃಖಿಸಿದ್ದಾನೆ. ತನ್ನ ಕುಮಾರಿ ಸತಿದೇವಿಯ ದೇಹತ್ಯಾಗ ನೆನೆಸಿಕೊಂಡು ಎಷ್ಟೋ ವ್ಯವಸನ ಗೊಂಡಿದ್ದಾನೆ. ಮಹಾತ್ಮನಾದ ಶಿವನನ್ನು ಅವಮಾನಿಸಿದ ಕಾರಣದಿಂದಲೇ ತನಗೆ ಅಂತಹ ದುಃಸ್ಥಿತಿ ಏರ್ಪಟ್ಟಿದೆಯೆಂದು ಆತ ಹಲುಬಿದ್ದಾನೆ. ತನ್ನ ತಪ್ಪುಗಳನ್ನು ಕರುಣಾಹೃದಯಿಯಾದ ಶಿವನು ಆತನನ್ನು ಕನಿಕರದಿಂದ ಆಶೀರ್ವಾದಿಸಿದ್ದಾನೆ.ನಂತರ ಪುರೋಹಿತರು ಯಜ್ಞ ಸ್ಥಳವನ್ನು ಪವಿತ್ರೀಕರಿಸಿ ಯಜ್ಞವನ್ನು ಪೂರ್ತಿಗೊಳಿಸಿದ್ದಾರೆ. ಯಜ್ಞ ಪೂರ್ತಿಯಾಗುತ್ತಲೇ ಆದಿ ನಾರಾಯಣನು ಯಜ್ಞ ಸ್ಥಳದಲ್ಲಿ ಪ್ರಕಟಗೊಂಡಿದ್ದಾನೆ. ಅಷ್ಟಬಾಹುಗಳಲ್ಲಿ ವಿವಿಧ ಆಯುಧಗಳನ್ನು ಧರಿಸಿದ್ದ ಆ ದೇವ ದೇವನನ್ನು ದೇವತೆಗಳೆಲ್ಲರೂ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿದ್ದಾರೆ. ದಕ್ಷನ ಮೂಲಕ ನಿರ್ವಹಿಸಲ್ಪಟ್ಟ ಯಜ್ಞದಲ್ಲಿ ಅರ್ಚಿಸಲ್ಪಟ್ಟ ಶ್ರೀಮನ್ನಾರಾಯಣನು ಆತನನ್ನು ಸಹಾ ಆಶೀರ್ವಾದಿಸಿದ್ದಾನೆ. ತದನಂತರ ದಕ್ಷನು ಬ್ರಹ್ಮರುದ್ರರನ್ನು ಬಿಡಿ ಬಿಡಿಯಾಗಿ ಆರಾಧಿಸಿ ಅವರಿಗೆ ಯಜ್ಞಭಾಗಗಳನ್ನು ಕೊಟ್ಟಿದ್ದಾನೆ. ಯಜ್ಞ ನಂತರ ದೇವತೆಗಳೆಲ್ಲರೂ ದಕ್ಷನನ್ನು ಆಶೀರ್ವದಿಸಿದ್ದಾರೆ. ಯಜ್ಞ ಸ್ಥಳದಲ್ಲಿ ದೇಹತ್ಯಾಗ ಮಾಡಿದ ಸತಿದೇವಿ ತಿರುಗಿ ಹಿಮವಂತನ ಕುಮಾರಿಯಾಗಿ ಜನಿಸಿ ಮತ್ತೆ ಶಿವನ ಪತ್ನಿಯಾಗಿದ್ದಾಳೆ. ಶಿವದೂಷಣೆಯಿಂದ ಆಡಿನ ಮೋರೆಯನ್ನು ಹೊಂದಿದ ದಕ್ಷನು ಆ ದೇಹವನ್ನು ತ್ಯಜಿಸಿ ಮಾರಿಷರ ಗರ್ಭದಲ್ಲಿ ಜನ್ಮವೆತ್ತಬೇಕಾಗಿ ಬಂದಿದೆ.ಈ ದಕ್ಷಯಜ್ಞ ವಿಧ್ವಂಸದ ವೃತ್ತಾಂತವು ಎಷ್ಟೋ ಪಾವನವಾದುದು. ಇದನ್ನು ಶ್ರದ್ಧೆಯಿಂದ ಕೇಳುವವರೂ ಹೇಳುವವರು ಸಕಲ ಪಾಪ ವಿಮುಕ್ತರಾಗುತ್ತಾರೆಂದು ಫಲಶ್ರುತಿ ಹೇಳುತ್ತದೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

ನಮ್ಮ ದೇವಾಲಯ

# ಶ್ರೀ ಅಳಘು ಮಲ್ಲಾರಿ ಕೃಷ್ಣಸ್ವಾಮಿ ದೇವಾಲಯ ಮನ್ನಾರು ಪೋಲೂರು

- ಮೂಲ : ಶ್ರೀಮತಿ. ಎಂ. ಉತ್ತರ ಫಲ್ಗುಣಿ - ಅನುವಾದ: ಶ್ರೀಮತಿ. ಎಸ್. ಸುರೇಖ

ಚಾರಿತ್ರಿಕವಾಗಿ ಪ್ರಸಿದ್ಧವಾದ ಮಣಿಮಂಡಪ ಕ್ಷೇತ್ರವೆಂದು ಕರೆಯಲ್ಪಡುವ ಶ್ರೀ ಸತ್ಯಜಾಂಬವತಿ, ಸಮೇತ ಶ್ರೀ ಅಳಘು ಮಲ್ಲಾರಿ ಕೃಷ್ಣಸ್ವಾಮಿ ದೇವಾಲಯ ಮನ್ನಾರು ಪೋಲೂರುನಲ್ಲಿ ಕಾಳಂಗೀ ನದಿ ತೀರದಲ್ಲಿನ ಸೂಳೂರು ಪೇಟೆಗೆ ಸುಮಾರು 4 ಕಿ.ಮೀ. ದೂರದಲ್ಲಿದೆ.

ಈ ದೇವಾಲಯವು 10 ನೇ ಶತಮಾನದಲ್ಲಿ ಚೋಳರಾಜನು ನಿರ್ಮಿಸಿದನೆಂದು ಚಾರಿತ್ರಿಕವಾದ ನಿದರ್ಶನಗಳಿವೆ. 13 ನೇ ಶತಮಾನದಲ್ಲಿ ನೆಲ್ಲೂರನ್ನು ಪರಿಪಾಲಿಸಿದ ಮನುಮ ಸಿದ್ಧಿರಾಜರ ಕಾಲದಲ್ಲಿ ಎಷ್ಟೋ ವೈಭವವಾಗಿತ್ತು. ನಂತರ 18 ನೇ ಶತಮಾನದಲ್ಲಿ ವೆಂಕಟಗಿರಿ ರಾಜರ ಪಾಲನೆಯಲ್ಲಿ ಈ ದೇವಾಲಯಕ್ಕೆ ರಾಜನು 5 ಗ್ರಾಮಗಳನ್ನು ವಿರಾಳವಾಗಿ ನೀಡಿದರು. ವರ್ಷಕ್ಕೆ 2 ಸಾರಿ ಬ್ರಹ್ಮೋತ್ಸವಗಳು ನಡೆಯುವ ಕ್ಷೇತ್ರ ಇದು.

## ಸ್ಥಳಪುರಾಣ

ರಾಜ ಸತ್ರಾಜಿತ್ತು ಸೂರ್ಯ ಭಗವಾನನ ಬಗ್ಗೆ ಘೋರವಾದ ತಪಸ್ಸು ಮಾಡಿದನು. ಆತನ ತಪಸ್ಸಿಗೆ ಮೆಚ್ಚಿ ಸೂರ್ಯಭಗವಾನನಿಗೆ ಶ್ಯಮಂತಕಮಣಿಯನ್ನು ಬಹುಕರಿಸಿದನು. ಆ ಶ್ಯಮಂತಕಮಣಿಯನ್ನು ಪ್ರತಿದಿನ ಎಂಟು ತೂಕದ ಬಂಗಾರವನ್ನು ಪ್ರಸಾದಿಸುವ ಶಕ್ತಿಯ ಆಭರಣ. ಒಂದು ದಿನ ಸತ್ರಾಜಿತ್ತು ಆ ಮಣಿಯನ್ನು ಧರಿಸಿ ಶ್ರೀಕೃಷ್ಣನ ಆಸ್ಥಾನಕ್ಕೆ ಹೋದನು. ಆ ಮಣಿಯ ಶಕ್ತಿಯ ಬಗ್ಗೆ ಗುರುತಿಸಿದ ಕೃಷ್ಣನು ಪ್ರಜೆಗಳ ಕ್ಷೇಮಕ್ಕಾಗಿ, ಉಪಯೋಗಕ್ಕಾಗಿ ಆ ಮಣಿಯನ್ನು ತನಗೆ ಕೊಡುವುದಾಗಿ ಕೋರಿದನು. ಆದರೆ ಸತ್ರಾಜಿತ್ತು ಅದಕ್ಕೆ ಅಂಗೀಕರಿಸಲಿಲ್ಲ. ಮಣಿಯನ್ನು ತನಗೆ ಕೊಡಲಿಲ್ಲವೆಂಬ ಕೋಪದಿಂದ ಶ್ರೀಕೃಷ್ಣನು ಆ ಮಣಿಯನ್ನು ಅಪಹರಿಸುತ್ತಾನೆಂದು ಸಂದೇಹದಿಂದ ಸತ್ರಾಜಿತ್ ಆ ಮಣಿಯನ್ನು ತನ್ನ ತಮ್ಮನಾದ ಪ್ರಸೇನನ ಕತ್ತಿನಲ್ಲಿ ಹಾಕಿ ಭದ್ರಪಡಿಸಿದನು. ಒಂದು ದಿನ ಆ ಮಣಿಯನ್ನು ಧರಿಸಿ ಪ್ರಸೇನನು ಬೇಟೆಗೆ ಹೋದನು. ಆಗ ಒಂದು ಸಿಂಹವು ಅವನನ್ನು ಕೊಂದು ಪ್ರಕಾಶವಾಗಿ ಇದ್ದ ಆ ಶ್ಯಮಂತಕ ಮಣಿಯನ್ನು ತೆಗೆದು ಕೊಂಡಿತು. ಆ ಸಿಂಹವನ್ನು ಸಂಹರಿಸಿ ಜಾಂಬವಂತನು ಆ ಮಣಿಯನ್ನು ತೆಗೆದು ಕೊಂಡು ಹೋಗಿ ತನ್ನ ಕುಮಾರಿಯಾದ ಜಾಂಬವತಿಗೆ ಕೊಟ್ಟನು.

ಕಾಡಿಗೆ ಹೋದ ಪ್ರಸೇನನು ತಿರುಗಿಬಾರದ ಕಾರಣ ಶ್ರೀ ಕೃಷ್ಣನೇ ಶ್ಯಮಂತಕಮಣಿಗೋಸ್ಕರ ತನ್ನ ತಮ್ಮನನ್ನು ಕೊಂದನೆಂದು ಶ್ರೀಕೃಷ್ಣನ ಮೇಲೆ ಅಪವಾದವನ್ನು ಹಾಕಿ ಹಂತಕನು, ಕಳ್ಳನು ಎಂದು ಸತ್ರಾಜಿತ್ತು ನಿಂದಿಸಿದನು. ಆ ವಿಧವಾಗಿ ಬಂದ ಅಪಕೀರ್ತಿಯನ್ನು ಹೋಗಲಾಡಿಸುವುದಕ್ಕಾಗಿ ಶ್ರೀ ಕೃಷ್ಣನು ವಿನಾಯಕಚವಿತಿಯ ದಿನ ವಿನಾಯಕನಿಗೆ ಪ್ರಾರ್ಥಿಸಿ ಶ್ಯಮಂತಕಮಣಿಯ ಬಗ್ಗೆ ಅನ್ವೇಷಣೆಯನ್ನು





ಪ್ರಾರಂಭ ಮಾಡಿದನು. ಆ ಅನ್ವೇಷಣೆಯಲ್ಲಿ ಪ್ರಸೇನನ ಮೃತ ದೇಹ ಮತ್ತು ಸಿಂಹ ಮೃತದೇಹವನ್ನು ನೋಡಿ, ಅಲ್ಲಿಯ ಹೆಜ್ಜೆ ಗುರುತನ್ನು ನೋಡಿ ನೇರವಾಗಿ ಜಾಂಬ ವಂತನ ಗುಹೆಗೆ ಹೋದನು. ಅಲ್ಲಿ ಜಾಂಬವಂತನ ಕುಮಾರಿಯಾದ ಜಾಂಬವತಿ ಕತ್ತಿನಲ್ಲಿ ಆ ಮಣಿಯನ್ನು ನೋಡಿದನು. ಅದನ್ನು ನೋಡಿ ಜಾಂಬವಂತನು ಶ್ರೀಕೃಷ್ಣನನ್ನು ಮಲ್ಲಯುದ್ಧಕ್ಕೆ ಆಹ್ವಾನಿಸಿದನು. ಅಂದು ಜಾಂಬವಂತನು ಸೋತು ಹೋದನು. ತ್ರೇತಾಯುಗದಲ್ಲಿ ಶ್ರೀರಾಮಪಟ್ಟಾಭಿಷೇಕದ ಸಂದರ್ಭದಲ್ಲಿ ಜಾಂಬ ವಂತನು ಶ್ರೀ ರಾಮನೊಂದಿಗೆ ಮಲ್ಲಯುದ್ಧ ಮಾಡ ಬೇಕೆಂದು ಕೋರಿದನು. ಆಗ ಶ್ರೀರಾಮಚಂದ್ರನು ಜಾಂಬವಂತನ ಕೋರಿಕೆಯನ್ನು ದ್ವಾಪರಯುಗದಲ್ಲಿ ನೆರವೇರಿಸುತ್ತೇನೆಂದು ಹೇಳಿದನು. ಆದಕ್ಕೆ ದ್ವಾಪರ ಯುಗದಲ್ಲಿ ಜಾಂಬವಂತನೇ ಶ್ರೀಕೃಷ್ಣನೊಂದಿಗೆ, ಶ್ರೀಕೃಷ್ಣನೇ ಶ್ರೀರಾಮನ ಒಂದು ಅವತಾರ ಎಂದು ತಿಳಿಯದೇ ಮಲ್ಲಯುದ್ಧ ಮಾಡಿದನು. ಮಲ್ಲಯುದ್ಧ ಪ್ರವೀಣನಾದ ಜಾಂಬವಂತನು ತನಗೆ ಸಮಾನವಾಗಿ ಮಲ್ಲಯುದ್ಧ ಮಾಡಿದ ತನ್ನನ್ನು ಸೋಲಿಸುವಂತಹ ಶಕ್ತಿ ಶ್ರೀ ರಾಮನಿಗೆ ಅಲ್ಲದೆ ಬೇರೆ ಯಾರಿಗೂ ಸಾಧ್ಯವಾಗದ ಮಾತು. ತನ್ನನ್ನು ಸೋಲಿಸಿದ ಶ್ರೀಕೃಷ್ಣನು, ಶ್ರೀರಾಮನ ಅವತಾರವೆಂದು ತಿಳಿದು ಶರಣು ಕೋರಿದನು. ಶ್ಯಮಂತಕಮಣಿಯ ಜೊತೆಗೆ, ತನ್ನ ಕುಮಾರಿಯಾದ ಜಾಂಬವತಿಯನ್ನು ಶ್ರೀ ಕೃಷ್ಣನಿಗೆ ಕೊಟ್ಟು ವಿವಾಹವನ್ನು ಮಾಡಿದನು.

ಶ್ರೀ ಕೃಷ್ಣನು ಶ್ಯಮಂತಕಮಣಿಯನ್ನು ಸತ್ರಾಜಿತ್ತು ವಿಗೆ ನೀಡಿದನು. ಆಗ ಸತ್ರಾಜಿತ್ತು ನಡೆದ ವಿಷಯ ತಿಳಿದು ಕೊಂಡು ಪಶ್ಚಾತ್ತಾಪವನ್ನು ಹೊಂದಿ ಪಾಪಪರಿಹಾರಕ್ಕಾಗಿ ಶ್ರೀ ಕೃಷ್ಣನನ್ನು ಶ್ಯಮಂತಕಮಣಿಯ ಜೊತೆಗೆ ತನ್ನ ಕುಮಾರಿಯಾದ ಸತ್ಯಭಾಮೆಯನ್ನು ಕೂಡಾ ಅರ್ಧಾಂಗಿ ಯಾಗಿ ಸ್ವೀಕರಿಸುವಂತೆ ಕೋರಿದನು. ಆಗ ಶ್ರೀ ಕೃಷ್ಣನು ಸತ್ಯಭಾಮೆಯನ್ನು ವಿವಾಹ ಮಾಡಿಕೊಂಡನು. ಆದ್ದರಿಂದ ಮೂಲವಿಗ್ರವಾದ ಶ್ರೀಕೃಷ್ಣನ ಜೊತೆಗೆ ಜಾಂಬವತೀ ಸತ್ಯ ಭಾಮೆ ವಿಗ್ರಹಗಳು ಇರುವುದು ಇಲ್ಲಿಯ ವಿಶೇಷ.

ಜಾಂಬವಂತನು ಶ್ರೀಕೃಷ್ಣನಿಗೆ ಶ್ಯಮಂತಕಮಣಿ ಯನ್ನು ಈ ಸ್ಥಳದಲ್ಲಿಯೇ ಸಮರ್ಪಿಸಿದನು. ಆದ್ದರಿಂದ ಈ ಸ್ಥಳವನ್ನು ಮಣಿಮಂಟಪ ಕ್ಷೇತ್ರವೆಂದು ಪುರಾಣ ಪ್ರಸಿದ್ಧಿ ಯನ್ನು ಹೊಂದಿದೆ. ಪ್ರಧಾನದೈವವಾದ ಶ್ರೀಕೃಷ್ಣನ ಜೊತೆಗೆ ಸತ್ಯಭಾಮ, ಜಾಂಬವತಿಯರು ಕೂಡ ಪೂಜೆಗೊಳ್ಳುತ್ತಿ ದ್ದಾರೆ. ಇಲ್ಲಿ ಅಲ್ಲದೆ ಬೇರೆ ಎಲ್ಲಿಯೂ ಕಾಣಲಾಗುವುದಿಲ್ಲ.

ಇಲ್ಲಿ ಪ್ರಧಾನದೈವವು ಶ್ರೀ ಅಳಘು ಮಲ್ಲಾರಿ ಕೃಷ್ಣ ಸ್ವಾಮಿ. ಜಾಂಬವಂತನ ಜೊತೆಗೆ ಮಲ್ಲಯುದ್ಧ ಮಾಡಿದ ಸ್ವಾಮಿ ಆದ್ದರಿಂದ ಮಲ್ಲಹರಿ ಕೃಷ್ಣಸ್ವಾಮಿಯಾಗಿ ಹೆಸರನ್ನು ಪಡೆದಿದೆ. ಈ ಹೆಸರು ಕಾಲಕ್ರಮೇಣ ಬದಲಾವಣೆ ಹೊಂದಿ ಮಲ್ಲಾರಿ ಕೃಷ್ಣಸ್ವಾಮಿ ಎಂದಾಯಿತು. ಎಷ್ಟೋ ಸುಂದ ರಾಂಗನು ಮನೋಹರವಾಗಿ, ತ್ರಿಭಂಗಿ ಆಗಿ ಶಂಖಚಕ್ರ ವೇಣುಗಾನ ಚತುರ್ಭುಜಾಗಳಿಂದ ಇರುವುದರಿಂದ ಅಳಘು ಮಲ್ಲಾರಿ ಕೃಷ್ಣಸ್ವಾಮಿಯಾಗಿ ಹೆಸರು ಪಡೆದಿದ್ದಾನೆ. ಈ ಪುಣ್ಯ ಕ್ಷೇತ್ರದಲ್ಲಿ ಹರಿ ಜಾಂಬವಂತನ ಜೊತೆ ಮಲ್ಲಯುದ್ಧ ಮಾಡಿದನೆಂದು ಆದ್ದರಿಂದ ಈ ಪ್ರಾಂತ್ಯಕ್ಕೆ "ಮಲ್ಲಹರಿ





ಪೋರುಊರು'' ಎಂದು ಹೆಸರು ಬಂದಿತು. ಕಾಲ ಕ್ರಮೇಣ ಆ ಊರು ಮಲ್ಲಾರಿ ಪೋರೂರಾಗಿ ಬದಲಾಗಿ ಇವತ್ತಿಗೆ 'ಮನ್ನಾರು ಪೋಲೂರು' ಎಂದು ಕರೆಯಲ್ಪಡುತ್ತಿದೆ.

**ಆಲಯ, ಆಲಯಮೂರ್ತಿಗಳ ಶಿಲ್ಪಕಳಾರೀತಿ**

ಪ್ರಧಾನದೈವವಾದ ಶ್ರೀ ಕೃಷ್ಣನ ಎದುರಿಗೆ 9 1/2 ಎತ್ತರವಾದ ಗರುತ್ಮಂತನ ವಿಗ್ರಹ ಅಷ್ಟನಾಗಾಭರಣಾದಿಂದ ಕಣ್ಣಿನಲ್ಲಿ ನೀರು ಸುರಿಯುವಂತೆ, ಗರ್ವಭಂಗವಾದಂತೆ ಕಾಣಿಸುತ್ತದೆ. ಪ್ರಧಾನದೈವವು ಆದ ಶ್ರೀ ಕೃಷ್ಣ ವಿಗ್ರಹವು ಎತ್ತು 5 1/2 ಅಡಿ. ಆದರೆ ವಾಹನವಾದ ಗರುತ್ಮಂತನು ಶ್ರೀ ವೈಷ್ಣವ ದೇವಾಲಯದಲ್ಲಿ ಪ್ರಧಾನ ದೈವನಿಗಿಂತ ಎತ್ತರವಾಗಿ ಇರುವುದರಿಂದ, ಪಾತಾಳದಲ್ಲಿರುವ ವಿಶ್ವರೂಪದರ್ಶನ-ನೀಡುತ್ತಿರುವಂತೆ ಇರುತ್ತದೆ. ಇದು ಎಲ್ಲಿಯೂ ಕಾಣಿಸದ ವಿಚಿತ್ರವೂ. ಇದಕ್ಕೆ ಸ್ಥಳ ಪುರಾಣವು ಇದೆ. ಅದು ಏನೆಂದು ತಿಳಿದು ಕೊಳ್ಳೋಣ.

ಜಾಂಬವಂತನ ಜೊತೆ ಮಲ್ಲಯುದ್ಧವಾದ ನಂತರ ಶ್ರೀ ಕೃಷ್ಣನು ಜಾಂಬವಂತನಿಗೆ ಕೋದಂಡ ರಾಮ ಸ್ವಾಮಿಯಾಗಿ ದರ್ಶನವನ್ನು ನೀಡುವ ಸಲುವಾಗಿ ಹಿಮಾಲಯದಲ್ಲಿ ರಾಮನಾಮಜಪ ಮಾಡಿಕೊಳ್ಳುತ್ತಿದ್ದ ಆಂಜನೇಯಸ್ವಾಮಿಯನ್ನು ಕರೆದುಕೊಂಡು ಬರುವುದಾಗಿ ಗರುತ್ಮಂತನಿಗೆ ಆದೇಶವನ್ನು ನೀಡಿದನು. ಆ ಆಜ್ಞೆಯನ್ನು ಶಿರಸ್ಸಾವಹಿಸಿ ಗರುತ್ಮಂತನು ಆಂಜನೇಯನ ದರ್ಶನಕ್ಕಾಗಿ ಕಾದು, ಶ್ರೀ ಕೃಷ್ಣನ ಆಜ್ಞೆಯ ಪ್ರಕಾರ ಆಂಜನೇಯಸ್ವಾಮಿಯನ್ನು ಮಣಿಮಂಟಪ ಕ್ಷೇತ್ರಕ್ಕೆ ಆಹ್ವಾನಿಸಿದನು. ಹನುಮಂತನು ಆ ಆಜ್ಞೆಯನ್ನು ತಿರಸ್ಕರಿಸಿದನು. ಇಬ್ಬರು ವಾಗ್ವಾದವನ್ನು ಮಾಡಿಕೊಳ್ಳುವಾಗ ಹನುಮಂತನು ತನ ವಿಶ್ವರೂಪವನ್ನು ತೋರಿಸಿ ಗರುತ್ಮಂತನ ಗರ್ವಭಂಗಮಾಡಿದನು. ಆ ಗರ್ವಭಂಗವನ್ನು ಸ್ವಾಮಿಯವರಿಗೆ ಹೇಳಿಕೊಂಡ ರೀತಿಯಲ್ಲಿ ಗರುತ್ಮಂತನ ವಿಗ್ರಹ ಇರುವುದು ವಿಶೇಷ. ಮೂಲವಿರಾಟ್ ಶ್ರೀ ಕೃಷ್ಣಸ್ವಾಮಿ ವಿಗ್ರಹಮೂರ್ತಿಗೆ ಎದುರಿಗೆ ಮುಕುಳಿತಹಸ್ತಗಳಿಂದ ವಿಷಾದವಾಗಿ ಕನ್ನೀರು ಸುರಿಸುತ್ತ ಕಾಣಿಸುವ ದೃಶ್ಯ ಇವತ್ತಿಗೂ ಕೂಡ ನೋಡಬಹುದು. ಹಾಗೇಯೇ ಸತ್ಯಭಾಮಾ ದೇವಿಗೆ ಕೂಡಾ ಗರ್ವಭಂಗವಾಯಿತು. ಅದೇನೆಂದರೆ.

ಗರ್ವಭಂಗವು ಗರುತ್ಮಂತನು ಸೀತಾರಾಮ ಸಮೇತನಾದ ಶ್ರೀ ರಾಮನು ಕರೆಯುತ್ತಿರುವಂತೆ ಆಂಜನೇಯನನ್ನು ಆಹ್ವಾನಿಸುವಂತೆ ತಿರುಗಿ ಹಿಮಾಲಯಕ್ಕೆ ಕಳುಹಿಸಿದನು. ಆ ಆಹ್ವಾನವನ್ನು ತಿಳಿದು ಆನಂದೋತ್ಸಹದಿಂದ ಹನುಮಂತನು ಮಣಿಮಂಟಪ ಕ್ಷೇತ್ರಕ್ಕೆ ಹೊರಟು ಬಂದನು. ಸತ್ಯ ಭಾಮಾದೇವಿಯನ್ನು, ಸೀತಾದೇವಿಯಾಗಿ ಸಾಕ್ಷಾತ್ಕರಿಸುವಂತೆ ಶ್ರೀ ಕೃಷ್ಣನು ಆದೇಶವನ್ನು ನೀಡಿದನು. ಆ ಆಜ್ಞೆಯನ್ನು ಶಿರಸ್ಸಾವಹಿವುದರಲ್ಲಿ ಸತ್ಯಭಾಮೆ ವಿಫಲವಾದಳು. ಹನುಮಂತನು ಕೂಡ ಸತ್ಯಭಾಮೆಯನ್ನು, ಸೀತಾದೇವಿಯಾಗಿ ಅಂಗೀಕರಿಸಲಿಲ್ಲ. ಶ್ರೀ ಕೃಷ್ಣನು ರುಕ್ಮಿಣೀದೇವಿಯನ್ನು ಸೀತಾದೇವಿಯಾಗಿ ದರ್ಶನವನ್ನು ನೀಡುವಂತೆ ಕೋರಿದನು. ಆಕೆ ತಕ್ಷಣವೇ ಭಕ್ತಿ ಶ್ರದ್ಧೆಗಳಿಂದ ಶ್ರೀಕೃಷ್ಣನಿಗೆ ಮುಮ್ಮಾರು ಪ್ರದಕ್ಷಿಣೆ ಮಾಡಿ ಪ್ರಾರ್ಥಿಸಿ, ಸೀತಾದೇವಿಯಾಗಿ ಸಾಕ್ಷಾತ್ಕರವನ್ನು ಕೊಟ್ಟಳು. ಹನುಮಂತನು ಸೀತಾ ಸಮೇತವಾಗಿ ಸಾಕ್ಷಾತ್ಕರಿಸಿ ಕೋದಂಡರಾಮನ ದರ್ಶನವನ್ನು ಪಡೆದು ತಿರುಗಿ ಹಿಮಾಲಯಕ್ಕೆ ಹೋದನು.

ಪ್ರಧಾನ ದೇವಾಲಯದಲ್ಲಿ ಬಲಗಡೆ ಮಹಾಲಕ್ಷ್ಮಿ ಸ್ವರೂಪಳಾದ ರುಕ್ಮಿಣೀದೇವಿಯ ಆಲಯವಿದೆ. ಈ ಆಲಯ ರುಕ್ಮಿಣೀದೇವಿ. ಭಕ್ತಿಶ್ರದ್ಧೆಗಳಿಗೆ ಒಂದು ನಿದರ್ಶನವಾಗಿ ಪ್ರಸಿದ್ಧವಾಯಿತು. ಈ ಗೌರವ ಸತ್ಯಭಾಮಾದೇವಿ ಪಡೆಯಲಿಲ್ಲ. ಈ ಆಲಯದಲ್ಲಿ ರುಕ್ಮಿಣೀದೇವಿ ಸೀತಾದೇವಿಯಿಂದಲೇ ಸಾಕ್ಷಾತ್ಕರಿಸಿದ್ದರಿಂದ ಸೌಂದರ್ಯವಲ್ಲಿಯಾಗಿ ಹೆಸರನ್ನು ಪಡೆದಳು.

ಪ್ರಧಾನ ದೇವಾಲಯದ ಹಿಂದೆಗಡೆ ಗಂಭೀರವಾದ, ಎತ್ತರವಾದ 9 1/2 ಅಡಿಯ ಜಾಂಬವಂತನ ವಿಗ್ರಹದೊಂದಿಗೆ ಒಂದು ಆಲಯವು ನಿರ್ಮಿತವಾಗಿದೆ. ಈ ಪುಣ್ಯ ಕ್ಷೇತ್ರಕ್ಕೆ ಜಾಂಬವಂತನು ಕ್ಷೇತ್ರಪಾಲಕನು.

ಪ್ರಧಾನ ದೇವಾಲಯದ ಎಡಗಡೆ ಶ್ರೀ ಸೀತಾಲಕ್ಷ್ಮಣ ಸಮೇತನಾಗಿ ಶ್ರೀಕೋದಂಡ ರಾಮಸ್ವಾಮಿಗೆ ಬೇರೆ ಧ್ವಜಸ್ತಂಭದ ಜೊತೆಗೆ ಒಂದು ಆಲಯ ನಿರ್ಮಿಸಲಾಗಿದೆ. ಇದು ಶ್ರೀ ಕೃಷ್ಣನು ಜಾಂಬವಂತನಿಗೆ ಶ್ರೀ ಸೀತಾಸಮೇತ ಕೋದಂಡರಾಮಸ್ವಾಮಿಯಾಗಿ ದರ್ಶನ ನೀಡಿದನು ಎಂಬುದಕ್ಕೆ ನಿದರ್ಶನ. ಒಂದೇ ಆಲಯ ಪ್ರಾಂಗಣದಲ್ಲಿ ಶ್ರೀಕೃಷ್ಣ, ಶ್ರೀ ರಾಮಮಂದಿರಗಳು ಬೇರೆ ಬೇರೆ ಧ್ವಜಸ್ತಂಭಗಳಿಂದ ಇರುವುದು ಮತ್ತೆಲ್ಲಿ ಕಾಣುವುದಿಲ್ಲ. ಈ ದೇವಾಲಯ ಶ್ರೀ ಕೃಷ್ಣ, ಶ್ರೀರಾಮಾವತಾರ ಸಂಗಮಕ್ಕೆ ಒಂದು ನಿದರ್ಶನ.

ಮೂಲ ವಿಗ್ರಹ ದ್ವಾರಪಾಲಕರೊಂದಿಗೆ ಸುಗ್ರೀವ, ಜಟಾಯುವು ವಿಗ್ರಹವಿರುವುದರಿಂದ ಈ ಪುಣ್ಯ ಕ್ಷೇತ್ರವು ಜಗತ್‌ಪ್ರಸಿದ್ಧಿ ಪಡೆದಿದೆ.

ಈ ದೇವಾಲಯದಲ್ಲಿ ಶ್ರೀ ಆಂಡಾಳ್, ಶ್ರೀ ಆಂಜನೇಯಸ್ವಾಮಿ, ಶ್ರೀ ವೆಂಕಟೇಶ್ವರಸ್ವಾಮಿ, ಶ್ರೀರಾಮಾನುಜ ಸ್ವಾಮಿ ಮತ್ತು ಹನ್ನೆರಡು ಜನ ಆಳ್ವಾರರಿಂದ ಬಿಡಿ ಬಿಡಿಯಾಗಿ ಸನ್ನಿಧಿಗಳು ಇರುವುದರಿಂದ ಈ ದೇವಾಲಯವು ಹೆಸರು ಪಡೆದ ವೈಷ್ಣವಕ್ಷೇತ್ರವೆಂದು ಗುರುತಿಸಲಾಗಿದೆ.

ಈ ದೇವಾಲಯದ ವಿಮಾನಗೋಪುರವು ತಿರುಪತಿ ಶ್ರೀ ವೆಂಕಟೇಶ್ವರಸ್ವಾಮಿಯವರ ಗೋಪುರದ ಹೋಲಿಕೆಯನ್ನು ಪಡೆದಿದೆ. ಶ್ರೀ ವೈಷ್ಣವ ದೇವಾಲಯ ವಿಮಾನ ಗೋಪುರದಲ್ಲಿ ಸಾಧಾರಣವಾಗಿ ಗರುಡಗೊಂಬೆಗಳಿರುತ್ತದೆ. ಆದರೆ ಇಲ್ಲಿ ತಿರುಪತಿ ಶ್ರೀ ವೆಂಕಟೇಶ್ವರ ದೇವಾಲಯದಲ್ಲಿಯೇ ಸಿಂಹದ ಗೊಂಬೆಗಳು ಇರುವುದು ಮತ್ತೊಂದು ವಿಶೇಷ,

ಮನುಮಸಿದ್ಧಿಕಾಲದಲ್ಲಿ ಈ ದೇವಾಲಯದಲ್ಲಿ ಎಷ್ಟೋ ವೈಭವಗಳನ್ನು ಕಿವಿಗುಟ್ಟುವ ತರಹ ಚರಿತ್ರೆ ತಿಳಿಸುತ್ತದೆ. 16 ನೇ ಶತಮಾನದಲ್ಲಿ ಸೇರಿದ ವೆಂಕಟ ನರಸಿಂಹಕವಿ ಶ್ರೀ ಮನ್ನಾರಿ ಕೃಷ್ಣಶತಕಂ, ಶ್ರೀ ರಾಮಚಂದ್ರ ಶತಕಂ ಎನ್ನುವ 2 ಶತಕಗಳನ್ನು ಬರೆದು ಶ್ರೀ ಕೃಷ್ಣನಿಗೆ ಅಂಕಿತ ಮಾಡಿದ ಹಾಗೆ ತಿಳಿದುಬರುತ್ತಿದೆ. ಹಾಗೆಯೇ ಅಯ್ಯಲರಾಯಲ ನಾರಾಯಣಕವಿ ತನ್ನ ಹಂಸವಿಂಶತಿ ಎನ್ನುವ ಕಾವ್ಯದಲ್ಲಿ 4ನೇ ಅಧ್ಯಾಯದಲ್ಲಿ ಈ ದೇವಾಲಯ ಪ್ರಧಾನದೇವನಾದ ಮಲ್ಲಾಲಿಕೃಷ್ಣ ಸ್ವಾಮಿಗೆ ಗೋವಿಂದನಾಗಿ ವರ್ಣಿಸಿದರು. ಐದನೇಯ ಅಧ್ಯಾಯದಲ್ಲಿ ಚಿದಂಬರಂ, ತಿರುತ್ತಣಿ, ಕಾಳಹಸ್ತಿ ನಂತಹ ಪುಣ್ಯಕ್ಷೇತ್ರಗಳೊಂದಿಗೆ ಸಮಾನತೆಯನ್ನು ಕಲ್ಪಿಸಿ ತಮ್ಮ ಕಾವ್ಯದಲ್ಲಿ ಮಣಿಮಂಡಪ ಕ್ಷೇತ್ರವನ್ನು ಮನ್ನಾರು ಪೋಲೂರು ಬಗ್ಗೆ ಕೂಡ ಬರೆಯಲ್ಪಟ್ಟಿದೆ.

ಪ್ರಧಾನ ಆಲಯದಲ್ಲಿ ದ್ವಾರಪಾಲಕರ ಪಕ್ಕದಲ್ಲೇ ಸುಗ್ರೀವ,ಜಟಾಯು ವಿಗ್ರಹಗಳು ಪ್ರತಿಷ್ಠಿಸಲಾಗಿದೆ. ಸನ್ನಿಧಿ ವಿಧಿಯಲ್ಲಿ ಸ್ವಾಮಿ ಆಲಯಕ್ಕೆ ಎದುರುಗಡೆ ಭಕ್ತಾಂಜನೇಯಸ್ವಾಮಿ ಪ್ರತ್ಯೇಕ ಆಲಯದಲ್ಲಿ ಪ್ರತಿಷ್ಠಿಸಲಾಗಿದೆ. ದೀರ್ಘವಾದ ಮುಖಮಂಟಪ,ವಿಶಾಲವಾದ ಮಹಾಮಂಟಪವು, ಕಣ್ಣಿಗೆ ಶೋಭಿತವಾಗಿರುವ ಕಲ್ಯಾಣ ಮಂಡಪವು, ಪ್ರಾಚೀನ ಶಿಲ್ಪಕಳಾ ಔನ್ನತ್ಯದಲ್ಲಿ ನಿರ್ಮಿಸಲಾದ ಪ್ರಧಾನ ರಾಜಗೋಪುರವು, ಎದುರಿಗೆ ಉಟ್ಲ ಮಂಡಪವು, ಆಲಯಕ್ಕೆ ಪೂರ್ವಕ್ಕೆ ಅಭಿಮುಖವಾಗಿ ಎರಡು ಎಕರೆ ವಿಸ್ತೀರ್ಣದ ಪುಷ್ಕರಿಣಿ ಇದೆ.ಈ ಪುಷ್ಕರಣಿಯಲ್ಲಿ ಆಗಿನ ಕಾಲದಲ್ಲಿ ಮೇಳ ತಾಳಗಳು, ಛತ್ರಚಾಮರಗಳು, ವೇದ ಮಂತ್ರ ಪಠನೆಯಿಂದ, ಶಾಸ್ತ್ರೋಕ್ತಪದ್ಧತಿಯಲ್ಲಿ ಪುಷ್ಕರಿಣಿ ತೀರ್ಥವು ತೆಗೆದುಕೊಂಡು ಹೋಗಿ ಪ್ರತಿದಿನ ಬೆಳಗ್ಗಿನ ವೇಳೆಯಲ್ಲಿ ಸ್ವಾಮಿಯವರ ತಿರುಮಂಜನವು ನಡೆಸಲಾಗುತ್ತಿತ್ತು.

ಈ ಆಲಯ ಪ್ರಾಂಗಣದಲ್ಲಿ ಮೂಲ ವಿರಾಟನು ಈಶಾನ್ಯದಿಶೆಯಲ್ಲಿ ಒಂದು ಭೂಗೃಹ ಇದೆ. ಆ ಗುಹೆ ಒಳಗೆ ಪ್ರಾಚೀನ ಶಿಲ್ಪಕಳಾನೈಪುಣ್ಯದಲ್ಲಿ ನೆಲಸಿದ ಮೂರು ಶಿಲಾ ದ್ವಾರಗಳ ಒಳಗೆ ಒಳ್ಳೆಯ ಮಾರ್ಗ ಹೊಂದಿ ಆ ಮೇಲೆ ಅಂಧಕಾರದಿಂದ ಇದ್ದ ಮಾರ್ಗ ಹಾಗೂ ಅಲ್ಲಿಂದ ಅಗೋಚರವಾಗಿ ಆಗಿನ ಕಾಲದ ಆಲಯ ನಿರ್ವಾಹಕರ ಕೈಯಲ್ಲಿ ಆ ಗುಹೆ ಪರಿಶೋಧನೆಯಲ್ಲಿ ಹೇಳಿ ಬಿಲದ್ವಾರವನ್ನು ತಾತ್ಕಾಲಿಕವಾಗಿ ಮುಚ್ಚಿಬಿಟ್ಟರು. ಈ ಗುಹೆ ಜಾಂಬವಂತನ ನಿವಾಸಸ್ಥಳ ಇರಬಹುದು ಎಂದು ಸ್ಥಾನಿಕರ ಅಭಿಪ್ರಾಯ.

16 ನೇ ಶತಮಾನದಲ್ಲಿ ಈ ಆಲಯ ವೆಂಕಟಗಿರಿ ಜಮೀನ್ದಾರರ ಪಾಲನೆಯಲ್ಲಿ ಇದ್ದರೆಂದು ಈ ಆಲಯ ಪ್ರಾಮುಖ್ಯತೆಯನ್ನು ಗುರುತಿಸಿದ ಜಮೀನ್ದಾರರು 1477 ಎಕರೆ ವಿಸ್ತೀರ್ಣ ಹೊಂದಿದ ಐದು ಗ್ರಾಮಗಳನ್ನು ಸಮರ್ಪಿಸಿದಂತೆ ಶಾಸನದಲ್ಲಿದೆ. ಆ ದಿನಗಳಲ್ಲಿ ಜಮೀನುದಾರರು ಅಧಿಪತ್ಯದಲ್ಲಿ ಮನ್ನಾರುಪೋಲೂರು ತಹಸೀಲ್‌ದಾರರು ಪರಿವೀಕ್ಷಣೆಯಲ್ಲಿ ಒಂಭತ್ತು ಜನ ಅರ್ಚಕರು ಒಂಭತ್ತು ವೇಳೆಯಲ್ಲಿ ಪ್ರತಿದಿನ ಅರ್ಚನೆಯನ್ನು ನಡೆಸಿ, ನಿವೇದನೆಯನ್ನು ಸಮರ್ಪಿಸಲಾಗುತ್ತಿತ್ತು, ಇನ್ನು ಅಧ್ಯಾಪಕ ವೇದಪಂಡಿತರು, ಭಜಂತ್ರಿಗಳು, ದಾಸದಾಸಿಯರು, ಎಲ್ಲ ವೃತ್ತಿಯವರು, ಸುಮಾರು ಸಾವಿರ ಜನಕ್ಕೂ ಮೇಲೆ ಈ ಆಲಯದಲ್ಲಿ ಸ್ವಾಮಿಸೇವೆಯನ್ನು ಮಾಡಿ ಆಲಯದ ಮೇಲೆ ಆಧಾರವಾಗಿ ಇರುತ್ತಿದ್ದರೆಂದು ತಿಳಿದು ಬರುತ್ತದೆ. ವೈಷ್ಣವ ಭಕ್ತರುಗಳು ಹನ್ನೆರಡು ಆಳ್ವಾರರು ಸುತ್ತಿಸಲಾದ ಕ್ಷೇತ್ರಗಳಲ್ಲಿ ಈ ಕ್ಷೇತ್ರವು ಒಂದಾಗಿ ಹೆಸರನ್ನು ಪಡೆದಿರುವುದು ವಿಶೇಷ.

ವೈಷ್ಣವ ಸಂಪ್ರದಾಯವನ್ನು ಅನುಸರಿಸಿ ಇಲ್ಲಿ ಉತ್ಸವಗಳು, ನಿತ್ಯ, ವಾರ,ಪಕ್ಷ, ಮಾಸ, ವಾರ್ಷಿಕ ಉತ್ಸವಗಳು ನಡೆಯುತ್ತದೆ. ನಿತ್ಯವೂ ಸುಪ್ರಭಾತದಿಂದ ಮೊದಲಾಗಿ ಏಕಾಂತಸೇವೆವರೆಗೂ ಘಂಟಾ ನಿವೇದನೆಗಳು ನಡೆಯಲಾಗುತ್ತದೆ. ಅನೇಕ ತರಹದ ನೈವೇದ್ಯಾಗಳನ್ನು ಆಯಾ ಸಂದರ್ಭದಲ್ಲಿ ಸ್ವಾಮಿಯವರಿಗೆ ನಿವೇದಿಸಲಾಗುತ್ತದೆ.

ಕೃಷ್ಣನೇ ಆದರೂ ರಾಮನಾಗಿ ಆದ್ದರಿಂದ ಸೀತಾರಾಮನ ತರ ಆಂಜನೇಯಸ್ವಾಮಿಗೆ ದರ್ಶನವನ್ನು ನೀಡಿ, ಸತ್ಯಭಾಮಾ, ಗರುತ್ಮಂತನು ಇಬ್ಬರಿಗೆ ಗರ್ವಭಂಗ ಕಲ್ಪಿಸಿ, ತನ್ನ ಭಕ್ತನಾದ ಆಂಜನೇಯನಿಗೆ ತನ್ನ ಮೇಲೆ ಇದ್ದ ಅಚಲ ಭಕ್ತಿ ವಿಶ್ವಾಸವನ್ನು ಲೋಕಕ್ಕೆ ಆದರ್ಶವಾಗಿ ಪ್ರತಿಮ ಸ್ವಾಮಿಯವರಿಗಿಂತ ಎತ್ತರವಾದ ಎತ್ತಿನಲ್ಲಿ ಇರುವುದರಿಂದ ಈ ಕ್ಷೇತ್ರವು ಪ್ರಮುಖವಾಗಿದೆ.

ಇಂತಹ ಪ್ರಸಿದ್ಧ ವಿಶೇಷ ಪ್ರಾಶಸ್ತ್ಯವನ್ನು ಶ್ರೀ ಅಳಘು ಮಲ್ಲಾರಿ ಕೃಷ್ಣಸ್ವಾಮಿಯವರನ್ನು ದರ್ಶಿಸಿ ಪುನೀತರಾಗೋಣ.



# ವಿಜಯದ ಜೀವನಾಡಿ

ಡಾ|| ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್. ಭೂಮಿಕ

ವಿಜಯವನ್ನು ಸಾಧಿಸಬೇಕೆಂದು ಪ್ರತಿಯೊಬ್ಬನಿಗೂ ಅನಿಸುತ್ತದೆ. ಪ್ರಮುಖವಾಗಿ ಪ್ರತಿ ವಿದ್ಯಾರ್ಥಿಗೆ ತಾನು ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿ ಉತ್ತೀರ್ಣನಾಗಬೇಕೆಂದು, ಅತ್ಯಧಿಕವಾದ ಅಂಕಗಳು ತನ್ನದಾಗಬೇಕೆಂದು ಕೋರಿಕೊಳ್ಳುತ್ತಾನೆ. ವಿಜಯ ಪ್ರಾಪ್ತಿಯ ಬಯಕೆ ಸಹಜವಾದುದು. ಆದರೆ ವಿಜಯವೆನ್ನುವುದು ಎಲ್ಲರಿಗೂ ಲಭಿಸುವುದಿಲ್ಲ. ಹಲವರಿಗೆ ಮಾತ್ರ ಬಯಸಿದ ರೀತಿಯಲ್ಲಿ ವಿಜಯವು ಲಭಿಸುತ್ತದೆ. ಬಯಸಿದಷ್ಟು ಬಯಸಿದ ರೀತಿಯಲ್ಲಿ ವಿಜಯವು ಲಭಿಸಬೇಕೆಂದರೆ ಏನು ಮಾಡಬೇಕು? ಕೋರಿದಷ್ಟು ವಿಜಯವು ಲಭಿಸುವುದಕ್ಕೆ ಕಾರಣವೇನು? ಈ ಪ್ರಶ್ನೆಗೆ ಉಚಿತವಾದ ಉತ್ತರವನ್ನು ಕೊಡುವುದೇ ಈ ಭಗವದ್ಗೀತೆ. ವಾಸ್ತವದಲ್ಲಿ ವಿಜಯಕ್ಕೆ ಜೀವನಾಡಿ ಯಾವುದೋ ಗೀತಾ ಜ್ಞಾನವು ಸೂಕ್ತವಾಗಿ ವಿವರಿಸುತ್ತದೆ. ಈ ವಿಷಯದಲ್ಲಿ ಗೀತಾಚಾರ್ಯರು ಒಂದು ರಹಸ್ಯವನ್ನು ಹೇಳುತ್ತಾ "ತೀವ್ರವಾದ ಗಾಳಿಯಿಂದ ನೀರಿನಲ್ಲಿನ ನಾವೆ ಹೊಡೆದು ಕೊಂಡು ಹೋಗುವಂತೆ ಮನಸ್ಸು ಕ್ಷುಬ್ಧಗೊಂಡಾಗ ಕಾರ್ಯಗತವಾದ ಇಂದ್ರಿಯವಾದರೂ ಸರಿ ಮನುಷ್ಯನ ಬುದ್ಧಿಯನ್ನು ಹರಿಸುತ್ತದೆ."

(ಭಗವದ್ಗೀತೆ 2.67)

ಈ ಗೀತೋಪದೇಶದಲ್ಲಿ ಶ್ರೀ ಕೃಷ್ಣಭಗವಾನನು ವಿಜಯದ ಜೀವನಾಡಿಯ ಬಗ್ಗೆ ತಿಳಿಸಿದ್ದಾನೆ. ಸಮುದ್ರದಲ್ಲಿ ನಾವೆಯು ಸರಾಗವಾಗಿ ನಡೆಯ ಬೇಕೆಂದರೆ ಅಲೆಗಳು ಪ್ರಶಾಂತವಾಗಿರಬೇಕು. ಎತ್ತರಕ್ಕೇಳುವ ಅಲೆಗಳು ನಾವೆಯನ್ನು ಅಲ್ಲೋಲಕಲ್ಲೋಲ ಮಾಡುತ್ತವೆ. ನಾವು ಕಾರ್ಯದಲ್ಲಿ ವಿಜಯವನ್ನು ಸಾಧಿಸಬೇಕೆಂದರೆ ಇಂದ್ರಿಯಗಳ ಮುಖೇನೆ ಅಂದರೆ ದೇಹದ ಮೂಲಕವೇ ಕೆಲಸ ಮಾಡಬೇಕು. ಕಾಲು, ಕೈ, ಹೊಟ್ಟೆ, ಜನನಾಂಗ, ಗುದಗಳೆಂಬುವವು ಕರ್ಮೇಂದ್ರೀಯಗಳು. ಅಲ್ಲದೇ ಕಣ್ಣು, ಕಿವಿಗಳು, ಮೂಗು, ಸ್ಪರ್ಶ, ನಾಲಿಗೆ ಎಂಬುವುವು ಜ್ಞಾನೇಂದ್ರಿಯಗಳು. ಇವೆಲ್ಲಾ ಕಲೆತರೆ ದೇಹವು, ಆದರೆ ಇಂದ್ರಿಯಗಳಲ್ಲಿ ಯಾವುದಾದರೂ ಒಂದಾದರೂ ಯಾವುದೇ ಇಂದ್ರಿಯಭೋಗ ವಿಷಯಕ್ಕೆ ತಗುಲು ಹಾಕಿಕೊಂಡರೆ ಮುಗಿಯಿತು- ಮನುಷ್ಯನ ಪತನವು ತಪ್ಪುವುದಿಲ್ಲ. ಆತನ ವಿಜಯಾವಕಾಶ ಪೂರ್ಣವಾಗಿ ಮುಚ್ಚಿ ಹೋಗುತ್ತದೆ. ನಿಜದಲ್ಲಿ ಅನೇಕ ಜಂತುಗಳಿಗೆ ಒಂದು ಅಂಗ ಮಾತ್ರ ಪ್ರಬಲವಾಗಿರುತ್ತದೆ. ಅದೇ ಅದರ ಬಲಹೀನತೆಗೂ ಕಾರಣವಾಗುತ್ತದೆ. ಉದಾಹರಣೆಗೆ ಜಿಂಕೆಗೆ ಸಂಗೀತವೆಂದರೆ ಇಷ್ಟ. ಬೇಟೆಗಾರನು ಉತ್ತಮವಾದ ಸಂಗೀತವನ್ನು ನುಡಿಸುತ್ತಲೇ ಅದು ಕದಲದೆ ನಿಂದು ಹೋಗುತ್ತದೆ. ಆಗ ಅವನು ಅದನ್ನು ಸುಲಭವಾಗಿ ಬೇಟೆಯಾಡುತ್ತಾನೆ. ಅಗ್ನಿಯನ್ನು ನೋಡುತ್ತಲೇ ಮಿಡತೆಗಳು ಆಕರ್ಷಿತವಾಗುತ್ತವೆ. ರಾಶಿರಾಶಿಯಾಗಿ ಬಂದು ಅಗ್ನಿಯಲ್ಲಿ ಬಿದ್ದು ಬೂದಿಯಾಗುತ್ತವೆ. ಮೀನಿಗೆ ನಾಲಿಗೆಯ ಮೇಲೆ ಹತೋಟಿಯಿರುವುದಿಲ್ಲ. ಅದಕ್ಕೇ ಅದು ಮೀನುಗಾರನ ಗಾಳಕ್ಕೆ ಬಲಿಯಾಗುತ್ತದೆ. ಈ ರೀತಿಯಲ್ಲಿ ಬಗೆಬಗೆಯ ಜಂತುಗಳು ಕೇವಲ ಒಂದು ಇಂದ್ರಿಯದಿಂದಲೇ ಪ್ರಮಾದದಲ್ಲಿ ಸಿಲುಕಿ ಬಿಡುತ್ತದೆ. ಇನ್ನು ಮನುಷ್ಯ ಎಲ್ಲಾ ಇಂದ್ರಿಯಗಳಿಗೆ ಮಾರು ಹೋದರೆ ವಿಜಯ ಹೇಗೆ ಸಿಗಬೇಕು? ಆತನು ಪತನ ಹೊಂದದೇ ಮತ್ತೆ ಹೇಗಿರುವನು?

ವಿಜಯವನ್ನು ಕೋರುವ ವಿದ್ಯಾರ್ಥಿ ಕಬಡ್ಡಿ ಆಟವನ್ನು ಆಡುವ ಜ್ಞಾನವನ್ನು ತಿಳಿದುಕೊಳ್ಳಬೇಕು. ಕಬಡ್ಡಿ ಆಟ ಇಂದಿನಕಾಲದಲ್ಲಿ ಪ್ರಪಂಚ ಪ್ರಖ್ಯಾತಿಯನ್ನು ಸಹಾ ಹೊಂದಿದೆ. ಇದರಲ್ಲಿ ಒಂದು ತಂಡದ ಆಟಗಾರನು ಬೇರೆ ತಂಡದ ಮೈದಾನದಲ್ಲಿ ತೆರಳಿ ಅಲ್ಲಿ ಯಾರಾದ

ರೊಬ್ಬರನ್ನು ತಾಗಿ ಸುರಕ್ಷಿತವಾಗಿ ಹಿಂತಿರುಗಿ ಬರಬೇಕು. ಆಗ ಅಂಕಗಳು ಬರುತ್ತವೆ. ಈ ಕ್ರೀಡಾ ಪಟುವನ್ನು ಎದುರು ತಂಡದವರು ಯಾರಾದರೂ ತಾಗಿದರೆ ಅವರು 'ಔಟ್' ಆದ ಹಾಗೆ. ಒಂದೊಂದು ಬಾರಿ ಕ್ರೀಡಾಪಟು ಎದುರಾಳಿಯ ಮೈದಾನದಲ್ಲಿ ಹೋಗುತ್ತಲೇ ಆರೇಳು ಮಂದಿ ಒಂದೇ ಬಾರಿ ಅವನ ಮೇಲೆ ಬಿದ್ದು ಗಟ್ಟಿಯಾಗಿ ಹಿಡಿದು ಕೊಳ್ಳುತ್ತಾರೆ. ಅವನು ಎಷ್ಟು ಬಿಡಿಸಿಕೊಂಡರೂ ಪ್ರಯೋಜನವೇ ಇರುವುದಿಲ್ಲ. ಇನ್ನು ಆ ಆಟಗಾರ 'ಔಟ್' ಆದಂತೆಯೇ, ಯಾವುದೇ ವಿದ್ಯಾರ್ಥಿ ತನ್ನ ಜೀವನದಲ್ಲಿ ಜಯಗಳಿಸ ಬೇಕೆಂದರೆ ಆ ವಿಷಯವನ್ನು ಜಾಗ್ರತೆಯಾಗಿ ಗಮನಿಸಿ ತನ್ನ ಇಂದ್ರಿಯಗಳೆನ್ನೆಲ್ಲಾ ತನ್ನನ್ನು ಹಿಡಿದಿಡದಂತೆ ನೋಡಿ ಕೊಳ್ಳಬೇಕು. ಎದುರಾಳಿಯ ಮೈದಾನಕ್ಕೆ ಹೋಗುವ ಆಟ ಗಾರ ಅನಾಯಾಸವಾಗಿ ಒಂದೊಂದೇ ಆಟಗಾರನನ್ನು ಔಟ್ ಮಾಡಿ ಹಿಂತಿರುಗಿ ಬರುವಂತೆ ವಿದ್ಯಾರ್ಥಿಗಳು ಎಲ್ಲಾ ಇಂದ್ರಿಯಗಳನ್ನು ಕ್ರಮೇಣ ವಶದಲ್ಲಿಟ್ಟು ಕೊಳ್ಳಬೇಕು. ಆಗ ಆ ಇಂದ್ರಿಯಗಳೆಲ್ಲಾ ವಿಜಯ ಸಾಧನೆಯಲ್ಲಿ ಉತ್ತಮವಾದ ಸಹಕಾರವನ್ನು ನೀಡಿ ಮಹೋನ್ನತ ಫಲಿತವನ್ನು ನೀಡುತ್ತವೆ.

ಆದರೆ ಇಂದಿನ ಜೀವನಗತಿ ಕಬಡ್ಡಿ ಆಟಕ್ಕಿಂತಲೂ ದುಸ್ತರವಾಗಿದೆ. ಕಬ್ಬಡ್ಡಿ ಅದರಲ್ಲಿ ಆಟಗಾರನನ್ನು ಎದುರು ತಂಡದ ಆರು ಆಟಗಾರರು ಒಂದೇ ಕಡೆಗೆ ಎಳೆಯುತ್ತಾರೆ. ಆಗ ಆಟಗಾರರು ಸೋತು ಹೋದರೂ ಪ್ರಾಣವೇನೂ ಹೋಗುವುದಿಲ್ಲ. ಒಂದು ವೇಳೆ ಆ ಆಟಗಾರನನ್ನು ಎಲ್ಲರೂ ತಲೆ ಕಡೆಗೆ ಹಿಡಿದೆಳೆದರೆ ಪ್ರಾಣವೇ ಹೊರಟು ಹೋಗುತ್ತದೆ. ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳ ಜೀವನದ ಪರಿಸ್ಥಿತಿಯೂ ಥೇಟ್ ಅದರ ಹಾಗೆಯೇ ಇದೆ. ಪುಸ್ತಕಗಳನ್ನು ಮುಂದಿಟ್ಟು ಕೊಂಡು ಓದಲು ಕುಳಿತರೆ ಮೊಬೈಲ್ ಫೋನ್ ಒಂದು ಕಡೆ ಯಿಂದ ಹಿಡಿದೆಳೆಯುತ್ತದೆ. ವಾಟ್ಸಾಪ್ ಫೋಟೋಗಳು ಆತನ ಕಣ್ಣುಗಳನ್ನು ಇನ್ನೊಂದು ಕಡೆಗೆ ಎಳೆಯುತ್ತವೆ. ಫಾಸ್ಟ್‌ಫುಡ್ ಆತನ ನಾಲಿಗೆಯನ್ನು ಇನ್ನೊಂದೆಡೆಗೆ ಎಳೆಯುತ್ತದೆ. ಗರ್ಲ್‌ಫ್ರೆಂಡ್ ಆತನ ಚರ್ಮವನ್ನು ಸೆಳೆಯುತ್ತದೆ. ಇದು ನಿಜವಾಗಿಯೂ ವಿದ್ಯಾರ್ಥಿ ಯುವತಿಯರಿಗೆ ಅತ್ಯಂತ ಪ್ರಮಾದಕರವಾದ ಪರಿಸ್ಥಿತಿ. ಆದ್ದರಿಂದ ವಿದ್ಯಾರ್ಥಿಗಳು ಗೀತಾ ಸಂದೇಶವನ್ನು ಜಾಗ್ರತೆಯಾಗಿ ಗಮನಿಸಿ ಜೀವನದಲ್ಲಿ ಸಫಲೀಕೃತರಾದ ಹಿರಿಯರನ್ನು ಆದರ್ಶ ಪ್ರಾಯರನ್ನಾಗಿಟ್ಟು ಕೊಂಡು ಒಂದೊಂದೇ ಇಂದ್ರಿಯಗಳನ್ನು ನಿಯಂತ್ರಿಸುತ್ತಾ ಸುರಕ್ಷಿತವಾಗಿ ಮುಂದಕ್ಕೆ ಬರಬೇಕು. ಅಂತಹ ಸಾವಧಾನ ವಾದ ವಿದ್ಯಾರ್ಥಿಗೆ ವಿಜಯವು ನಿಶ್ಚಯವಾಗಿ ಉಂಟಾಗುತ್ತದೆ. ಅಂದರೆ ಇಂದ್ರಿಯನಿಗ್ರಹವೇ ವಿಜಯ ಸಾಧನೆಯ ಜೀವನಾಡಿ ಯಾಗಿದೆ.


**ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.**

ತಿರುಮಲೆ ತಿರುಪತಿ ದೇವಸ್ಥಾನಗಳು

**ಟೋಲ್ ಫ್ರಿ ನಂಬರ್**

**18004254141**

**ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.**

**ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!**

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**



# ವ್ಯಾಧಿಗಳಿಗೆ ಬ್ರಹ್ಮಾಸ್ತ್ರ ಉತ್ತರೇಣಿ

ಮೂಲ. ಡಾ|| ಸಿ. ಮಧುಸೂದನ ಶರ್ಮ
- ಅನುವಾದ : ಶ್ರೀಮತಿ.

ಪಂಚಮವೇದವೆಂದು ಹೇಳಲಾದ ಆಯುರ್ವೇದದಲ್ಲಿ ಈ ಗಿಡಮೂಲಿಕೆ ಅಹಾಮಾರ್ಗ, ಕಿಣಿಹಿ, ಕ್ಷಾರಮಧ್ಯ, ಪ್ರತ್ಯೇಕ ಪುಷ್ಠಿ ಎಂಬ ಸಂಸ್ಕೃತ ನಾಮಗಳಿಂದ ವ್ಯವಹರಿಸಲ್ಪಡುತ್ತದೆ.

ಉತ್ತರೇಣಿ ದೇಶದಾದ್ಯಂತ ಸರ್ವೇಸಾಮಾನ್ಯವಾಗಿ ಬೆಳೆಯುವ ಸಸ್ಯ. ಇಂಚುಮಿಂಚಾಗಿ ಎರಡು ಮೀಟರುಗಳಷ್ಟು ಬೆಳೆಯುವ ಈ ಮೂಲಿಕೆಗೆ ಶಾಸ್ತ್ರೀಯವಾಗಿ 'ಅಭಿರಾಂಥಸ್ ಆಸ್ಪರ್' ಎಂದು ವ್ಯವಹರಿಸುತ್ತಾರೆ. 'ಅಮರಾಂಥೇಸಿ ' ಎಂಬ ಸಸ್ಯ ಕುಟುಂಬಕ್ಕೆ ಹೊಂದಿದ ಇದರ ಕಾಂಡ ಗುಂಡಾಗಿಯೂ,ಎಲೆಗಳು ಸಾಮಾನ್ಯವಾಗಿ ಅಭಿಮುಖ ವಿನ್ಯಾಸದಲ್ಲೂ ಮೂಡಿರುತ್ತವೆ. ಗಾಢವಾದ ಶಾಖೆಗಳಿಂದಲೂ ಅದರ ಮೇಲೆ ಜೀಲಿಗೆಯಂತಹ ಬೀಜಗಳಿಂದ ಕೂಡಿರುತ್ತವೆ.

ಆಂಗ್ಲದಲ್ಲಿ chaff tree ಎಂದು ಕರೆಯಲ್ಪಡುತ್ತದೆ. ತೆಲುಗಿನಲ್ಲಿ ಹಲವಡೆ ಕುಕ್ಕಬೇರ ಆಕು ಎಂದು ಸಹ ಕರೆಯುತ್ತಾರೆ.

ಈ ಮೂಲಿಕೆಯ ಪ್ರತಿಯೊಂದು ಭಾಗಗಳಲ್ಲಿಯೂ ಔಷಧೀಯ ಗುಣಗಳನ್ನು ತುಂಬಿ ಭಗವಂತನು ಮನುಕುಲಕ್ಕೆ ಪ್ರಸಾದಿಸಿದ್ದಾನೆ.

ದೈನಂದಿನ ಜೀವನದಲ್ಲಿ ನಾವೆದುರಿಸುವ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಈ ಉತ್ತರೇಣಿಯನ್ನು ಹೇಗೆ ಔಷಧಿಯಾಗಿ ಬಳಸಬಹುದೆಂದು ಪ್ರಸ್ತುತ ತಿಳಿದುಕೊಳ್ಳೋಣ.

### ಚೇಳಿನ ವಿಷಕ್ಕೆ

ಉತ್ತರೇಣಿ ಎಲೆಗಳನ್ನು ಕುಟ್ಟಿ,ರಸವನ್ನು ಹಿಂಡಿ ಗಾಯದ ಮೇಲೆ ಲೇಪಿಸಿ ಅದೇ ರಸವನ್ನು 5-10 ಮಿ. ಲೀ ರಷ್ಟು ಬಳಕ್ಕೆ ಸೇವಿಸಿದರೆ ಚೇಳು,ಕಟ್ಟಿರುವೆ.ಜೇನುಹುಳಗಳಂತಹ ಕೀಟಗಳು ಕಡಿದಾಗುಂಟಾಗುವ ನೋವು, ಬಾಧೆ, ಉರಿ, ಕೆರತಗಳು ತಗ್ಗಿ ಹೋಗುತ್ತದೆ.

### ದಂತು ಕುಳಿ ಸಮಸ್ಯೆಗೆ

100 ಗ್ರಾಂ ಉತ್ತರೇಣಿ ಕಾಳುಗಳ ಪುಡಿ - 10 ಗ್ರಾಂ ಕರಗಿಸಿದ ಸ್ಪಟಿಕ (ಇದು ಆಯುರ್ವೇದ ಔಷಧಾಲಯಗಳಲ್ಲಿ ಶುಭ್ರ ಭಸ್ಮ ಎಂಬ ಹೆಸರಿನಲ್ಲಿ ದೊರಕುತ್ತದೆ.).10 ಗ್ರಾಂ ಉಪ್ಪು, 1-2 ಉಂಡೆ ಕರ್ಪೂರ ಎಲ್ಲವನ್ನು ಕುಟ್ಟಿಟ್ಟುಕೊಂಡು ಶೀಶೆಯಲ್ಲಿ ಸಂಗ್ರಹಿಸಿಟ್ಟುಕೊಂಡು ದಂತಮಜ್ಜನ ಚೂರ್ಣವಾಗಿ ಬಳಸುತ್ತಿದ್ದರೆ ಹಲ್ಲು ನೋವು, ವಸಡು ಊತ. ವಸಡುಗಳಿಂದ ರಕ್ತಸ್ರಾವ.ದಂತಹುಳು, ಜೀವು ಸೋರುವಿಕೆಯಂತಹ ಸಮಸ್ಯೆಗಳು ಕಡಿಮೆಯಾಗುತ್ತವೆ. ದಂತಗಳು ಸದೃಢತೆಯನ್ನು ಹೊಂದುತ್ತವೆ.

### ಪ್ರೋಸ್ಟೇಟ್ ಗ್ರಂಥಿ ಬಾವಿಗೆ

ಉತ್ತರೇಣಿ ಎಲೆಗಳನ್ನು ಚೆನ್ನಾಗಿ ಒಣಗಿಸಿ ಪುಡಿಮಾಡಿ ಮುಂಜಾನೆ - ಸಂಜೆ ಒಂದು ಬಾರಿಗೆ 1-2 ಗ್ರಾಂ ನಂತೆ ತಕ್ಕಷ್ಟು ಗೋವಿನ ತುಪ್ಪದೊಂದಿಗೆ ಕಲಿಸಿ ಸೇವಿಸುತ್ತಿದ್ದರೆ ಪುರುಷರಲ್ಲಿ ಉಂಟಾಗುವ ಪೌರುಷಗ್ರಂಥಿಯ ಊತ ಕಡಿಮೆಯಾಗಿ ಮೂತ್ರ ವಿಸರ್ಜನೆ ಸರಾಗವಾಗುತ್ತದೆ.

### ಡೊಳ್ಳು ಹೊಟ್ಟೆ ಇಳಿಸಲು

250 ಗ್ರಾಂ ಉತ್ತರೇಣಿ ರಸವನ್ನು 250 ಮಿ.ಲೀ. ಎಳ್ಳೆಣ್ಣೆಯಲ್ಲಿ ಹಾಕಿ ಸಣ್ಣ ನುರಿಯಲ್ಲಿ ರಸವೆಲ್ಲಾ ಇಮರಿ ಎಣ್ಣೆ ಮಾತ್ರ ಉಳಿಯುವಂತೆ ಮರಳಿ, ಕೆಳಗಿಳಿಸಿ, ಬಿಸಿಯಾರಿದ ಬಳಿಕ ಶೋಧಿಸಿ ಸಂಗ್ರಹಿಸಿಟ್ಟು ಕೊಂಡು ದಿನವೂ ಒಂದು ಬಾರಿ ತಕ್ಕಷ್ಟು ಎಣ್ಣೆಯನ್ನು ಹೊಟ್ಟೆಯ ಭಾಗದಲ್ಲಿ ತಿಕ್ಕುತ್ತಿದ್ದು



ಒಂದು ಬಟ್ಟೆಯನ್ನು ಬಿಸಿನೀರಿನಲ್ಲಿ ಅದ್ದಿ, ಹಿಂಡಿ ಚೆನ್ನಾಗಿ ಕಾವು ಕೊಡುತ್ತಿದ್ದರೆ ಹೊಟ್ಟೆಯಲ್ಲಿ ಅಧಿಕವಾಗಿ ಸಂಗ್ರಹಗೊಳ್ಳಬಲ್ಲ ಕೊಬ್ಬು ಕರಗಿ ನಾಜೂಕಾಗುತ್ತದೆ.

**ಕೆಮ್ಮು - ಉಬ್ಬಸಕ್ಕೆ**

ಉತ್ತರೇಣಿ ಚೆಕ್ಕೆಯನ್ನು ಬೇರು ಸಮೇತ ತೆಗೆದುಕೊಂಡು ಒಣಗಿಸಿ, ಸುಟ್ಟು ಬೂದಿ ಮಾಡಿ, ಬಿಸಿಯಾರಿದ ನಂತರ ಜರಡಿ ಹಿಡಿದು ಒಂದು ಸೀಸೆಯಲ್ಲಿ ಶೇಖರಿಸಿಟ್ಟು ಕೊಂಡು ನಿತ್ಯ ಎರಡು ಬಾರಿ, ಒಂದು ಬಾರಿಗೆ ಒಂದು ಗ್ರಾಂ ಬೂದಿಗೆ ತಕ್ಕಷ್ಟು ಜೇನನ್ನು ಕಲಿಸಿ ಸೇವಿಸುತ್ತಿದ್ದರೆ.ಕೆಮ್ಮ ಉಬ್ಬಸ ಕಡಿಮೆಯಾಗುವುದರೊಂದಿಗೆ ಕಫ-ಶ್ಲೇಷ್ಮ ನೀರಾಗಿ ಹೊರಗೆ ಬರುತ್ತದೆ. ಕಲಿಸಿ ಲೇಪನವಾಗಿ ಬಳಸುತ್ತಿದ್ದರೆ, ಕಜ್ಜಿ, ತಾಮರ, ನವೆ, ದದ್ದು, ಕರಿ ಮಚ್ಚೆಗಳು ತಟ್ಟನಂತಹ ಚರ್ಮ ಸಮಸ್ಯೆಗಳು ಕಡಿಮೆಯಾಗುತ್ತದೆ.

**ಕಿವಿಸೋರುವುದಕ್ಕೆ**

ಉತ್ತರೇಣಿ ಬೂದಿಗೆ ಕೊಬ್ಬರಿ ಎಣ್ಣೆಯನ್ನು ಕಲಿಸಿಟ್ಟು ಕೊಂಡು ನಿತ್ಯ 2-3 ಸಾರಿ ಒಂದು ಬಾರಿಗೆ 2 ಅಥವಾ ಮೂರು ಹನಿಗಳನ್ನು ಕಿವಿಯಲ್ಲಿ ಹಾಕುವುದರಿಂದ ಕಿವಿಸೋರುವುದು. ಕಿವಿ ನೋವು ತಗ್ಗುತ್ತವೆ.

**ಕೈಕಾಲು ಬಾವುಗೆ, ಉಬ್ಬರಕ್ಕೆ**

ಒಂದು ಭಾಗ ಉತ್ತರೇಣಿ ಬೂದಿಯನ್ನು ಹದಿನಾರು ಭಾಗ ನೀರಿನಲ್ಲಿ ಕಲಿಸಿ, ನೀರಾಗಿ ಕಲಿಸಿ, ಹಲವು ತಾಸುಗಳು ಹಾಗೆಯೇ ಇಟ್ಟು ಹಿಂಡಿ, ನೀರನ್ನೆಲ್ಲಾ ಸೋಸಿ,ಆ ನೀರೆಲ್ಲಾ ಇಂಗಿ ಹೋಗುವಂತೆ ಮರಳಿಸಿದಲ್ಲಿ ಕೆಳಗೆ ಬಿಳಿ ಪದಾರ್ಥವೊಂದು ಉಳಿಯುತ್ತದೆ. ಅದನ್ನು ಅಹಾಮಾರ್ಗಕ್ಷಾರವೆನ್ನುತ್ತಾರೆ.

ದಿನವೂ ಬೆಳಗ್ಗೆ-ಸಂಜೆ ಒಂದು ಗ್ಲಾಸು ನೀರಿನಲ್ಲಿ 100 ಮೀ. ಲೀ. ನೀರಿನಲ್ಲಿ ಒಂದು ಗ್ರಾಂ ಶುಂಠಿ ಪುಡಿಯನ್ನು ಹಾಕಿ ಸ್ವಲ್ಪ ಹೊತ್ತು ಮರಳಿಸಿ, ಕೆಳಗಿಳಿಸಿ, ಬಿಸಿಯಾರಿದ ನಂತರ 3-4 ಚಿಟಿಕೆಗಳನ್ನು ಈ ಉತ್ತರೇಣಿ ಕ್ಷಾರವನ್ನು ಕಲಿಸಿ ಸೇವಿಸುತ್ತಿದ್ದರೆ ವಿವಿಧ ಬಗೆಯ ಬಾವುಗಳು ತಗ್ಗುತ್ತವೆ.

**ಸ್ತ್ರೀಯರ ಗರ್ಭಾಶಯ ಸಮಸ್ಯೆಗಳಿಗೆ**


ಉತ್ತರೇಣಿ ಸಮೂಲ ಚೂರ್ಣ, ಸ್ಫಟಿಕ, ಬೆಲ್ಲ ಪುಡಿ ಒಂದೊಂದನ್ನು 50 ಗ್ರಾಂ ಹೇಳಿದಂತೆ ಕಲಿಸಿಟ್ಟುಕೊಂಡು ಬೆಳಗ್ಗೆ- ಸಂಜೆ ಬಾರಿಗೆ 2 ಗ್ರಾಂ ಪುಡಿಯನ್ನು 100 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದಲ್ಲಿ ಸ್ತ್ರೀಯರಲ್ಲುಂಟಾಗುವ ಅಧಿಕ ರಕ್ತಸ್ರಾವ ಕಡಿಮೆಯಾಗುತ್ತದೆ. ಗರ್ಭಾಶಯ ಶುದ್ಧಗೊಂಡು ಋತುಚಕ್ರ ಕ್ರಮವಾಗಿ ಜರಗುತ್ತದೆ. ಅಷ್ಟೇ ಅಲ್ಲದೇ, ಈ ಔಷಧವನ್ನು ಇದೇ ರೀತಿಯಲ್ಲಿ ಬಳಸುವುದರಿಂದ ಬಾಯಿ,ಮೂಗು, ಮಲಮೂತ್ರ ದ್ವಾರಗಳಿಂದಾಗುವ ರಕ್ತಸ್ರಾವ ಕೂಡಾ ಕಡಿಮೆಯಾಗುತ್ತದೆ.

**ಚರ್ಮದ ತೊಂದರೆಗಳಿಗೆ**

ಉತ್ತರೇಣಿ ಬೇರಿನ ಪುಡಿ, ಕಾಳಮೆಣಸಿನ ಪುಡಿ ಸಮಾನವಾಗಿ ಕಲಿಸಿಟ್ಟು ಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ 1 ಗ್ರಾಂ ತಕ್ಕಷ್ಟು ಜೇನು ಅಥವಾ ನೀರಿನಲ್ಲಿ ಕಲಿಸಿ ತೆಗೆದು ಕೊಳ್ಳುತ್ತಿದ್ದರೆ ಕಜ್ಜಿ, ತಾಮರ, ದದ್ದು, ಸೋರಿಯಾಸಿಸ್ ನಂತಹ ಚರ್ಮ ತೊಂದರೆಗಳು ಮಾಯಾವಾಗುತ್ತವೆ.

ಒಣಗಿದ ಉತ್ತರೇಣಿ ಸಮೂಲ ಚೂರ್ಣ ಬೇರುಗಳು ಸಹಾ ವರ್ಷಪೂರ್ತಿ ಆಯುರ್ವೇದ ಔಷಧಾಲಯಗಳಲ್ಲಿ ದೊರಕುತ್ತವೆ.

ಹೆಲ್ಮೆಟ್ ತಪ್ಪದೇ ಧರಿಸಬೇಕು



ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.

ಹೆಲ್ಮೆಟ್ ಧರಿಸಿ ವಾಹನ ನಡೆಸಿ

# ದೇವರ ಪೂಜೆ - ಮಂತ್ರ ತಂತ್ರ

- ಬಿ. ಆರ್. ಶ್ರೀಕಂಠಯ್ಯ

ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಸ್ಸನಾತನಃ ತ್ಯಜೇದಜ್ಞಾನಿರ್ಮಾಲ್ಯಮ್ ಸೋಹಂ ಭಾವೇನ ಪೂಜಯೇತ್॥

ಪೂಜಾ ವಿಧಿಯಲ್ಲಿ ಷೋಡಶೋಪಚಾರ ಪೂಜಾ ವಿಧಾನ (ಹದಿನಾರು ವಿಧ) ಆಚರಣೆಯಲ್ಲಿದೆ.

೧ ಧ್ಯಾನ ೨. ಆವಾಹನೆ ೩. ಆಸನ ೪. ಪಾದ್ಯ ೫. ಅರ್ಘ್ಯ ೬. ಆಚಮನ ೭. ಸ್ನಾನ ೮. ವಸ್ತ್ರ ೯. ಯಜ್ಞೋಪವೀತ ೧೦. ಗಂಧ ೧೧. ಪುಷ್ಪ ೧೨. ಧೂಪ ೧೩. ದೀಪ ೧೪. ನೈವೇದ್ಯ ೧೫. ತಾಂಬೂಲ ೧೬. ಉಧ್ವಾಸನ.

ಪೂಜಾವಿಧಿಯಲ್ಲಿ, ಪಂಚಾಮೃತ ಅಭಿಷೇಕಕ್ಕೆ ವಿವಿಧ ವಸ್ತುಗಳನ್ನು ಉಪಯೋಗಿಸುತ್ತೇವೆ. ಇದರ ಪ್ರಯೋಜನ -


ಕ್ಷೀರೇಣ ಕ್ಷೀಯತೇ ಪಾಪಂ ದಧ್ನಾದ್ಧನ ವಿವರ್ಧನಂ।
ಘೃತೇನಾಯುಷ್ಕರಂ ಪ್ರೋಕ್ತಂ ಮಧುನಾಹಂತಿ ಕಲ್ಬಿಷಂ ।
ಶರ್ಕರಾ ಸರ್ವಸಿದ್ಧಿಸ್ಯಾತ್ ಪಂಚಾಮೃತ ಫಲಸ್ಮೃತಂ॥

ಕ್ಷೀರಸ್ನಾನ - ಪಾಪಕ್ಷಯ; ದಧಿಯಿಂದ - ಧನವೃದ್ಧಿ; ಘೃತ - ಆಯುವೃದ್ಧಿ; ಮಧು - ಪಾತಕ ನಾಶ ; ಶರ್ಕರ - ಸರ್ವಸಿದ್ಧಿ.

"ಜಲಂತು ವೃದ್ಧಿ ಸಂತಾನಂ । ಗಂಧಮಾಯುಷ್ಯ ವರ್ಧನಮ್ ।
ಅಕ್ಷತಾದ್ಧರತೇ ಶತೃಃ। ಪುಷ್ಪಮೈಶ್ವರ್ಯಮೇವಚ ।
ಧೂಪೇನ ದಹತೇ ಪಾಪಂ । ದೀಪೋ ಮೃತ್ಯು ವಿನಾಶನಂ।
ನೈವೇದ್ಯೇ ಲಭತೇ ರಾಜ್ಯಂ। ತಾಂಬೂಲೇ ವಿಲಸತ್ಫಲಂ॥

ಇದರ ಉಪಯೋಗದಿಂದ, ವೈಜ್ಞಾನಿಕವಾಗಿ ಮತ್ತು ಪಾರಮಾರ್ಥಕವಾಗಿ ಬಹಳ ಉಪಯೋಗಗಳಿವೆ. ಉದಾಹರಣೆಗೆ, ನೈವೇದ್ಯಕ್ಕೆ ಮುಂಚೆ ಮಾಡುವ ತುಪ್ಪದ ತ್ರಿವರ್ತಿ ಮಂಗಳಾರತಿಯು ನಂತರ ಆರಿಸಿ ಹೊತ್ತಿಸುವಾಗ, ಅದರ ವಾಸನೆಯನ್ನು ಸೇವಿಸಿದರೆ, ಮೂಗಿನಲ್ಲಿ ಉಸಿರಾಟದ ತೊಂದರೆ ನಿವಾರಣೆ ಆಗುವ ಸಾಧ್ಯತೆ ಇದೆ. ಇದರ ಅನುಭವ ಕೆಲವರಿಗೆ ಆಗಿರಬಹುದು. ಕರ್ಪೂರದ ಆರತಿಯು ಕೂಡ, ಆಧ್ಯಾತ್ಮಿಕದ ಹಿನ್ನಲೆಯ ಜೊತೆಗೆ, ಆರತಿಯನ್ನು ಕಣ್ಣಿಗೆ ಒತ್ತಿಕೊಳ್ಳುವ ಉದ್ದೇಶ ಅಥವಾ ಪದ್ಧತಿ ಸುವಾಸನೆಯ ಜೊತೆಗೆ, ಕಣ್ಣಿನ ಆರೋಗ್ಯ ಕಾಪಾಡಲು ಸಹಕಾರಿಯಾಗುತ್ತದೆ.

ಪೂಜೆಗೆ ಕೆಲವು ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಪೂಜೆ ಸಾಮಾಗ್ರಿಗಳಾದ - ನೀರು, ಹೂವು, ಪಂಚಾಮೃತ ವಸ್ತುಗಳು - ಹಾಲು, ಮೊಸರು, ಸಕ್ಕರೆ, ಜೇನು ತುಪ್ಪ, ತುಪ್ಪ, ಧೂಪ, ಕರ್ಪೂರ, ನೈವೇದ್ಯಕ್ಕೆ ಬೇಕಾಗಿರುವ ಹಣ್ಣು ಅಥವಾ ಇತರೆ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ಇಟ್ಟುಕೊಂಡಿರಬೇಕು. ಅರ್ಚನೆಯ ಸಂಖ್ಯೆಗೆ ಅನುಗುಣವಾಗಿ, ಹೂವು, ಪತ್ರೆ, ಕುಂಕುಮ, ಹೆಚ್ಚಾಗಿ ಇಟ್ಟು ಕೊಂಡಿರಬೇಕು. ಜೊತೆಗೆ ಇದರ ಉಪಯೋಗದಿಂದ ಆಗುವ ಪರಿಣಾಮಗಳ ವಿಷಯವಾಗಿ ಸ್ವಲ್ಪ ತಿಳಿದುಕೊಂಡರೆ, ಪೂಜೆಯಲ್ಲಿ ಮತ್ತು ಅರ್ಚನೆಯಲ್ಲಿ ಆಸಕ್ತಿ ಹೆಚ್ಚಾಗುತ್ತದೆ.



ಈ ಅಭಿಷೇಕ ಮಾಡಿದ ತೀರ್ಥವನ್ನು ತೆಗೆದುಕೊಳ್ಳುವುದರಿಂದ ದೇಹದ ಆರೋಗ್ಯಕ್ಕೆ ಒಳ್ಳೆಯದು. ಅಕಾಲ ಮೃತ್ಯು ಇತ್ಯಾದಿ ನಿವಾರಣೆಯಾಗುತ್ತದೆ. ಕಾರಣ ಅಭಿಷೇಕಕ್ಕೆ ಮುಂಚೆ, ಅಭಿಷೇಕದ ವಸ್ತುಗಳು ಸಾಮಾನ್ಯ ವಸ್ತುಳಾಗಿದ್ದವು. ಆದರೆ ದೇವರ ಅಭಿಷೇಕದ ನಂತರ ಅದು ಪವಿತ್ರವಾದ ತೀರ್ಥವಾಗಿ ಪರಿಣಮಿಸಿತು. ಕಾರಣ, ಈ ವಸ್ತುಗಳು ವಿವಿಧ ರೀತಿಯ ಸ್ವರೂಪವಿರುವ, ಪವಿತ್ರವಾದ ಶಿಲೆಗಳ ಮತ್ತು ಸಾಲಿಗ್ರಾಮಗಳ ಮೂಲಕ ಹರಿದು ಬಂದಿದೆ. ಇದರ ಆಧಾರದಿಂದಲೆ, ಈಗ ಹರಳಿನ ಚಿಕಿತ್ಸೆ ಇತ್ಯಾದಿ ಬಳಕೆಗೆ ಬಂದಿದೆ. ಇದೇನು ಹೊಸದಲ್ಲ. ಇದು ಹಿಂದಿನ ಪದ್ಧತಿಯೆ. ಪಂಚಾಮೃತ ರುಚಿಯೆಂದು ಹೆಚ್ಚಿಗೆ ತೆಗೆದು ಕೊಳ್ಳುವ ವಾಡಿಕೆ ಇದೆ, ಆದರೆ ಜಾಸ್ತಿ ತೆಗೆದು ಕೊಳ್ಳಬಾರದು. ಕಾರಣ, ಅದು ಔಷಧಿ? ಟಾನಿಕ್ ಇದ್ದ ಹಾಗೆ, ಪೂಜಾ ಪದ್ಧತಿಯಲ್ಲಿ ಪಂಚಾಯತನ ಪೂಜೆ ರೂಢಿಯಲ್ಲಿದೆ. ಶಿವ ಪಂಚಾಯತನ, ವಿಷ್ಣು ಪಂಚಾಯತನ. ಈ ಪದ್ಧತಿಯನ್ನು ಶ್ರೀ ಶಂಕರರು ಜಾರಿಗೆ ತಂದರು. ವಿಶೇಷ ಸಮಯಗಳಲ್ಲಿ, ಅಭಿಷೇಕವನ್ನು, ಶಿವನಿಗೆ ಗೋಶೃಂಗದಿಂದಲೂ (ಹಸುವಿನ ಕೊಂಬು) ವಿಷ್ಣುವಿಗೆ ಶಂಖದಿಂದಲೂ ಮಾಡುವುದು ರೂಢಿಯಲ್ಲಿದೆ.

ಯಾವ ಕಾರ್ಯವನ್ನು ಮಾಡುವ ಮುಂಚೆ, ನಮ್ಮ ನಿತ್ಯಕರ್ಮಗಳನ್ನು ಮಾಡಿಯೇ ಪೂಜೆ ಪ್ರಾರಂಭಮಾಡಬೇಕು. 'ಭೋ ದೀಪ ಬ್ರಹ್ಮರೂಪೇಣ ಸರ್ವೇಷಾಂ ಹೃದಿಸಂಸ್ಥಿತಃ। ಅತಃ ತ್ವಾಂ ಪ್ರಾರ್ಥಯಾಮ್ಯದ್ಯ ಮದಜ್ಞಾವ್ನುಮಪಾಕುರು।। ದೀಪಗಳನ್ನು ಬೆಳಗಿಸುವುದು,(ಅಜ್ಞಾನವನ್ನು ತೊಲಗಿಸಿ ವಿಜ್ಞಾನವನ್ನು ಬೆಳಗಿಸುವ ದ್ಯೋತಕ - ತಮಸೋಮಾ ಜ್ಯೋತಿರ್ಗಮಯ). ಆಗಮಾರ್ಥಂ ತು ದೇವಾನಾಂ ಗಮನಾರ್ಥಂತು ರಕ್ಷಸಾಮ್। ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಛನಮ್।। (ಅಸುರ ಮತ್ತು ದುಷ್ಟ ಶಕ್ತಿಗಳ ಉಚ್ಚಾಟನೆಗೆ ಘಂಟಾನಾದ ಮಾಡಬೇಕು.

ಆ ದಿನದ ಪಂಚಾಂಗವನ್ನು ಪಠಣೆಮಾಡಿ ಸಂಕಲ್ಪ ಹೇಳಿ ಪೂಜಿಸಬೇಕು. ಇಲ್ಲಿ ಸಂಕಲ್ಪ ಹೇಳುವಾಗ ಸರಿಯಾದ ದಿಕ್ಕಿನಲ್ಲಿ ಕುಳಿತು ಹೇಳಬೇಕು. ಕಲಶ (ವಿವಿಧ ಪೂಜೆಗೆ ವಿವಿಧ ಕಲಶ ಸ್ಥಾಪನೆ ಇದೆ), ಮತ್ತು ಶಂಖ ಪೂಜೆಯನ್ನು ಮಾಡಬೇಕು. ನಂತರ ಆವಾಹನೆ, ದ್ವಾರಪಾಲಕ, ಗಣಪತಿ, ಪೀಠಪೂಜೆ, ಪಂಚಾಮೃತ ಅಭಿಷೇಕ, ವಸ್ತ್ರ, ಗಂಧ, ಪುಷ್ಪ ಇತ್ಯಾದಿ. ನಂತರ ಅರ್ಚನೆಯನ್ನು ಮಾಡಬೇಕು. ಇಲ್ಲಿ ಈಶಾನ್ಯ ಮೂಲೆ ಅಥವಾ ದೇವಮೂಲೆಯಲ್ಲಿ ದೇವರನ್ನು ಇಟ್ಟು ಕೊಂಡು ಪೂಜೆ ಮಾಡುವುದು ಶ್ರೇಯಸ್ಕರ. ಪೂಜಾ ವಿಧಿಯ ಲಕ್ಷಣಗಳನ್ನು ಸ್ವಲ್ಪ ಅರಿತಿದ್ದರೆ ಪೂಜೆಯಲ್ಲಿ ಶ್ರದ್ಧೆ ಹೆಚ್ಚಾಗುತ್ತದೆ. ಇಲ್ಲಿ ಮಂತ್ರಗಳನ್ನು ಸ್ಥಳದ ಅಭಾವದಿಂದ ಕೊಡಲಿಲ್ಲ. ಹಾಗೂ, ಮಂತ್ರಗಳು ಸಂಪ್ರದಾಯಕ್ಕೆ ಅನುಗುಣವಾಗಿ ವ್ಯತ್ಯಾಸವಾಗುತ್ತದೆ. ಇಲ್ಲಿ ಶ್ರದ್ಧೆಯ ಜೊತೆ, ಶಾಸ್ತ್ರದ ಅರಿವು ಇರಬೇಕು. ಅಂದರೆ, ಪೂಜೆಯ ವಿಧಿ ವಿಧಾನಗಳು (ಸಿಸ್ಟಮ್ಸ್). ಯಾರು ಶಾಸ್ತ್ರದ ವಿಧಿ ವಿಧಾನಗಳನ್ನು ಬಿಟ್ಟು ತನ್ನಿಚ್ಛೆ ಬಂದಂತೆ ನಡೆದು ಕೊಳ್ಳುತ್ತಾನೆಯೋ ಅವನು ಸಿದ್ಧಿಯನ್ನು, ಪರಮ ಗತಿಯನ್ನು ಸುಖವನ್ನೂ ಸಹ ಪಡೆಯುವುದಿಲ್ಲ.

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ।
ನ ಸ ಸಿದ್ಧಿ ಮವಾಪ್ನೋತಿ ನ ಸುಖಂ ನ ಪರಾಂಗತಿಮ್ ॥
(ಭಗವದ್ಗೀತೆ 16ಅಧ್ಯಾಯ/23 ಶ್ಲೋಕ)

ಇಲ್ಲಿ ನಾವು ಎಷ್ಟು ಕೆ ಜಿ ಹೂವು ಪೂಜೆ ಮಾಡಿದೆವು ಎಂಬುದು ಮುಖ್ಯವಲ್ಲ. ಇಲ್ಲಿ ಭಕ್ತಿ ಮತ್ತು ಏಕಾಗ್ರತೆಯೆ ಮುಖ್ಯ. ಹಾಗೆ, ದಾರಿಯಲ್ಲಿ, ಬೇರೆಯವರ ಮನೆಯ ಕಾಂಪೌಂಡಿನಿಂದ ಕದ್ದು ತಂದ ಹೂವುಗಳಿಂದ ಪೂಜೆ ಮಾಡಿದರೆ ಏನು ಪ್ರಯೋಜನವಿಲ್ಲ ಎಂಬುದು ತಿಳಿಯಬೇಕು.

ಉತ್ತಮಂ ಗೃಹ ಪುಷ್ಪಾಣಿ ಮಧ್ಯಮಂ ವನ ಪುಷ್ಪಕಂ।
ಅಧಮಂ ಯಾಚಿತಂ ಪುಷ್ಪಂ ಚಾನ್ಯತೋ ನಿಷ್ಪ್ರಯೋಜನಂ॥

ಭಗವದ್ಗೀತೆಯಲ್ಲಿ, ಶ್ರೀ ಕೃಷ್ಣನು ಹೇಳಿರುವುದು ಎಲ್ಲರಿಗೂ ತಿಳಿದಿದೆ. ಯಾವ ಭಕ್ತನು, ಭಕ್ತಿಯಿಂದ ಪತ್ರೆ, ಪುಷ್ಪಗಳನ್ನು, ನನಗೆ ಅರ್ಪಿಸುತ್ತಾನೆಯೋ, ನಾನು ಅವುಗಳನ್ನು ಸಗುಣ ರೂಪದಿಂದ ಸ್ವೀಕರಿಸುತ್ತೇನೆ.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯು ಪಹೃತಮಶ್ನಾಮಿ ಪ್ರಯತಾತ್ಮನಃ॥
(6/ಅಧ್ಯಾಯ 23 - ಶ್ಲೋಕ)

ಕಲಿಯುಗದಲ್ಲಿ ಬಹಳ ಪ್ರಾಮುಖ್ಯತೆಯನ್ನು ಯಜ್ಞ ಮತ್ತು ಹೋಮಕ್ಕಿಂತ " ಅರ್ಚನೆ ಮತ್ತು ಭಜನೆಗೆ" ಕೊಡಲಾಗಿದೆ. ಪೂಜಾ ವಿಧಿಯಲ್ಲಿ, ನಾಮಾರ್ಚನೆ ಬಹಳ ಮುಖ್ಯವಾದುದು. ಈ ನಾಮಾರ್ಚನೆಯಿಂದ, ಮನಸ್ಸಿಗೆ ನೆಮ್ಮದಿ ಮತ್ತು ಶಾಂತಿ ಬರುತ್ತದೆ. ಈಗ ಹಣದ ಅಭಾವ ಸ್ವಲ್ಪ ಮಟ್ಟಿಗೆ ಕಡಿಮೆ ಇದ್ದರೂ, ಶಾಂತಿ ಮತ್ತು ನೆಮ್ಮದಿಯ ಕೊರತೆ ಬಹಳ ವ್ಯಾಪಕವಾಗಿದೆ. ಆದರೆ, ಶಾಂತಿ ಮತ್ತು ನೆಮ್ಮದಿ, ಹೊರಗಡೆ ಸಿಗುವ ವಸ್ತುವೆಂದು ಅದನ್ನು ಹುಡುಕುವ ಹಾದಿಯಲ್ಲಿ ನಾವೆಲ್ಲರೂ ಸುಖದ ಹಿಂದೆ ಓಡುತ್ತಾ ಇದ್ದೇವೆ. ಆದರೆ ಅದು ನಮ್ಮಲ್ಲೇ ಇದೆ ಎಂಬುದನ್ನು ತಿಳಿದುಕೊಳ್ಳಬೇಕು. ಅರ್ಚನೆ/ಪೂಜೆಗೆ ಕಾಲವಿಲ್ಲವೆಂಬ ಸೂತ್ರವನ್ನು ಹೇಳದೆ, ಅದನ್ನು ಪಡೆಯಲು ನಮ್ಮ ನಿತ್ಯ ಅವಧಿಯ ೨೪ ಘಂಟೆಗಳಲ್ಲಿ, ಕನಿಷ್ಟ ಒಂದು ಘಂಟೆಯನ್ನಾದರೂ ಪೂಜೆ, ಅರ್ಚನೆ, ಧ್ಯಾನ, ನಾಮ ಪಾರಾಯಣಗಳಿಗೆ ಮೀಸಲಿಟ್ಟರೆ ಒತ್ತಡ (ಟೆನ್ಷನ್) ಕಡಿಮೆ ಯಾಗಿ, ಮನಸ್ಸಿಗೆ ನೆಮ್ಮದಿ ಮತ್ತು ಶಾಂತಿ ದೊರಕುವುದರಲ್ಲಿ ಸಂಶಯವಿಲ್ಲ ಎಂಬುದು ಸ್ವಾನುಭವ ಮತ್ತು ಎಲ್ಲರ ಅನುಭವ. ವಿವಿಧ ರೀತಿಯ ಪೂಜಾ ವಿಧಿಯನ್ನು, ಆಯಾಯ ವರ್ಗದವರು, ಸಂದರ್ಭಗಳಿಗೆ ಮತ್ತು ಸನ್ನಿವೇಶಗಳನ್ನು ಅನುಸರಿಸಿ ಮಾಡುವ ಪದ್ಧತಿ ಇದೆ. ಲಘುನ್ಯಾಸ, ಮಹಾನ್ಯಾಸ, ವಿವಿಧ ಸೂಕ್ತಾಭಿಷೇಕ, ಇತ್ಯಾದಿ ಏನೇ ಆಗಲಿ, ಪೂಜೆ ಮತ್ತು ಅರ್ಚನೆಯ ಗುರಿ ಮನಸ್ಸಿಗೆ ನೆಮ್ಮದಿ ಮತ್ತು ಶಾಂತಿ ದೊರಕಿಸಿಕೊಳ್ಳುವುದು.

ಮೂರ್ತಿ ಪೂಜೆ ತನ್ನದೇ ಆದ ವಿಧಾನವನ್ನು ಹೊಂದಿದ್ದು, ಮೂರ್ತಿಯಿಂದ ಭಾವನೆಗಳು ಹೊರ ಹೊಮ್ಮುತ್ತವೆ.ಎಲ್ಲಿ ಪೂಜೆ ಮತ್ತು ಆರಾಧನೆ ಮಾಡುವವರು ಭಾವನ ಶೀಲರಾಗಿ ಪೂಜೆ ಮಾಡುತ್ತಾರೋ,ಅಲ್ಲಿ ಮೂರ್ತಿಯಲ್ಲಿ ದಿವ್ಯತೆ ಹೊರಹೊಮ್ಮುತ್ತದೆ.ಇದಕ್ಕೆ ಬೇಕಾದಷ್ಟು ನಿದರ್ಶನಗಳು ಇವೆ ಮತ್ತು ಕೆಲವರಿಗೆ ಅನುಭವ ಆಗಿರಬಹುದು.ನಾಮ ಉಚ್ಚಾರಣೆಯಲ್ಲಿ ಸ್ವಚ್ಛತೆ ಇರಬೇಕು.ಇದರಿಂದ ಸ್ಪಂಧನ (ವೈಬ್ರೇಶನ್) ಬರುತ್ತದೆ. ಅರ್ಚನೆ ಮಾಡುವಾಗ ಮನಸ್ಸಿನಲ್ಲಿನ ಭಾವನೆ ಮತ್ತು ಏಕಾಗ್ರತೆ ಮುಖ್ಯ. ಆಯಾಯ ಭಾವನೆಗಳಿಗೆ ಸರಿಯಾಗಿ ನಮಗೆ ಆಯಾಯ ಭಗವಂತನ ರೂಪಗಳು ಮೂಡುತ್ತವೆ ಮತ್ತು ಪ್ರಭೆಯನ್ನು (ಔರ) ಕಾಣಬಹುದು."ಭಗವಂತನು ಭಕ್ತರು ಕೋರುವ ರೂಪ ಧರಿಸುವ; ಭಕ್ತನು ಪೂಜಿಸುವ ವಸ್ತುಗಳಲ್ಲಿ ನಿಲ್ಲುವ; ಭಗವಂತ,ಭಕ್ತನಿಗೆ ಸಾಕ್ಷಾತ್ಕಾರ ಪಡೆಯುವಂತೆ ಕೃಪೆ ತೋರುವ. ಇದು ಅನುಭವ ಸ್ಥರ ವಾಕ್ಕು.

ಇಲ್ಲಿ ಅಯಾಯ ದೇವತೆಯ ವಿಭೂತಿ ಅಥವಾ ಮಹಿಮೆಯನ್ನು ಏಕಾಗ್ರತೆಯಿಂದ ಹೊಗಳಿ, ಕೊಂಡಾಡಿ, ಸಂತೋಷ ಮತ್ತು ಶಾಂತಿಯನ್ನು ಪಡೆಯುವುದೇ ಪೂಜೆ, ನಾಮಾರ್ಚನೆ ಮತ್ತು ಪಾರಾಯಣದ ಉದ್ಧೇಶ. ಇಲ್ಲಿ ಎಲ್ಲರಿಗೂ ಅನುಭವವಾಗಿರಬೇಕು, "ನಮ್ಮ ತಂದೆ ತಾಯಿಯರ ಬಗ್ಗೆ ನಾವು ಬೇಕಾದಷ್ಟು ಹೇಳುತ್ತೇವೆ. ಅವರು ನಮಗಾಗಿ ಬಹಳ ಕಷ್ಟಪಟ್ಟರು, ನಮ್ಮ ವಿದ್ಯಾಭ್ಯಾಸಕ್ಕೆ ಬಹಳ ತ್ಯಾಗ ಮಾಡಿದ್ದಾರೆ, ಇತ್ಯಾದಿ, ಅವರ ಆ ತ್ಯಾಗವೇ, ನಾನು ಈ ಉನ್ನತ ಸ್ಥಾನಕ್ಕೆ ಬರಲು ಕಾರಣ" ಎಂದು ಹೇಳುವಾಗ ಅಲ್ಲಿ ಆನಂದ ಭಾಷ್ಪ ಬರುತ್ತದೆ. ಇದೇ ಅಂತರಾಳದ ಆನಂದ. ಅದೇ ರೀತಿ ನಾವು ಪೂಜೆ ಮಾಡುವಾಗ ಭಗವಂತನ ರೂಪವನ್ನು ಮನಸ್ಸಿನಲ್ಲಿ ಕಂಡುಕೊಂಡು ಮಾಡಿದರೆ, ಆ ಆನಂದವನ್ನು ಪಡೆಯ ಬಹುದು. ಪೂಜೆಯಲ್ಲಿ ಅರ್ಚನೆಗೆ ಮುಂಚೆ, ಪಾದದಿಂದ ತಲೆಯವರೆಗೆ, ಭಗವಂತನ ಆಕಾರವನ್ನು ಮನಸ್ಸಿನಲ್ಲಿ ರೂಪಿಸಿ ಕೊಳ್ಳಬೇಕು.

ನಾಮ ಅರ್ಚನೆ ಅಥವಾ ಪಾರಾಯಣ ಕಾಲದಲ್ಲಿ ಬೇಕಾಗಿರುವುದು ಎಲ್ಲಕ್ಕಿಂತ ಮಿಗಿಲಾಗಿ ಮನಸ್ಸಿನ ಏಕಾಗ್ರತೆ, ಸಮರ್ಪಣ ಭಾವನೆ ಮತ್ತು ಭಕ್ತಿ ಮತ್ತು ಸ್ವಚ್ಛ ಉಚ್ಚಾರಣೆ. ಇದರಿಂದ ದೇಹದಲ್ಲಿ ಉಸಿರಾಟದ ನಿಯಂತ್ರಣ (ಪ್ರಾಣಾಯಾಮ ಕ್ರಿಯೆ) ಬರುತ್ತದೆ. ಅರ್ಚನೆ ಮಾಡುವಾಗ, ನಮಗೆ, ದೇವ ಅಥವಾ ದೇವಿಯ ಮೂರ್ತಿ ಕಣ್ಣಿಗೆ ಕಾಣುತ್ತದೆ. ಕೆಲವರಿಗೆ ಇದರ ಅನುಭವ ಆಗಿರುತ್ತದೆ. ಇದೇ ರೀತಿ ಹೋಮ ಮಾಡುವಾಗ,ಕುಂಡದಲ್ಲಿ ಹೋಮದಲ್ಲಿ ಆಹ್ವಾನಿಸಿದ ದೇವತೆಯ ಆಕೃತಿ ಕಾಣುವುದು ಸಾಮಾನ್ಯವಾದುದು.

**ಮಂತ್ರ: –**

ನಮಗೆ ಋಷಿಗಳು ಕೊಟ್ಟಿರುವ ವೇದ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು,ಮತ್ತು ವೇದ ಮಂತ್ರವನ್ನು ಭಕ್ತಿಶ್ರದ್ಧೆಗಳಿಂದ ಸರಿಯಾಗಿ ಪಠಿಸಿದರೆ, ಅದರ ಫಲ ಸಂದೇಹವಿಲ್ಲದೆ ಲಭಿಸುತ್ತದೆ.

"ಶ್ರೀ ಗಣಪತ್ಯಥರ್ವಶೀರ್ಷ" ಮಂತ್ರದಿಂದಲೂ ಕೂಡ, ನಾವು ಫಲವನ್ನು ಪಡೆಯಬಹುದು. ಫಲಶೃತಿಯಂತೆ ಮಾಡಿದರೆ, ಫಲ ಖಂಡಿತ. ಕೆಲವು ಮಂತ್ರಗಳ ವಿಷಯವನ್ನು ಕೆಳಗೆ ಕೊಡಲಾಗಿದೆ.

ಅನೇನ ಗಣಪತಿಮಭಿಷಿಂಚತಿ । ಸ ವಾಗ್ಮೀ ಭವತಿ । ಚತುರ್ಥ್ಯಾಮನಶ್ನಞ್ಜಪತಿ । ಸ ವಿದ್ವಾನ್ಭವತಿ।

...ಯೋ ಮೋದಕಸಹಸ್ರೇಣ ಯಜತಿ। ಸ ವಾಂಛಿತ ಫಲಮವಾಪ್ನೋತಿ।...... ಸ ಸರ್ವವಿದ್ಭವತಿ ಸ ಸರ್ವವಿದ್ಭವತ್ಯ ಏವಂ ವೇದ॥

ಸಹಸ್ರ ಮೋದಕದಿಂದ ಹೋಮ ಮಾಡಿದರೆ, ನಮ್ಮ ಇಷ್ಟಾರ್ಥ ನೆರವೇರುತ್ತದೆ, ಇತ್ಯಾದಿ.

ಪರ್ಜನ್ಯ ಮಂತ್ರ ಶ್ರದ್ದೆಯಿಂದ ಸಾಮೂಹಿಕವಾಗಿ ಜಪ ಮಾಡಿದರೆ ಮಳೆ ಬರುತ್ತದೆ. ಇದು ಹಿಂದಿನಿಂದ ಬಂದಿರುವ ವಿಷಯ ಎಲ್ಲರಿಗೂ ತಿಳಿದಿದೆ. "ಪರ್ಜನ್ಯಾಯ ಪ್ರಗಾಯತ.... ಪರ್ಜನ್ಯಃಪುರುಷೀಣಾಮ್"(ಅರುಣ ಪ್ರಶ್ನದ ೧೨೦ ನೇ ಮಂತ್ರ). ಈ ಜಪ ಸಾಮೂಹಿಕವಾಗಿ ಸಂಕಲ್ಪ ಪೂರ್ವಕವಾಗಿ ಮಾಡಿದರೆ, ಒಳ್ಳೆಯ ಮಳೆಯಾಗುತ್ತಿದೆ.

ಓಂ ತ್ರ್ಯಂಬಕಂ ಯಜಾಮಹೇ ಸುಗಂಧೀಂ ಪುಷ್ಟಿ ವರ್ಧನಮ್।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮು ಕ್ಷೀಯ ಮಾಮೃತಾತ್॥

ಈ ಮೃತ್ಯುಂಜಯ ಮಹಾ ಮಂತ್ರದ ಅಂತರಾರ್ಥ – ಏನೇ ಇರಲಿ, ಈ ಮಂತ್ರವನ್ನು ಭಕ್ತಿ ಮತ್ತು ನಂಬಿಕೆಯಿಂದ ನಿರ್ಧಿಷ್ಟ ಸಂಖ್ಯೆಯಲ್ಲಿ ಜಪ ಮಾಡುವುದರಿಂದ, ಭಯ, ಅಪಘಾತ, ಅಪಮೃತ್ಯು ನಿವಾರಣೆಯಾಗುತ್ತದೆ. ಇದು ಎಲ್ಲರಿಗೂ ತಿಳಿದಿದೆ.ಉಗ್ರ ಖಾಯಿಲೆಗಳು ಕೂಡ ಶಮನವಾಗುತ್ತದೆ ಎಂಬುದು ಪ್ರಸಿದ್ಧ ವೈದ್ಯರ ಅನುಭವ.ಈ ಮಂತ್ರದಿಂದ ಹೋಮಾದಿಗಳನ್ನು ಕೂಡ ಮಾಡುತ್ತಾರೆ.

ಇನ್ನೂ ಅನೇಕ ಮಂತ್ರಗಳಾದ ''ಗಾಯತ್ರೀ'' "ಇಂದ್ರಾಕ್ಷೀ" "ದಿಷ್ಟಿ" "ಉಳುಕು" ಮಂತ್ರಗಳು, ಇತ್ಯಾದಿ. ಈ ಮಂತ್ರಗಳನ್ನು, ನಾವು ಸಿದ್ಧಿಸಿಕೊಳ್ಳಬೇಕು. ಈ ಪ್ರಭಾವವು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿದೆ. ಮಂತ್ರಗಳನ್ನು ಹೇಳುವಾಗ ಸ್ವಚ್ಛವಾದ ಮತ್ತು ಸರಿಯಾದ ಉಚ್ಚಾರಣೆ ಅತ್ಯಗತ್ಯ.ತಪ್ಪು ಉಚ್ಚಾರಣೆಯಿಂದ ಅನುಕೂಲಕ್ಕಿಂತ, ಅನಾನುಕೂಲವೇ ಹೆಚ್ಚು ಬರುವುದು. ಉದಾಹರಣೆಗೆ, ಶ್ರೀ ಸೂಕ್ತದಲ್ಲಿ, "ಜ್ಯೇಷ್ಠಾಮಲಕ್ಷ್ಮೀಂ ನಾಶಯಾಮ್ಯಹಮ್" ಅನ್ನುವ ಬದಲು "ಲಕ್ಷ್ಮೀಮ್ ನಾಶಯಾಮ್ಯಹಮ್;' ಅಂದರೆ ಅದರ ಅರ್ಥವೇ ಬೇರೆ ಮತ್ತು ಫಲವೇ ಬೇರೆ. ಇಲ್ಲಿ ಸ್ವಚ್ಚ ಉಚ್ಚಾರಣೆ ಅತ್ಯಗತ್ಯ.ಆದರೆ ಈಗಿನ ಪರಿಸ್ಥಿತಿಯಲ್ಲಿ, ಮಾಡುವವರು ಮತ್ತು ಮಾಡಿಸುವವರಲ್ಲಿ, ಶ್ರದ್ಧೆ ಮತ್ತು



ಭಕ್ತಿ ಕಡಿಮೆಯಿರುವುದರಿಂದ, ನಮಗೆ ಅದು ಫಲದಾಯಕವಾಗಿರುವುದಿಲ್ಲ. ಇದು ಮಂತ್ರ ದೋಷವಲ್ಲ ಇದು ನಮ್ಮಲ್ಲಿರುವ ನ್ಯೂನ್ಯತೆ ಮಾತ್ರ ಎಂದು ತಿಳಿಯಬೇಕು. ಈಗ, ನಾವು ಎಲ್ಲವನ್ನೂ "ಕಮರ್ಷಿಯಲ್"ದೃಷ್ಟಿಯಿಂದ ನೋಡುತ್ತಿದ್ದೇವೆ ಎಂದು ನನ್ನ ಅನಿಸಿಕೆ.

### ನಾಮಾರ್ಚನೆ ಮತ್ತು ಪಾರಾಯಣ

ನಾವು ಯಾತ್ರಾಸ್ಥಳಗಳಿಗೆ ಹೋದಾಗ ದೇವರ ಸನ್ನಿಧಿಯಲ್ಲಿ ಅರ್ಚನೆಯನ್ನು ಮಾಡಿಸಲು ತುಂಬಾ ಕಾತುರರಾಗಿರುತ್ತೇವೆ ಮತ್ತು ಅರ್ಚನೆಯ ಪ್ರಸಾದಕ್ಕೆ ಬಹಳ ಮಹತ್ವವನ್ನು ಕೊಡುತ್ತೇವೆ. ಕಾರಣ, ಅಲ್ಲಿಯ ದೇವ ಸನ್ನಿಧಿ ಮತ್ತು ಅಲ್ಲಿಯ ಪಾವಿತ್ರತೆ. ನಾಮಾರ್ಚನೆಯಲ್ಲಿ ವಿವಿಧ ರೀತಿಯ ಪದ್ಧತಿಗಳಿವೆ. ಅದರಲ್ಲಿ, ದೇವ, ದೇವಿಯರಿಗೆ ಅಷ್ಟೋತ್ತರ,- ೧೦೮ ನಾಮಾವಳಿ, ತ್ರಿಶತಿ - ೩೦೦ ನಾಮಾವಳಿ, ಸಹಸ್ರನಾಮ - ೧೦೦೦ ನಾಮಾವಳಿ, ಇತ್ಯಾದಿ. ಇಲ್ಲಿ ನಾಮದ ಮುಂದೆ "ಓಂ" ಸೇರಿಸಿಕೊಂಡು ಹೇಳಬೇಕು. ಇಲ್ಲಿ ನಾಮದ ಸಂಖ್ಯೆ ಮುಖ್ಯವಲ್ಲ, ನಾವು ಎಷ್ಟು ಕಾಲ, ಏಕಾಗ್ರತೆ ಮತ್ತು ಭಕ್ತಿಯಿಂದ ನಾಮ ಉಚ್ಚಾರಣೆಯನ್ನು ಮಾಡಿದೆವು ಮತ್ತು ಇದರಿಂದ ಪಡೆದುಕೊಂಡ ಶಾಂತಿ, ನೆಮ್ಮದಿ ಮತ್ತು ತೃಪ್ತಿ ಬಹಳ ಮುಖ್ಯ.ಮಂತ್ರ ಅಥವಾ ನಾಮ ಜಪಕ್ಕೆ, ಯಾವ ರೀತಿಯ ತಡೆಗಳು ಇಲ್ಲ, ಯಾರು ಬೇಕಾದರು, ಕೆಲವು ನಿಯಮಗಳನ್ನು ಪಾಲಿಸಿ, ಮಾಡಿದರೆ ಅದರ ಪರಿಣಾಮ ಅಪಾರ. ಆದರೆ ಕೆಲವು ಮಂತ್ರಗಳನ್ನು ಕೆಲವು ನಿರ್ಧಿಷ್ಟವಾದ ರೀತಿಯಲ್ಲಿ ಮಾಡಿದರೆ ಫಲಕಾರಿಯಾಗುತ್ತದೆ.

ವಾಚಿಕ - ಕಿವಿಯಿಂದ ಕೇಳುವಂತೆ ಜಪಿಸುವುದು.

ಉಪಾಮ್ಶು - ಪಿಸುದನಿಯಲ್ಲಿ ಜಪಿಸುವುದು

ಮಾನಸ - ಮನಸ್ಸಿನಲ್ಲಿ ಜಪಿಸುವುದು

ನಾವು ಜಪ ಮಾಡುವ ಯಾವ ನಾಮವೇ ಆಗಲಿ ಅದು ಗುರುವಿನ ಮೂಲಕ ಕಲಿತು, ಅದನ್ನು ಜಪ ಮಾಡಿದರೆ ಅದು ಒಳ್ಳೆಯ ಫಲವನ್ನು ಕೊಡುತ್ತದೆ. ಜಪ ಎಂದರೆ ನಾಮದ ಸತತ ಉಚ್ಚಾರಣೆ. ನಾಮಗಳು ಅಥವಾ ಮಂತ್ರಗಳು ವಿವಿಧವಾಗಿವೆ. ಕೆಲವು ಮಂತ್ರ ದುಷ್ಟಶಕ್ತಿಗಳನ್ನು ತೊಲಗಿಸಲು (ಕಾಮಾಲೆ, ದೃಷ್ಟಿ, ಉಳುಕು ನಿವಾರಣೆ ಇತ್ಯಾದಿ) ಈ ಮಂತ್ರ ಸಿದ್ಧಿಗಾಗಿ, ಗ್ರಹಣ ಕಾಲದಲ್ಲಿ ಪಠಣೆ ಮಾಡುವ ಪದ್ಧತಿಯು ರೂಢಿಯಲ್ಲಿದೆ. ನಾಮಜಪದಲ್ಲಿ ಸಂಖ್ಯೆ ಕೂಡ ಮುಖ್ಯ. ೧೦, ೧೨,೨೮,೧೦೮ ಪ್ರಚಲಿತವಾಗಿದೆ, ಸಂಖ್ಯೆಯ ಎಣಿಕೆಗೆ, ಜಪ ಮಾಲೆ - ಸ್ಪಟಿಕ, ರುದ್ರಾಕ್ಷಿ, ತುಲಸಿಮಾಲೆ, ಅವರವರ ಅನುಕೂಲದಂತೆ, ಸಂಖ್ಯೆಯ ಎಣಿಕೆಗೆ, ಜಪಮಾಲೆ - ಸ್ಪಟಿಕ, ರುದ್ರಾಕ್ಷಿ, ತುಲಸಿಮಾಲೆ, ಅವರವರ ಅನುಕೂಲದಂತೆ, ಉಪಯೋಗಿಸುವ ಸಂಪ್ರದಾಯ ಕೂಡ ಇದೆ. ಕೆಲವು ಮಂತ್ರಗಳ ಪಾವಿತ್ರತೆಯನ್ನು ಕಾಪಾಡಬೇಕು, ಕೆಲವುರು ಕೆಲವು ಮಂತ್ರಗಳನ್ನು (ಗಾಯತ್ರಿ ಮಂತ್ರ ),ಕರೆ ಘಂಟೆಗು (ಕಾಲಿಂಗ್ ಬೆಲ್) ಉಪಯೋಗಿಸುವ ವಾಡಿಕೆಯನ್ನು ನೋಡಿದ್ದೇವೆ.

ಅರ್ಚನೆ ಕಾಲದಲ್ಲಿ ವಿವಿಧ ಪದ್ಧತಿಗಳು ಜಾರಿಯಲ್ಲಿದೆ. ಇಷ್ಟದೇವತೆ ಮತ್ತು ಕುಲದೇವತೆಯ ನಾಮಾರ್ಚನೆಯ ಜೊತೆಗೆ ಆಯಾಯ ವಾರದ ಅಧಿದೇವತೆಯ ಅರ್ಚನೆ. ಸೋಮವಾರ - ಶಿವ; ಮಂಗಳವಾರ - ಸುಬ್ರಹ್ಮಣ್ಯ; ಬುಧವಾರ - ವಿಷ್ಣು; ಗುರುವಾರ - ಗುರುಗಳಿಗೆ; ಶುಕ್ರವಾರ - ದೇವಿ; ಇತ್ಯಾದಿ. ಇದರ ಜೊತೆಗೆ, ಅರ್ಚನೆಗೆ ಉಪಯೋಗಿಸುವ ಪತ್ರೆಗಳು ಕೂಡ ಅಷ್ಟೆ ಮುಖ್ಯ, ಶಿವನಿಗೆ - ಬಿಲ್ವಪತ್ರೆ, ಗಣೇಶನಿಗೆ - ಧರ್ವ; ಸುಬ್ರಹ್ಮಣ್ಯನಿಗೆ - ತುಳಸಿ, ದೇವಿಗೆ ಕುಂಕುಮ ಅರ್ಚನೆ, ಬಹಳ ಮುಖ್ಯ, ಇಲ್ಲಿ ಮುದ್ರೆಗಳನ್ನು ಪಾಲಿಸಿದರೆ ಪರಿಣಾಮ ಅಪಾರ, ಹೋಮಗಳಲ್ಲಿ ಕೂಡ, ಮುದ್ರೆಗೆ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಈ ಮುದ್ರೆಗಳು ಕೂಡ, ದೇಹದ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆ. ನಾವು ಉಡುವ ವಸ್ತ್ರ, ಅದರ ಬಣ್ಣ, ಕೂಡುವ ಜಾಗ ಮತ್ತು ಆಸನವು ಕೂಡ ನಮ್ಮ ಮನಸ್ಸಿನ ಮೇಲೆ ಬಹಳಷ್ಟು ಪರಿಣಾಮವನ್ನು ಬೀರುತ್ತದೆ.

ಸೋಮವಾರದಂದು ರುದ್ರ, ಬುಧ/ ಶನಿವಾರದಂದು, ವಿಷ್ಣು ಸಹಸ್ರನಾಮ/ ಹನುಮನಿಗೆ ಸಂಬಂಧ ಪಟ್ಟಂತಹ ಸ್ತೋತ್ರ, ಶುಕ್ರವಾರದಂದು, ಲಲಿತಾ ಸಹಸ್ರನಾಮ ಸ್ತೋತ್ರ ಪಾರಾಯಣ. ಈ ಕೆಲವು ನಾಮ ಪಾರಾಯಣ ನಿಯಮ ಪಾಲನೆಯಿಂದ ಮಾಡಿದರೆ, ನಮ್ಮಲ್ಲಿ ವಿಶೇಷವಾದ ಸ್ಪಂಧನ (ವೈಬ್ರೇಷನ್) ಮತ್ತು ವಾತಾವರಣದಲ್ಲಿ ಕಂಪನ ಉಂಟಾಗುತ್ತದೆ. ಆರಾಧಕರ ಮೇಲೆ ಅಧಿಕವಾದ ಪ್ರಭೆ (ಔರ) ಕಾಣುತ್ತದೆ. ಇದರ ಜೊತೆಗೆ, ಪಾರಾಯಣ ಮಾಡುವ ಸಂದರ್ಭದಲ್ಲಿ ಎಷ್ಟೇ ವೇಗವಾಗಿ ಉಚ್ಚಾರಣೆ ಮಾಡಿದರೂ, ದೇಹಕ್ಕೆ ಆಯಾಸ ಅಥವಾ ಮನಸ್ಸಿಗೆ ಕಳವಳ ಉಂಟಾಗುವುದಿಲ್ಲ. ಇದಕ್ಕೆ ಕಾರಣ,ನಾಮದ ಮಹಿಮೆ. ಇದೇ ರೀತಿ, ಉಚ್ಚಸ್ವರದಲ್ಲಿ ಮತ್ತು ಸ್ವಚ್ಛವಾಗಿ ರುದ್ರ ಪಾರಾಯಣ ಮಾಡುವಾಗ ಅದೇ ರೀತಿಯ ಅನುಭವ

ವಾಗುತ್ತದೆ. ಅರ್ಚನೆ, ನಾಮಪಾರಾಯಣ ವಿನಹ, ಇದೇ ವೇಗದಲ್ಲಿ ನಾವು ಮಾತು ಮತ್ತು ಜಗಳವಾಡಿದರೆ, ಮನಸ್ಸಿನ ಉದ್ವೇಗ ಜಾಸ್ತಿ ಯಾಗಿ ರಕ್ತದ ಒತ್ತಡ ಮತ್ತು ಮನಸ್ಸಿನ ಮೇಲೆ ದುಷ್ಪರಿಣಾಮ ಆಗುವ ಸಾಧ್ಯತೆ ಹೆಚ್ಚು, ನಾಮಪಾರಾಯಣ ದೇಹದ ಆರೋಗ್ಯ, ಮನಸ್ಸಿನ ಶಾಂತಿ ಮತ್ತು ನೆಮ್ಮದಿಗೆ ಕಾರಣವಾಗುತ್ತದೆ. ಇದರ ಫಲವು ಹೆಚ್ಚು.

ಇದಕ್ಕಾಗಿಯೇ, ನಮ್ಮ ಗುರುಗಳು, ದಾಸರು, ಸಂತರು, ನಾಮದ ಮಹಿಮೆಯನ್ನು ವಿಶೇಷವಾಗಿ ಕೊಂಡಾಡಿದ್ದಾರೆ.

ಶಂಕರರು-ಭಜಗೋವಿಂದ ಸ್ತೋತ್ರದಲ್ಲಿ - ಗೋವಿಂದ ನಾಮ ಸ್ಮರಣೆ ಮಾಡು, ಎಂದಿದ್ದಾರೆ.

ಪುರಂದರದಾಸರು - ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಎಂದಿದ್ದಾರೆ.

ತ್ಯಾಗರಾಜರು - ರಾಮ ನಿ ನಾಮಮು ಏಮಿ ರುಚಿರಾ, ಎಂತ ರುಚಿರಾ ಎಂದಿದ್ದಾರೆ,

ಇದೆ ರೀತಿ, ಬೇರೆ ಬೇರೆ ಸಂತರು, ನಾಮದ ಮಹಿಮೆಯ ಬಗ್ಗೆ ತಮ್ಮ ಅನುಭವವನ್ನು ಹಾಡು ಮತ್ತು ಕೀರ್ತನೆಗಳಲ್ಲಿ ಹೊಗಳಿದ್ದಾರೆ . ರಾಮ ನಾಮದ ಮಹಿಮೆಯಿಂದ ವಾನರರು ಸೇತುವೆ ಕಟ್ಟಿದ ವಿಷಯ. ಪೂಜೆ, ಧ್ಯಾನ, ಅರ್ಚನೆ, ಜಪ ಇತ್ಯಾದಿ ಮಾಡುವುದು ನಮ್ಮ ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಂಡು ಶಾಂತಿ ಪಡೆಯುವ ಉದ್ದೇಶ ಮಾತ್ರ. ದೇವರಿಗೆ ನಮ್ಮ ಪೂಜೆ ಅರ್ಚನೆ ಬೇಕಿಲ್ಲ.

**ತಂತ್ರ -**

ತಂತ್ರ ಅಂದರೆ ಕ್ರಮ.ತಂತ್ರಗಳು, ಆಯಾಯ ಸಮಯಕ್ಕೆ ಅನುಗುಣವಾಗಿ ಬದಲಾವಣೆ ಆಗುತ್ತದೆ. ಘಂಟಾನಾದ, ಕಲಶಕ್ಕೆ ಇಡುವ ಗಂಧ, ಮತ್ತು ನೈವೇದ್ಯಕ್ಕೆ ಹಾಕುವ ಮಂಡಲ ಉಪ ಯೋಗಿಸುವ ಅಕ್ಷತೆಯ ಬಣ್ಣ, ಇತ್ಯಾದಿ.ಎಲ್ಲವು ಸಂದರ್ಭಕ್ಕೆ ಅನುಗುಣವಾಗಿ ಬದಲಾಗುತ್ತದೆ.

- ಸಾಮಾನ್ಯವಾಗಿ ಉಟ್ಟ ಮತ್ತು ಒದ್ದೆ ಬಟ್ಟೆಯಲ್ಲಿ ಪೂಜೆ ಮಾಡಬಾರದು.

- ಘಂಟಾನಾದವು ಕೂಡ, ಪ್ರಾರಂಭದಲ್ಲಿ ನಿಧಾನ ವಾಗಿಯೂ,ಮಧ್ಯದಲ್ಲಿ ಸ್ವಲ್ಪವೇಗವಾಗಿಯೂ ಮತ್ತು ಕೊನೆ ಯಲ್ಲಿ ನಿಧಾನವಾಗಿಯೂ ಮಾಡಬೇಕು (ರೈಲಿನ ಚಲನೆ ಯಂತೆ)

- ಧೂಪವನ್ನು ದೇವರ ಪಾದ, ತ್ರಿವರ್ತಿ ಆರತಿಯನ್ನು ಮುಖ,ಮತ್ತು ನೀರಾಜನವನ್ನು (ಕರ್ಪೂರ) ಪಾದಕ್ಕೆ, ಹೃದಯಕ್ಕೆ, ಮುಖಕ್ಕೆ ಮತ್ತು ಪಾದದಿಂದ ಶಿರಸ್ಸಿನವರೆಗೆ ಮೂರು ಬಾರಿ ಮಾಡಬೇಕು;

- ಹಣೆಗೆ ಲಾಂಛನವಿಲ್ಲದೆ ಪೂಜೆ ಮಾಡಬಾರದು. ಅವರವರ ಲಾಂಚನಗಳನ್ನು ಧರಿಸಬೇಕು.

- ಶುಭ ಕಾರ್ಯಗಳು ಮತ್ತು ಪೂಜೆಗಾಗಿ ಗಂಧವು, ಸ್ವಲ್ಪ ಅರಿಶಿನ ಗಂಧ ಮಿಶ್ರವಾಗಿರಬೇಕು. ಗಂಧ ತೇಗೆದನಂತರ, ಸಾಣೆ ಕಲ್ಲಿನ ಮೇಲೆ ಗಂಧದ ಕೊರಡನ್ನು ಇಡಬಾರದು.

- ಪೂಜೆ ಆದ ಮೇಲೆ ಸ್ವಲ್ಪ ಹೊತ್ತು ಕಣ್ಣು ಮುಚ್ಚಿ, ಆ ವಾತಾವರಣವನ್ನು, ನಮ್ಮ ಮನಸ್ಸಿನಲ್ಲಿ ಮೆಲಕು ಹಾಕಬೇಕು. ಇದೇ ಸಂಪ್ರದಾಯ, ನಾವು ದೇವಾಲಯಗಳಿಗೆ ಹೋಗಿ ದರ್ಶನ ವಾದಮೇಲೆ, ಸ್ವಲ್ಪ ಹೊತ್ತು ಕೂತು ಬನ್ನಿ ಎಂದು ಹಿರಿಯರು ಹೇಳುವುದು. ಅಲ್ಲಿನ ಪೂಜೆ ಮತ್ತು ಇತರ ವಾತಾವರಣವನ್ನು ಮನಸ್ಸಿನಲ್ಲಿ ತುಂಬಿಕೊಂಡು, ನಮಗೆ ಬೇಕಾದಾಗ ಅದನ್ನು ಮನಸ್ಸಿನಲ್ಲಿ ನೋಡಿ ಆನಂದಿಸಬಹುದು (ರಿಟ್ರೀವ್). ಸಂಪ್ರ ದಾಯಗಳು ಬೇರೆ, ಬೇರೆ ಇರಬಹುದು.ಅದನ್ನು ಹಿರಿಯರು ಹೇಳಿಕೊಟ್ಟಿರುವ ರೀತಿ, ನಾವು ರೂಢಿಸಿಕೊಳ್ಳಬೇಕು.

ಪುನಃ ಪೂಜೆಯನಂತರ, ನಾವು ಮಾಡಿದ ಪೂಜೆ, ಪಾರಾಯಣ, ಮತ್ತು ಭಜನೆಯನಂತರ,"ಸಮರ್ಪಣೆ" ಮಾಡುವ ರೂಢಿಯಿದೆ. -

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪಃ ಪೂಜ ಕ್ರಿಯಾದಿಷು । ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್। ಮಂತ್ರಹೀನಂ ಕ್ರಿಯಾಹೀನಂ ಭಕ್ತಿ ಹೀನಂ ಮಹೇಶ್ವರ ।

ಯತ್ಪೂಜಿತಂ ಮಯಾ ದೇವ ಪರಿಪೂರ್ಣಂ ತದಸ್ತು ಮೇ ॥ ಅನೇನ ಮಯಾ ಕೃತ

ಧ್ಯಾನಾವಾಹಾನಾದಿ ಪೂಜನೇನ ಭಗವಂತಃ ಸರ್ವಾತ್ಮಕಾಃ ಶ್ರೀ ಸಾಂಬ ಸದಾಶಿವಪಂಚಾಯತನ ದೇವತಾಃ ಸುಪ್ರೀತಾಃ ಸುಪ್ರಸನ್ನಾ ವರದಾಃ ಭವಂತು॥

ಎಂದು ಹೇಳಿ ಭಗವಂತನಿಗೆ ಅರ್ಪಣೆ, ಮಾಡುತ್ತೇವೆ. ಈ ಅರ್ಪಣೆ ಅವನಲ್ಲಿ ಶೇಖರಣೆಯಾಗಿರುತ್ತದೆ. ನಮಗೆ ಯಾವಾಗ ಬೇಕು ಎಂಬುದು ಅವನಿಗೆ ಮಾತ್ರ ತಿಳಿದಿರುತ್ತದೆ. ಆಗವನು ನಮ್ಮನ್ನು ಕಾಪಾಡುತ್ತಾನೆ. ನಾವು ಅವನಲ್ಲಿ ಏನೂ ಕೇಳಬೇಕಾದದ್ದು ಇಲ್ಲ, ಅವನೇ ಅರಿತು ಕೊಡುತ್ತಾನೆ. ಇದು ದೈವ ಲೀಲೆ.

ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಮ್। ದೇಹಿ ಮೇ ಕೃಪಯಾ ಶಂಭೋತ್ವಯಿ ಭಕ್ತಿಮಚಂಚಲಾಮ್॥

ಎಂದು ಪ್ರಾರ್ಥನೆ ಮಾಡೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ



# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ (ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ಜೊತೆಗೆ ದೂರವಾಣಿ ಸಂಖ್ಯೆ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

( ದೂರವಾಣಿ ಸಂಖ್ಯೆಯನ್ನು ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಒ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ದು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ-ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.

ತಿರುಮಲ ತಿರುಪತಿ ದೇವಸ್ಥಾನಗಳು

# ನಾರಾಯಣವನಂ
# ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
# ಬ್ರಹ್ಮೋತ್ಸವಗಳು

**16-05-2019 ರಿಂದ 24-05-2019 ರ ವರೆಗೆ**

**16-05-2019 ಗುರುವಾರ**
ಹಗಲು: ಧ್ವಜಾರೋಹಣ
ರಾತ್ರಿ: ದೊಡ್ಡಶೇಷವಾಹನ

**17-05-2019 ಶುಕ್ರವಾರ**
ಹಗಲು: ಚಿಕ್ಕ ಶೇಷವಾಹನ
ರಾತ್ರಿ: ಹಂಸವಾಹನ

**18-05-2019 ಶನಿವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**19-05-2019 ಭಾನುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**20-05-2019 ಸೋಮವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**21-05-2019 ಮಂಗಳವಾರ**
ಹಗಲು:ಹನುಮದ್ವಾಹನ
ಸಾಯಂಕಾಲ : ವಸಂತೋತ್ಸವ
ರಾತ್ರಿ: ಗಜವಾಹನ

**22-05-2019 ಬುಧವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**23-05-2019 ಗುರುವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**24-05-2019 ಶುಕ್ರವಾರ**
ಹಗಲು: ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ



SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams 25-04-2019
Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

